# 1. ಕೃಷಿ ಆಯುಕ್ತಾಲಯ
# ಲೆಕ್ಕ ಶೀರ್ಷಿಕೆ: 2401-00-001-1-01

## 1. 2020-21ನೇ ಸಾಲಿನ ಕೃಷಿ ಉತ್ಪಾದನಾ ಕಾರ್ಯಕ್ರಮ

ಕೃಷಿ ಇಲಾಖೆ ನೈಸರ್ಗಿಕ ಸಂಪನ್ಮೂಲಗಳ ಹಾಗೂ ನೂತನ ತಂತ್ರಜ್ಞಾನದ ಸದ್ಬಳಕೆಯಿಂದ ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಧಾನ್ಯಗಳ ಬೇಡಿಕೆಯನ್ನು ಪೂರೈಸುವಲ್ಲಿ ಹಾಗೂ ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತದೆ.

ರಾಷ್ಟ್ರ ಹಾಗೂ ರಾಜ್ಯದ ಸಮಗ್ರ ಸ್ಥಳೀಯ ಉತ್ಪನ್ನಕ್ಕೆ ಕೃಷಿ ಕ್ಷೇತ್ರದ ಕೊಡುಗೆ ಕ್ಷೀಣಿಸುತ್ತಿದೆಯಾದರೂ ಕೃಷಿ ಒಂದು ದೊಡ್ಡ ಉದ್ಯೋಗ ಸೃಷ್ಟಿಸುವ ಚಟುವಟಿಕೆಯಾಗಿ ಮುಂದುವರೆದಿದೆ.

2015-16 ರಲ್ಲಿ ನಮ್ಮ ರಾಷ್ಟ್ರದ ನಿವ್ವಳ ಹಾಗೂ ಒಟ್ಟು ಸಾಗುವಳಿಯಾದ ವಿಸ್ತೀರ್ಣ ಕ್ರಮವಾಗಿ 141.00 ಹಾಗೂ 195.00 ದಶಲಕ್ಷ ಹೆಕ್ಟೇರ್ ಗಳ ಪೈಕಿ 2017-18 ರಲ್ಲಿ ಕರ್ನಾಟಕ ರಾಜ್ಯದ ನಿವ್ವಳ ಹಾಗೂ ಒಟ್ಟು ಸಾಗುವಳಿ ವಿಸ್ತೀರ್ಣ ಕ್ರಮವಾಗಿ 98.95 ಲಕ್ಷ ಹೆಕ್ಟೇರ್ ಹಾಗೂ 119.93 ಲಕ್ಷ ಹೆಕ್ಟೇರ್ ಗಳಷ್ಟು ಇರುತ್ತದೆ.

2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ ರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಪ್ರಮುಖ ಕೃಷಿ ಬೆಳೆಗಳ ಉತ್ಪಾದನೆ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

2013-14ನೇ ಸಾಲಿನಲ್ಲಿ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ ಒರಟು ಧಾನ್ಯಗಳ ಸೂರ್ಯಕಾಂತಿ ಉತ್ಪಾದನೆಯಲ್ಲಿ ಮಂಚೂಣಿಯಲ್ಲಿತ್ತು. ಮುಸುಕಿನ ಜೋಳ, ಜೋಳ ಹಾಗೂ ತೊಗರಿ ಉತ್ಪಾದನೆಯಲ್ಲಿ 2ನೇ ಸ್ಥಾನ ಹಾಗೂ ಕಬ್ಬು ಉತ್ಪಾದನೆಯಲ್ಲಿ 3ನೇ ಸ್ಥಾನದಲ್ಲಿತ್ತು. 2013-14ನೇ ಸಾಲಿನಲ್ಲಿ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ ಅಕ್ಕಿಯ ಇಳುವರಿಯಲ್ಲಿ 2ನೇ ಸ್ಥಾನ, ಸೋಯಾಅವರೆ ಮತ್ತು ಕಬ್ಬು ಇಳುವರಿಯಲ್ಲಿ 3ನೇ ಸ್ಥಾನ, ಜೋಳ, ಮುಸುಕಿನ ಜೋಳ ಹಾಗೂ ತೊಗರಿ ಇಳುವರಿಯಲ್ಲಿ 5ನೇ ಸ್ಥಾನ, ಸಜ್ಜೆ, ಶೇಂಗಾ, ಸೂರ್ಯಕಾಂತಿ ಹಾಗೂ ಹತ್ತಿಯ ಇಳುವರಿಯಲ್ಲಿ 7ನೇ ಸ್ಥಾನದಲ್ಲಿತ್ತು. ತದನಂತರದ 2014-15, 2015-16 ಹಾಗೂ 2016-17ರಲ್ಲಿ ರಾಜ್ಯದ ಬಹುತೇಕ ಭಾಗಗಳಲ್ಲಿ ಬರಗಾಲದ ಕಾರಣ ರಾಜ್ಯದ ಪ್ರಮುಖ ಬೆಳೆಗಳ ಸರಾಸರಿ ಇಳುವರಿಯಲ್ಲಿ ಕಡಿತ ಕಂಡು ಬಂದಿದೆ.

2017-18ನೇ ಸಾಲಿನಲ್ಲಿ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯವು ಕಬ್ಬು ಇಳುವರಿಯಲ್ಲಿ 1ನೇ ಸ್ಥಾನ, ಹತ್ತಿ 2ನೇ ಸ್ಥಾನ, ಸಜ್ಜೆ, ಮುಸುಕಿನ ಜೋಳ ಇಳುವರಿಯಲ್ಲಿ 4ನೇ ಸ್ಥಾನ, ಭತ್ತ 6ನೇ ಸ್ಥಾನ, ನೆಲಗಡಲೆ ಮತ್ತು ಸೂರ್ಯಕಾಂತಿ 8ನೇ ಸ್ಥಾನ ಹಾಗೂ ಕಡಲೆ ಬೆಳೆ ಇಳುವರಿಯಲ್ಲಿ 9ನೇ ಸ್ಥಾನದಲ್ಲಿತ್ತು.

## 2019-20ನೇ ಸಾಲಿನ ಮಳೆ ಹಾಗೂ ಕೃಷಿ ಉತ್ಪಾದನೆ:

### ಪೂರ್ವ ಮುಂಗಾರು:

ರಾಜ್ಯದಲ್ಲಿ ಏಪ್ರಿಲ್ ಹಾಗೂ ಮೇ ಮಾಹೆಯಲ್ಲಿ ಪೂರ್ವ ಮುಂಗಾರು ಸಾಮಾನ್ಯವಾಗಿದ್ದು ಸಾಮಾನ್ಯ ಮಳೆ 125 ಮೀ.ಮೀ ಸರಾಸರಿ ಮಳೆ 71 ಮೀ.ಮೀ ಆಗಿರುತ್ತದೆ.(ಶೇ.-43) ಪೂರ್ವ ಮುಂಗಾರು ಬೆಳೆಗಳ ಸಾಮಾನ್ಯ ಬಿತ್ತನೆಗೆ ಅನುಕೂಲವಾಗಿರುತ್ತದೆ. ಮೇ ಅಂತ್ಯದವರೆಗೆ ಸಾಮಾನ್ಯ ಬಿತ್ತನೆ ವಿಸ್ತೀರ್ಣ 3.41 ಲಕ್ಷ ಹೆಕ್ಟೇರ್ ಗೆ ಪ್ರತಿಯಾಗಿ 5.54 ಲಕ್ಷ ಹೆಕ್ಟೇರ್ ಬಿತ್ತನೆಯಾಗಿರುತ್ತದೆ.

### ನೈರುತ್ಯ ಮಾರುತ:

ರಾಜ್ಯದಲ್ಲಿ ನೈರುತ್ಯ ಮಾರುತ ಮಳೆಯ ಅವಧಿಯಲ್ಲಿ (ಜೂನ್-ಸೆಪ್ಟೆಂಬರ್) ರವರೆಗೆ ಸಾಮಾನ್ಯ ಮಳೆ 839 ಮೀ.ಮೀ ಪ್ರತಿಯಾಗಿ ವಾಸ್ತವಿಕ ಮಳೆ 977 ಮೀ.ಮೀ ಆಗಿರುತ್ತದೆ.(ಶೇ+16) ಜೂನ್ ಮಾಹೆಯಲ್ಲಿ ರಾಜ್ಯದ ಬಹುತೇಕ ಭಾಗಗಳಲ್ಲಿ ಸಾಮಾನ್ಯ ಮಳೆಯಾಗಿರುತ್ತದೆ ಹಾಗೂ ಸಾಮಾನ್ಯ ಮಳೆ 195 ಮೀ.ಮೀ.ಗೆ ಪ್ರತಿಯಾಗಿ 142 ಮೀ.ಮೀ.ರಷ್ಟು ಸರಾಸರಿ ಮಳೆಯಾಗಿರುತ್ತದೆ.

ಜುಲೈ ಮಾಹೆಯಲ್ಲಿ ದಕ್ಷಿಣ ಮತ್ತು ಉತ್ತರ ಒಳನಾಡಿನ ಬಹುತೇಕ ಭಾಗಗಳಲ್ಲಿ ಕಡಿಮೆ ಮಳೆಯಾಗಿರುತ್ತದೆ. ಸಾಮಾನ್ಯ ಮಳೆ 280 ಮೀ.ಮೀ.ಗೆ ಪ್ರತಿಯಾಗಿ 247 ಮೀ.ಮೀ.ರಷ್ಟು ಸರಾಸರಿ ಮಳೆಯಾಗಿರುತ್ತದೆ (12% ಕೊರತೆ). ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಡಿಮೆಯಿಂದ ಸಾಮಾನ್ಯ ಮಳೆಯಾಗಿರುತ್ತದೆ. ಜೂನ್ ಮತ್ತು ಜುಲೈನಲ್ಲಿ ಕಡಿಮೆ ಮಳೆ ಮತ್ತು ತೇವಂಶದ ಕಾರಣ ರಾಜ್ಯದ 18 ಜಿಲ್ಲೆಗಳ 49 ತಾಲ್ಲೂಕುಗಳನ್ನು ಕಂದಾಯ ಇಲಾಖೆಯ ಪ್ರಕಟಣೆಯಂತೆ ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

ಆಗಸ್ಟ್ ಮಾಹೆಯಲ್ಲಿ ಸಾಮಾನ್ಯ ಮಳೆ 206 ಮೀ.ಮೀಗೆ ಪ್ರತಿಯಾಗಿ ವಾಸ್ತವಿಕ ಮಳೆಯ ಪ್ರಮಾಣ 370 ಮೀ.ಮೀ.ರಷ್ಟು ಆಗಿರುತ್ತದೆ (ಶೇ.+80). ಆಗಸ್ಟ್ ಮಾಹೆಯಲ್ಲಿ ಬಿದ್ದಂತಹ ಹೆಚ್ಚಿನ ಮಳೆಯಿಂದಾಗಿ ರಾಜ್ಯದ 22 ಜಿಲ್ಲೆಗಳ 103 ತಾಲ್ಲೂಕುಗಳನ್ನು ಕಂದಾಯ ಇಲಾಖೆಯ ಪ್ರಕಟಣೆಯಂತೆ ಅತೀವೃಷ್ಠಿ/ ಪ್ರವಾಹ ಪೀಡಿತವೆಂದು ಘೋಷಿಸಲಾಗಿದೆ.

### ಹಿಂಗಾರು:

ಸೆಪ್ಟೆಂಬರ್ ಮಾಹೆಯಲ್ಲಿ ನೈರುತ್ಯ ಮಾರುತ ರಾಜ್ಯದಲ್ಲಿ ಸಾಮಾನ್ಯಕ್ಕಿಂತ ಹೆಚ್ಚಾಗಿ ಮುಂದುವರೆದಿತ್ತು. ಸಾಮಾನ್ಯ ಮಳೆ 159 ಮೀ.ಮೀ.ಗೆ ಪ್ರತಿಯಾಗಿ ವಾಸ್ತವಿಕ ಮಳೆಯ ಪ್ರಮಾಣ 219 ಮೀ.ಮೀ.ರಷ್ಟಿದ್ದು ಶೇಕಡ 38ರಷ್ಟು ಹೆಚ್ಚಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳ ಪ್ರಸ್ತವಿತ ಬಿತ್ತನೆ ಗುರಿ 31.48 ಲಕ್ಷ ಹೆಕ್ಟೇರ್ ಪ್ರತಿಯಾಗಿ 27.66 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ(ಶೇ.88ರಷ್ಟು). ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ಬಿದ್ದಂತಹ ಹೆಚ್ಚಿನ ಮಳೆಯಿಂದಾಗಿ ರಾಜ್ಯದ 18 ಜಿಲ್ಲೆಗಳ 79 ತಾಲ್ಲೂಕುಗಳನ್ನು ಕಂದಾಯ ಇಲಾಖೆಯ ಪ್ರಕಟಣೆಯಂತೆ ಅತೀವೃಷ್ಠಿ/ ಪ್ರವಾಹ ಪೀಡಿತವೆಂದು ಘೋಷಿಸಲಾಗಿದೆ.

## ಬೇಸಿಗೆ:

2019-20ನೇ ಸಾಲಿನಲ್ಲಿ ರಾಜ್ಯದಲ್ಲಿ, 31.03.2020ರ (1ನೇ ಜನವರಿ-31ನೇ ಮಾರ್ಚ್ 2020 ಅಂತ್ಯಕ್ಕೆ) ಅಂತ್ಯಕ್ಕೆ11.1 ಮೀ.ಮೀ. ಸಾಮಾನ್ಯ ಮಳೆಗೆ ಪ್ರತಿಯಾಗಿ 11.5 ಮೀ.ಮೀ ಆಗಿರುತ್ತದೆ.

ಬೇಸಿಗೆ ಹಂಗಾಮಿನಲ್ಲಿ ಕೃಷಿ ಬೆಳೆಗಳ ಪ್ರಸ್ತಾವಿತ ಬಿತ್ತನೆ ಗುರಿ 5.50 ಲಕ್ಷ ಹೆಕ್ಟೇರ್ ಪ್ರತಿಯಾಗಿ 5.05ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿರುತ್ತದೆ(ಶೇ.92ರಷ್ಟು). ಮೇಲೆ ಸೂಚಿಸಿದ ಅಂಶಗಳನ್ನು ಪರಿಗಣಿಸಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ 2ನೇ ಮುಂಗಡ ಅಂದಾಜಿನಂತೆ 2019-20ನೇ ಸಾಲಿನ ಕೃಷಿ ಬೆಳೆಗಳ ಉತ್ಪಾದನೆ ಈ ಕೆಳಕಂಡಂತೆ ನಿರೀಕ್ಷಿಸಲಾಗಿದೆ.

| ಬೆಳೆ/ಬೆಳೆ ಗುಂಪು | ಉತ್ಪಾದನಾ ಗುರಿ (ಲಕ್ಷ ಟನ್) | ನಿರೀಕ್ಷಿತ ಸಾಧನೆ (ಲಕ್ಷ ಟನ್) |
|---|---|---|
| ಏಕದಳಧಾನ್ಯಗಳು | 117.22 | 102.03 |
| ದ್ವಿದಳಧಾನ್ಯಗಳು | 22.53 | 17.37 |
| ಒಟ್ಟು ಆಹಾರ ಧಾನ್ಯಗಳು | 138.67 | 119.40 |
| ಎಣ್ಣೆಕಾಳುಗಳು | 14.71 | 10.73 |
| ಹತ್ತಿ (ಲಕ್ಷ ಬೇಲ್ ಗಳಲ್ಲಿ) | 16.58 | 14.75 |
| ಕಬ್ಬು | 400.00 | 396.00 |
| ತಂಬಾಕು | 0.72 | 0.77 |

### 2020-21ನೇ ಸಾಲಿನ ಕೃಷಿ ಉತ್ಪಾದನಾ ಕಾರ್ಯಕ್ರಮ:

2010-11 ರಿಂದ 2019-20ನೇ ಸಾಲಿನವರೆಗೆ ವಿವಿಧ ಹಂಗಾಮುಗಳಲ್ಲಿ ಕೃಷಿ ಬೆಳೆಗಳ ವಿಸ್ತೀರ್ಣ ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ವಿವಿಧ ಹಂಗಾಮುಗಳಲ್ಲಿ ಕೃಷಿ ಬೆಳೆಗಳಿಂದ ಆವರಿಸಿದ ವಿಸ್ತೀರ್ಣ ಪರಿಗಣಿಸಿ ಮತ್ತು 2020-21ನೇ ಸಾಲಿನಲ್ಲಿ ಸಕಾಲಿಕ/ ಸಮರ್ಪಕ ಹಂಚಿಕೆಯಾದ ಪೂರ್ವ ಮುಂಗಾರು, ನೈಋತ್ಯ ಮಾರುತ ಹಾಗೂ ಈಶಾನ್ಯ ಮಾರುತಗಳನ್ನು ಅಪೇಕ್ಷಿಸಿ ಮತ್ತು ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಉತ್ತಮ ಸಂಗ್ರಹಣೆ ನಿರೀಕ್ಷಿಸಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಕ್ರಮವಾಗಿ 73.00, 32.00 ಹಾಗೂ 5.00 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯುವ ಗುರಿಯನ್ನು ಪ್ರಸ್ತಾಪಿಸಲಾಗಿದೆ.

ಏಕದಳ, ದ್ವಿದಳ ಹಾಗೂ ಎಣ್ಣೆಕಾಳು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 110.00, 23.02 ಮತ್ತು 13.05 ಲಕ್ಷ ಟನ್ ಹಮ್ಮಿಕೊಳ್ಳಲಾಗಿದೆ. ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು ಮತ್ತು ತಂಬಾಕು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 13.89 ಲಕ್ಷ ಬೇಲ್, 400.00 ಲಕ್ಷ ಟನ್ ಹಾಗೂ 0.73 ಲಕ್ಷ ಟನ್ (0.63 ಲಕ್ಷ ಟನ್ VFC Tobacco ಹಾಗೂ 0.10 ಲಕ್ಷ ಟನ್ Beedi/ Chewing Tobacco) ಎಂದು ನಿಗಧಿಪಡಿಸಲಾಗಿದೆ. ಹಂಗಾಮುವಾರು ಕೃಷಿ ಬೆಳೆಗಳ ವಿಸ್ತೀರ್ಣ ಹಾಗೂ

ಉತ್ಪಾದನಾ ಗುರಿಯ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಂದ ಪ್ರಸ್ತಾಪಿಸಿರುವ ಜಿಲ್ಲಾವಾರು ಮತ್ತು ಹಂಗಾಮುವಾರು ಕೃಷಿ ಬೆಳೆಗಳ ವಿಸ್ತೀರ್ಣ ಗುರಿಯ ವಿವರಗಳನ್ನು ಅನುಬಂಧ-3ಎ, 3ಬಿ ರಲ್ಲಿ ನೀಡಲಾಗಿದೆ.

ಕೇಂದ್ರ ಸರ್ಕಾರ ಸಿರಿಧಾನ್ಯಗಳ ಉತ್ಪಾದನೆ ಹೆಚ್ಚಿಸುವ ಸಲುವಾಗಿ ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ ಯೋಜನೆಯಡಿಯಲ್ಲಿ 2020-21ನೇ ಸಾಲಿನಲ್ಲಿ "Nutri-Cereals" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಡಿ ಸಿರಿಧಾನ್ಯವಾರು ಆಯ್ಕೆಯಾಗಿರುವ ಜಿಲ್ಲೆಗಳು ಈ ಕೆಳಕಂಡಂತಿರುತ್ತದೆ

| **ರಾಗಿ** | **ಜೋಳ** | **ಸಜ್ಜೆ** | **ಇತರೆ(ಹಾರಕ,ಸಾಮೆ)** |
|---|---|---|---|
| ಬೆಂಗಳೂರು ನಗರ ಮತ್ತು ಗ್ರಾಮಾಂತರ | ಬಾಗಲಕೋಟೆ | ಬಾಗಲಕೋಟೆ | ಬಳ್ಳಾರಿ |
| ಚಾಮರಾಜನಗರ | ಬೆಳಗಾವಿ | ಬಳ್ಳಾರಿ | ಚಿತ್ರದುರ್ಗ |
| ಚಿಕ್ಕಬಳ್ಳಾಪುರ | ಬಳ್ಳಾರಿ | ಕಲಬುರಗಿ | ಕೊಪ್ಪಳ |
| ಚಿಕ್ಕಮಗಳೂರು | ಬೀದರ್ | ಕೊಪ್ಪಳ | ತುಮಕೂರು |
| ಚಿತ್ರದುರ್ಗ | ಚಾಮರಾಜನಗರ | ರಾಯಚೂರು | |
| ದಾವಣಗೆರೆ | ಚಿತ್ರದುರ್ಗ | ವಿಜಯಪುರ | |
| ಹಾಸನ | ದಾವಣಗೆರೆ | ಯಾದಗಿರಿ | |
| ಕೋಲಾರ | ಧಾರವಾಡ | | |
| ಮಂಡ್ಯ | ಗದಗ | | |
| ಮೈಸೂರು | ಕಲಬುರಗಿ | | |
| ರಾಮನಗರ | ಹಾವೇರಿ | | |
| ತುಮಕೂರು | ಕೊಪ್ಪಳ | | |
| | ರಾಯಚೂರು | | |
| | ವಿಜಯಪುರ | | |
| | ಯಾದಗಿರಿ | | |

ಸಿರಿಧಾನ್ಯಗಳ ಬೆಳೆಗಳಲ್ಲಿ ಹೆಚ್ಚಿನ ಇಳುವರಿ ಪಡೆಯಲು ಇಲಾಖೆಯು ಸೂಕ್ತ ಬಿತ್ತನೆ ಬೀಜ ತಳಿ ಆಯ್ಕೆ, ನೂತನ ಬೇಸಾಯ ತಾಂತ್ರಿಕತೆ ಹಾಗೂ ಪ್ರಾತ್ಯಕ್ಷತೆಗಳ ಮೂಲಕ ರೈತರಿಗೆ ಅಗತ್ಯ ಸಲಹೆ ನೀಡಬೇಕಾಗಿರುತ್ತದೆ.

2020-21ನೇ ಸಾಲಿನ ಉತ್ಪಾದನಾ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಅಂತರ ಬೆಳೆ, ಮಿಶ್ರ ಬೆಳೆ, Relay Crop ಮುಂತಾದ ಪದ್ಧತಿಗಳನ್ನು ಅಳವಡಿಸಿ ಬೆಳೆ ಸಾಂದ್ರತೆಯನ್ನು ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳಬೇಕಾಗಿದೆ.

## ಅನುಬಂಧ-1

## ರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಪ್ರಮುಖ ಕೃಷಿ ಬೆಳೆಗಳ ಉತ್ಪಾದನೆ ವಿವರಗಳು

| Production of Major Agricultural Crops - India & Karnataka | | | |
|---|---|---|---|
| **Unit: Lakh Tonnes, Cotton in lakh bales of 170 kg. lint** | | | |
| **Year: 2019-20** | | | |
| **Crop** | **All India # (kharif)** | **Karnataka * (kharif)** | **% Share of the State** |
| **1** | **2** | **3** | **4** |
| Rice | 100.35 | 27.08 | 26.98 |
| Wheat | - | - | - |
| Jowar | 1.85 | 2.02 | 108.18 |
| Bajra | 8.29 | 2.73 | 32.93 |
| Maize | 19.89 | 40.58 | 204.02 |
| Ragi | 1.59 | 10.69 | 672.32 |
| Small Millets & Barley | 0.38 | 0.28 | 73.68 |
| **Coarse Cereals** | **32.00** | **56.30** | **175.93** |
| **Total Cereals** | **132.35** | **83.38** | **62.99** |
| Tur (Red gram) | 3.54 | 8.65 | 244.35 |
| Gram (Bengal gram) | - | - | - |
| Urad (Black gram) | 2.43 | 0.26 | 10.69 |
| Moong (Green gram) | 1.42 | 0.87 | 61.26 |
| Other Pulses | 0.83 | 0.86 | 103.61 |
| **Total Pulses** | **8.23** | **10.64** | **129.28** |
| **Total Food grains** | **140.57** | **94.02** | **66.88** |
| Groundnut | 63.11 | 3.25 | 5.14 |
| Castor | 17.37 | 0.04 | 0.23 |
| Sesamum | 6.86 | 0.17 | 2.47 |
| Nigerseed | 0.83 | 0.01 | 1.20 |
| Rapeseed & Mustard | - | 0.002 | - |
| Linseed | - | - | - |
| Safflower | - | - | - |
| Sunflower | 0.67 | 0.61 | 91.04 |
| Soyabean | 135.05 | 3.14 | 2.32 |
| **Total Oilseeds** | **223.89** | **7.22** | **3.22** |
| Cotton | 322.67 | 14.53 | 4.50 |
| Sugarcane | 3777.66 | 396 | 10.48 |

# 1st Advance Estimates *Second Advance Estimates of DES.

| Year: 2018-19 | | | |
|---|---|---|---|
| Crop | All India# | Karnataka* | % Share of the State |
| 1 | 2 | 3 | 4 |
| Rice | 116.42 | 34.58 | 25.51 |
| Wheat | 102.19 | 1.63 | 1.59 |
| Jowar | 3.76 | 9.31 | 247.60 |
| Bajra | 8.61 | 1.77 | 20.55 |
| Maize | 27.23 | 37.77 | 138.70 |
| Ragi | 1.22 | 6.78 | 555.73 |
| Small Millets & Barley | 0.37 | 0.13 | 35.13 |
| **Coarse Cereals** | **42.95** | **57.42** | **133.69** |
| **Total Cereals** | **261.55** | **92.00** | **35.17** |
| Tur (Red gram) | 3.59 | 9.47 | 263.78 |
| Gram (Bengal gram) | 10.13 | 5.75 | 56.76 |
| Urad (Black gram) | 3.26 | 0.43 | 13.19 |
| Moong (Green gram) | 2.35 | 1.43 | 60.85 |
| Other Pulses | 2.51 | 1.38 | 54.98 |
| **Total Pulses** | **23.40** | **18.46** | **78.88** |
| **Total Food grains** | **284.95** | **110.46** | **38.76** |
| Groundnut | 66.95 | 3.97 | 5.92 |
| Castor | 12.15 | 0.02 | 0.16 |
| Sesamum | 7.55 | 0.16 | 2.11 |
| Nigerseed | 0.65 | 0.002 | 0.30 |
| Rapeseed & Mustard | 93.39 | 0.01 | 0.01 |
| Linseed | 1.59 | 0.003 | 0.18 |
| Safflower | 0.24 | 0.10 | 41.66 |
| Sunflower | 2.19 | 1.08 | 49.31 |
| Soyabean | 137.86 | 2.57 | 1.86 |
| **Total Oilseeds** | **322.57** | **7.92** | **2.45** |
| Cotton | 287.08 | 14.00 | 0.04 |
| Sugarcane | 4000.17 | 424.11 | 0.10 |
| # 4th Advance Estimates *Final Estimates of DES Karnataka State | | | |

| Production of Major Agricultural Crops - India & Karnataka | | | |
|---|---|---|---|
| Unit: Lakh Tonnes, Cotton in lakh bales of 170 kg. lint | | | |
| **Year: 2017-18** | | | |
| **Crop** | **All India #** | **Karnataka *** | **% Share of the State** |
| **1** | **2** | **3** | **4** |
| Rice | 112.76 | 29.07 | 25.78 |
| Wheat | 99.87 | 2.19 | 2.19 |
| Jowar | 4.80 | 12.64 | 263.33 |
| Bajra | 9.21 | 3.67 | 39.84 |
| Maize | 28.75 | 56.10 | 195.13 |
| Ragi | 9.21 | 15.68 | 170.24 |
| Small Millets & Barley | 0.44 | 0.25 | 56.81 |
| **Coarse Cereals** | **46.97** | **88.34** | **1.88** |
| **Total Cereals** | **259.60** | **119.60** | **46.07** |
| Tur (Red gram) | 4.29 | 8.40 | 195.80 |
| Gram (Bengal gram) | 11.38 | 9.76 | 85.76 |
| Urad (Black gram) | 3.49 | 0.66 | 18.91 |
| Moong (Green gram) | 2.02 | 1.28 | 63.36 |
| Other Pulses | 2.61 | 0.008 | 0.30 |
| **Total Pulses** | **25.42** | **22.12** | **87.01** |
| **Total Food grains** | **285.01** | **141.72** | **49.72** |
| Groundnut | 92.53 | 6.37 | 6.88 |
| Castor | 15.68 | 0.05 | 0.31 |
| Sesamum | 7.55 | 0.31 | 4.10 |
| Nigerseed | 0.70 | 0.01 | 1.42 |
| Rapeseed & Mustard | 84.30 | 0.003 | 0.003 |
| Linseed | 1.74 | 0.008 | 0.45 |
| Safflower | 0.55 | 0.30 | 54.54 |
| Sunflower | 2.22 | 1.51 | 68.01 |
| Soyabean | 109.33 | 4.23 | 3.86 |
| **Total Oilseeds** | **314.59** | **12.79** | **4.06** |
| Cotton | 328.05 | 18.44 | 5.62 |
| Sugarcane | 3799.05 | 374.61 | 9.86 |
| Final Estimates of DE&S GoI, Final Estimates of DE&S Karnataka State | | | |

| Year: 2016-17 | | | |
|---|---|---|---|
| **Crop** | **All India#** | **Karnataka*** | **% Share of the State** |
| **1** | **2** | **3** | **4** |
| Rice | 1097.00 | 28.74 | 2.62 |
| Wheat | 985.10 | 1.71 | 0.17 |
| Jowar | 45.70 | 8.46 | 18.51 |
| Bajra | 97.30 | 2.55 | 2.62 |
| Maize | 259.00 | 33.14 | 12.80 |
| Ragi | 13.90 | 4.91 | 35.32 |
| Small Millets & Barley | 21.90 | 0.07 | 0.32 |
| **Coarse Cereals** | **437.70** | **49.13** | **11.22** |
| **Total Cereals** | **2519.80** | **79.58** | **3.16** |
| Tur (Red gram) | 48.70 | 12.12 | 24.89 |
| Gram (Bengal gram) | 93.80 | 5.92 | 6.31 |
| Urad (Black gram) | 28.30 | 0.43 | 1.52 |
| Moong (Green gram) | 21.70 | 1.16 | 5.35 |
| Other Pulses | 38.80 | 0.78 | 2.01 |
| **Total Pulses** | **231.30** | **20.41** | **8.82** |
| **Total Food grains** | **2751.10** | **99.99** | **3.63** |
| Groundnut | 74.62 | 4.19 | 5.62 |
| Castor | 13.76 | 0.05 | 0.36 |
| Sesamum | 7.47 | 0.22 | 2.95 |
| Nigerseed | 0.85 | 0.01 | 1.18 |
| Rapeseed & Mustard | 79.17 | 0.01 | 0.01 |
| Linseed | 1.84 | 0.00 | 0.05 |
| Safflower | 0.94 | 0.22 | 23.40 |
| Sunflower | 2.51 | 0.98 | 39.04 |
| Soyabean | 131.59 | 2.37 | 1.80 |
| **Total Oilseeds** | **312.76** | **8.05** | **2.57** |
| Cotton | 325.77 | 10.24 | 3.14 |
| Sugarcane | 3060.69 | 273.78 | 8.95 |
| Final Estimates of DE&S GoI, Final Estimates of DE&S Karnataka State | | | |

| Production of Major Agricultural Crops - India & Karnataka<br>Unit: Lakh Tonnes, Cotton in lakh bales of 170 kg. lint<br>Year: 2015-16 | | | |
|---|---|---|---|
| **Crop** | **All India** | **Karnataka** | **% Share of the State** |
| **1** | **2** | **3** | **4** |
| Rice | 1044.10 | 30.21 | 2.89 |
| Wheat | 922.90 | 1.56 | 0.17 |
| Jowar | 42.40 | 7.96 | 18.77 |
| Bajra | 80.70 | 1.11 | 1.38 |
| Maize | 225.70 | 33.10 | 14.67 |
| Ragi | 18.20 | 11.88 | 65.27 |
| Small Millets & Barley | 18.30 | 0.10 | 0.55 |
| **Coarse Cereals** | **385.20** | **54.15** | **14.06** |
| **Total Cereals** | **2352.20** | **85.92** | **3.65** |
| Tur (Red gram) | 25.60 | 2.42 | 9.45 |
| Gram (Bengal gram) | 70.60 | 5.52 | 7.82 |
| Urad (Black gram) | 19.50 | 0.25 | 1.28 |
| Moong (Green gram) | 15.90 | 0.44 | 2.77 |
| Other Pulses | 31.90 | 1.89 | 5.92 |
| **Total Pulses** | **163.50** | **10.52** | **6.43** |
| **Total Food grains** | **2515.70** | **96.44** | **3.83** |
| Groundnut | 67.33 | 3.95 | 5.87 |
| Castor | 17.52 | 0.05 | 0.29 |
| Sesamum | 8.50 | 0.24 | 2.82 |
| Nigerseed | 0.74 | 0.02 | 2.70 |
| Rapeseed & Mustard | 67.97 | 0.00 | 0.00 |
| Linseed | 1.25 | 0.01 | 0.80 |
| Safflower | 0.53 | 0.21 | 39.62 |
| Sunflower | 2.96 | 1.21 | 40.88 |
| Soyabean | 85.70 | 1.40 | 1.63 |
| **Total Oilseeds** | **252.51** | **7.09** | **2.81** |
| Cotton | 300.05 | 11.52 | 3.84 |
| Sugarcane | 3484.48 | 363.14 | 10.42 |
| Final Estimates of DE&S GoI, Final Estimates of DE&S Karnataka State. | | | |

# ಅನುಬಂಧ-3

| ಕರ್ನಾಟಕ ರಾಜ್ಯದಲ್ಲಿ 2020-21 ನೇ ಸಾಲಿನ ಪ್ರಮುಖ ಕೃಷಿ ಬೆಳೆಗಳ ಹಂಗಾಮುವಾರು ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ಪ್ರಸ್ತಾವಿತ ಗುರಿ | | | | | | | | | | | | | |
|---|---|---|---|---|---|---|---|---|---|---|---|---|---|
| ಘಟಕ: ವಿಸ್ತೀರ್ಣ ಲಕ್ಷ ಹೆಕ್ಟೇರ್, ಉತ್ಪಾದನೆ ಲಕ್ಷ ಟನ್(ಹತ್ತಿ ಉತ್ಪಾದನೆ ಲಕ್ಷ ಬೇಲ್ ಗಳಲ್ಲಿ), ಇಳುವರಿ: ಕೆಜಿ/ಹೆಕ್ಟೇರ್ ಗೆ(ಕಬ್ಬಿನ ಇಳುವರಿ ಟನ್ ಗಳಲ್ಲಿ) | | | | | | | | | | | | | |
| **ಕ್ರ ಸಂ** | **ಬೆಳೆಗಳು** | **ಮುಂಗಾರು** | | | **ಹಿಂಗಾರು** | | | **ಬೇಸಿಗೆ** | | | **ಒಟ್ಟು** | | |
| | | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** |
| 1 | ಅಕ್ಕಿ | 10.04 | 30.14 | 3000 | 0.13 | 0.35 | 2600 | 2.19 | 7.68 | 3500 | 12.38 | 38.18 | 3084 |
| 2 | ಜೋಳ | 1.00 | 1.41 | 1400 | 9.37 | 8.67 | 925 | 0.03 | 0.05 | 1800 | 10.41 | 10.13 | 974 |
| 3 | ರಾಗಿ | 6.22 | 10.27 | 1650 | 0.30 | 0.45 | 1462 | 0.09 | 0.17 | 1900 | 6.63 | 10.90 | 1645 |
| 4 | ಮುಸುಕಿನಜೋಳ | 11.82 | 41.32 | 3495 | 1.14 | 3.55 | 3100 | 0.23 | 0.95 | 4000 | 13.20 | 45.83 | 3470 |
| 5 | ಸಜ್ಜೆ | 1.77 | 2.12 | 1200 | 0.02 | 0.01 | 1000 | 0.02 | 0.02 | 1000 | 1.82 | 2.16 | 1188 |
| 6 | ಗೋಧಿ | 0 | 0 | 0 | 2.24 | 2.50 | 1115 | 0 | 0 | 0 | 2.24 | 2.50 | 1115 |
| 7 | ಸಿರಿಧಾನ್ಯಗಳು | 0.45 | 0.27 | 600 | 0.02 | 0.01 | 500 | 0 | 0 | 0 | 0.48 | 0.28 | 593 |
| | **ಒಟ್ಟು ಏಕದಳ ಧಾನ್ಯಗಳು** | **31.34** | **85.56** | **2730** | **13.25** | **15.55** | **1173** | **2.58** | **8.93** | **3454** | **47.18** | **110.02** | **2332** |
| 1 | ತೊಗರಿ | 11.65 | 9.32 | 800 | 0 | 0 | 0 | 0 | 0 | 0 | 11.65 | 9.32 | 800 |
| 2 | ಕಡಲೆ | 0 | 0 | 0 | 12.66 | 9.50 | 750 | 0 | 0 | 0 | 12.66 | 9.50 | 750 |
| 3 | ಹುರಳಿ | 0.46 | 0.23 | 500 | 1.29 | 0.77 | 600 | 0.00069 | 0.00035 | 500 | 1.76 | 1.00 | 573 |
| 4 | ಉದ್ದು | 0.89 | 0.40 | 450 | 0.04 | 0.01 | 450 | 0.01 | 0.007 | 550 | 0.95 | 0.42 | 451 |
| 5 | ಹೆಸರು | 4.45 | 1.55 | 350 | 0.03 | 0.01 | 300 | 0.01 | 0.004 | 300 | 4.50 | 1.57 | 349 |
| 6 | ಅಲಸಂದಿ | 0.65 | 0.39 | 600 | 0.14 | 0.07 | 500 | 0.10 | 0.05 | 500 | 0.91 | 0.52 | 572 |
| 7 | ಅವರೆ | 0.65 | 0.55 | 850 | 0.10 | 0.08 | 800 | 0.01 | 0.01 | 800 | 0.77 | 0.65 | 842 |
| 8 | ಇತರೆ | 0.02 | 0.006 | 300 | 0 | 0 | 0 | 0 | 0 | 0 | 0.02 | 0.006 | 300 |
| | **ಒಟ್ಟುದ್ವಿದಳ ಧಾನ್ಯಗಳು** | **18.81** | **12.48** | **663** | **14.28** | **10.46** | **732** | **0.15** | **0.08** | **522** | **33.26** | **23.02** | **692** |
| | **ಒಟ್ಟುಆಹಾರ ಧಾನ್ಯಗಳು** | **50.15** | **98.04** | **1955** | **27.54** | **26.02** | **945** | **2.74** | **9.01** | **3287** | **80.44** | **133.05** | **1654** |
| 1 | ನೆಲಗಡಲೆ | 4.90 | 3.53 | 720 | 0.93 | 1.12 | 1200 | 1.58 | 1.58 | 1000 | 7.41 | 6.23 | 840 |

| ಕರ್ನಾಟಕ ರಾಜ್ಯದಲ್ಲಿ 2020-21 ನೇ ಸಾಲಿನ ಪ್ರಮುಖ ಕೃಷಿ ಬೆಳೆಗಳ ಹಂಗಾಮುವಾರು ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ಪ್ರಸ್ತಾವಿತ ಗುರಿ | | | | | | | | | | | | | |
|---|---|---|---|---|---|---|---|---|---|---|---|---|---|
| ಘಟಕ: ವಿಸ್ತೀರ್ಣ ಲಕ್ಷ ಹೆಕ್ಟೇರ್, ಉತ್ಪಾದನೆ ಲಕ್ಷ ಟನ್(ಹತ್ತಿ ಉತ್ಪಾದನೆ ಲಕ್ಷ ಬೇಲ್ ಗಳಲ್ಲಿ), ಇಳುವರಿ: ಕೆಜಿ/ಹೆಕ್ಟೇರ್ ಗೆ(ಕಬ್ಬಿನ ಇಳುವರಿ ಟನ್ ಗಳಲ್ಲಿ) | | | | | | | | | | | | | |
| **ಕ್ರ ಸಂ** | **ಬೆಳೆಗಳು** | **ಮುಂಗಾರು** | | | **ಹಿಂಗಾರು** | | | **ಬೇಸಿಗೆ** | | | **ಒಟ್ಟು** | | |
| | | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** | **ವಿಸ್ತೀರ್ಣ** | **ಉತ್ಪಾದನೆ** | **ಇಳುವರಿ** |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** |
| 2 | ಎಳ್ಳು | 0.47 | 0.28 | 600 | 0.03 | 0.01 | 500 | 0.008 | 0.004 | 500 | 0.50 | 0.30 | 592 |
| 3 | ಸೂರ್ಯಕಾಂತಿ | 1.76 | 0.79 | 450 | 1.98 | 1.19 | 600 | 0.33 | 0.23 | 700 | 4.08 | 2.22 | 544 |
| 4 | ಹರಳು | 0.16 | 0.09 | 605 | 0 | 0 | 0 | 0 | 0 | 0 | 0.16 | 0.09 | 605 |
| 5 | ಹುಚ್ಚೆಳ್ಳು | 0.11 | 0.02 | 200 | 0.01 | 0.004 | 250 | 0 | 0 | 0 | 0.12 | 0.002 | 207 |
| 6 | ಸಾಸಿವೆ | 0.03 | 0.006 | 202 | 0.004 | 0.001 | 250 | 0.004 | 0.001 | 250 | 0.03 | 0.008 | 212 |
| 7 | ಸೋಯಾಅವರೆ | 3.55 | 3.67 | 1034 | 0 | 0 | 0 | 0.006 | 0.006 | 1000 | 3.56 | 3.68 | 1034 |
| 8 | ಕುಸುಬೆ | 0 | 0 | 0 | 5.10 | 4.59 | 900 | 0 | 0 | 0 | 3.56 | 3.68 | 1034 |
| 9 | ಅಗಸೆ | 0 | 0 | 0 | 0.005 | 0.001 | 350 | 0 | 0 | 0 | 0.005 | 0.001 | 350 |
| | **ಒಟ್ಟು ಎಣ್ಣೆಕಾಳುಗಳು** | **10.99** | **8.41** | **765** | **3.53** | **2.81** | **795** | **1.93** | **1.82** | **944** | **16.47** | **13.05** | **792** |
| | **ವಾಣಿಜ್ಯ ಬೆಳೆಗಳು** | | | | | | | | | | | | |
| 1 | ಹತ್ತಿ | 6.25 | 12.87 | 350 | 0.48 | 0.98 | 350 | 0.001 | 0.003 | 450 | 6.74 | 13.89 | 2060 |
| 2 | ಕಬ್ಬು | 4.77 | 0 | 0 | 0.43 | 0 | 0 | 0.30 | 0 | 0 | 5.51 | 400.00 | 100 |
| 3 | ತಂಬಾಕು | 0.81 | 0.73 | 900 | 0 | 0 | 0 | 0 | 0 | 0 | 0.81 | 0.73 | 900 |
| | **ಒಟ್ಟು ವಿಸ್ತೀರ್ಣ** | **73.00** | | | **32.00** | | | **5.00** | | | **110.00** | | |

# ಅನುಬಂಧ-3ಎ

| 2020-21 ನೇ ಸಾಲಿನ ಬೆಳೆವಾರು ಹಾಗು ಹಂಗಾಮುವಾರು ಕೃಷಿ ಬೆಳೆಗಳ ನೀರಾವರಿ ಮತ್ತು ಮಳೆಯಾಶ್ರಿತ ಬಿತ್ತನೆ ವಿಸ್ತರ್ಣದ ಗುರಿ | | | | | | | | | | | | | |
|---|---|---|---|---|---|---|---|---|---|---|---|---|---|
| ಘಟಕ: ವಿಸ್ತೀರ್ಣ ಲಕ್ಷ ಹೆಕ್ಟೇರ್ | | | | | | | | | | | | | |
| ಕ್ರ ಸಂ | ಬೆಳೆಗಳು | ಮುಂಗಾರು | | | ಹಿಂಗಾರು | | | ಬೇಸಿಗೆ | | | ಒಟ್ಟು | | |
| | | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** |
| 1 | ಅಕ್ಕಿ | 7.03 | 3.02 | 10.05 | 0.04 | 0.10 | 0.14 | 2.17 | 0.02 | 2.20 | 9.24 | 3.14 | 12.38 |
| 2 | ಜೋಳ | 0.17 | 0.83 | 1.01 | 0.74 | 8.63 | 9.37 | 0.03 | 0.00 | 0.03 | 0.94 | 9.47 | 10.41 |
| 3 | ರಾಗಿ | 0.18 | 6.05 | 6.23 | 0.13 | 0.18 | 0.31 | 0.09 | 0.00 | 0.09 | 0.40 | 6.23 | 6.63 |
| 4 | ಮುಸುಕಿನಜೋಳ | 3.06 | 8.76 | 11.82 | 1.01 | 0.14 | 1.15 | 0.24 | 0.00 | 0.24 | 4.30 | 8.91 | 13.21 |
| 5 | ಸಜ್ಜೆ | 0.14 | 1.63 | 1.77 | 0.02 | 0.002 | 0.02 | 0.03 | 0.00 | 0.03 | 0.19 | 1.64 | 1.82 |
| 6 | ಗೋಧಿ | 0.00 | 0.00 | 0.00 | 1.28 | 0.97 | 2.25 | 0.00 | 0.00 | 0.00 | 1.28 | 0.97 | 2.25 |
| 7 | ಸಿರಿಧಾನ್ಯಗಳು | 0.02 | 0.44 | 0.46 | 0.00 | 0.02 | 0.02 | 0.00 | 0.00 | 0.00 | 0.02 | 0.46 | 0.48 |
| | **ಒಟ್ಟು ಏಕದಳ ಧಾನ್ಯಗಳು** | **10.60** | **20.75** | **31.34** | **3.21** | **10.05** | **13.26** | **2.56** | **0.02** | **2.59** | **16.37** | **30.82** | **47.19** |
| 1 | ತೊಗರಿ | 0.74 | 10.92 | 11.66 | 0.00 | 0.00 | 0.00 | 0.00 | 0.00 | 0.00 | 0.74 | 10.92 | 11.66 |
| 2 | ಕಡಲೆ | 0.00 | 0.00 | 0.00 | 1.80 | 10.87 | 12.67 | 0.00 | 0.00 | 0.00 | 1.80 | 10.87 | 12.67 |
| 3 | ಹುರಳಿ | 0.00 | 0.47 | 0.47 | 0.01 | 1.29 | 1.30 | 0.00 | 0.00 | 0.00 | 0.01 | 1.29 | 1.30 |
| 4 | ಉದ್ದು | 0.33 | 0.57 | 0.90 | 0.00 | 0.04 | 0.04 | 0.01 | 0.00 | 0.01 | 0.34 | 0.61 | 0.95 |
| 5 | ಹೆಸರು | 0.14 | 4.31 | 4.45 | 0.00 | 0.03 | 0.04 | 0.01 | 0.00 | 0.01 | 0.15 | 4.35 | 4.51 |
| 6 | ಅಲಸಂದಿ | 0.01 | 0.65 | 0.66 | 0.03 | 0.11 | 0.15 | 0.10 | 0.00 | 0.11 | 0.14 | 0.77 | 0.91 |
| 7 | ಅವರೆ | 0.01 | 0.65 | 0.66 | 0.01 | 0.10 | 0.11 | 0.02 | 0.00 | 0.02 | 0.03 | 0.75 | 0.78 |
| 8 | ಇತರೆ | 0.00 | 0.02 | 0.02 | 0.00 | 0.00 | 0.00 | 0.00 | 0.00 | 0.00 | 0.00 | 0.02 | 0.02 |

**2020-21 ನೇ ಸಾಲಿನ ಬೆಳೆವಾರು ಹಾಗು ಹಂಗಾಮುವಾರು ಕೃಷಿ ಬೆಳೆಗಳ ನೀರಾವರಿ ಮತ್ತು ಮಳೆಯಾಶ್ರಿತ ಬಿತ್ತನೆ ವಿಸ್ತರ್ಣದ ಗುರಿ ಘಟಕ: ವಿಸ್ತೀರ್ಣ ಲಕ್ಷ ಹೆಕ್ಟೇರ್**

| ಕ್ರ ಸಂ | ಬೆಳೆಗಳು | ಮುಂಗಾರು | | | ಹಿಂಗಾರು | | | ಬೇಸಿಗೆ | | | ಒಟ್ಟು | | |
|---|---|---|---|---|---|---|---|---|---|---|---|---|---|
| | | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** |
| | **ಒಟ್ಟು ದ್ವಿದಳ ಧಾನ್ಯಗಳು** | **1.22** | **17.59** | **18.81** | **1.85** | **12.44** | **14.29** | **0.14** | **0.01** | **0.16** | **3.22** | **30.04** | **33.26** |
| | **ಒಟ್ಟು ಆಹಾರ ಧಾನ್ಯಗಳು** | **11.82** | **38.34** | **50.16** | **5.06** | **22.49** | **27.55** | **2.71** | **0.04** | **2.74** | **19.59** | **60.86** | **80.45** |
| 1 | ನೆಲಗಡಲೆ | 0.37 | 4.53 | 4.90 | 0.59 | 0.34 | 0.93 | 1.58 | 0.0001 | 1.58 | 2.54 | 4.87 | 7.42 |
| 2 | ಎಳ್ಳು | 0.06 | 0.41 | 0.47 | 0.00 | 0.03 | 0.03 | 0.01 | 0.00 | 0.01 | 0.07 | 0.44 | 0.51 |
| 3 | ಸೂರ್ಯಕಾಂತಿ | 0.34 | 1.42 | 1.76 | 0.49 | 1.50 | 1.99 | 0.34 | 0.00 | 0.34 | 1.17 | 2.92 | 4.09 |
| 4 | ಹರಳು | 0.00 | 0.16 | 0.17 | 0.00 | 0.00 | 0.00 | 0.00 | 0.00 | 0.00 | 0.00 | 0.16 | 0.17 |
| 5 | ಹುಚ್ಚೆಳ್ಳು | 0.00 | 0.11 | 0.11 | 0.00 | 0.02 | 0.02 | 0.00 | 0.00 | 0.00 | 0.00 | 0.13 | 0.13 |
| 6 | ಸಾಸಿವೆ | 0.00 | 0.03 | 0.03 | 0.01 | 0.00 | 0.01 | 0.00 | 0.00 | 0.00 | 0.01 | 0.013 | 0.14 |
| 7 | ಸೋಯಾಅವರೆ | 0.14 | 3.41 | 3.55 | 0.00 | 0.00 | 0.00 | 0.01 | 0.00 | 0.01 | 0.15 | 3.41 | 3.56 |
| 8 | ಕುಸುಬೆ | 0.00 | 0.00 | 0.00 | 0.01 | 0.50 | 0.51 | 0.00 | 0.00 | 0.00 | 0.01 | 0.50 | 0.51 |
| 9 | ಅಗಸೆ | 0.00 | 0.00 | 0.00 | 0.00 | 0.05 | 0.05 | 0.00 | 0.00 | 0.00 | 0.00 | 0.05 | 0.05 |
| | **ಒಟ್ಟು ಎಣ್ಣೆಕಾಳುಗಳು** | **0.92** | **10.08** | **11.00** | **1.09** | **2.44** | **3.54** | **1.94** | **0.00** | **1.94** | **3.95** | **12.52** | **16.47** |
| | **ವಾಣಿಜ್ಯ ಬೆಳೆಗಳು** | | | | | | | | | | | | |
| 1 | ಹತ್ತಿ | 1.90 | 4.35 | 6.25 | 0.03 | 0.45 | 0.48 | 0.01 | 0.00 | 0.01 | 1.94 | 4.81 | 6.75 |
| 2 | ಕಬ್ಬು | 4.74 | 0.03 | 4.77 | 0.39 | 0.05 | 0.43 | 0.31 | 0.00 | 0.31 | 5.43 | 0.08 | 5.51 |
| 3 | ತಂಬಾಕು | 0.02 | 0.80 | 0.82 | 0.00 | 0.00 | 0.00 | 0.00 | 0.00 | 0.00 | 0.02 | 0.80 | 0.82 |
| | **ಒಟ್ಟು ವಿಸ್ತೀರ್ಣ** | **19.40** | **53.60** | **73.00** | **6.57** | **25.43** | **32.00** | **4.96** | **0.04** | **5.00** | **30.93** | **79.07** | **110.00** |

# ಅನುಬಂಧ-3ಬಿ

**2020-21 ನೇ ಸಾಲಿನ ಬೆಳೆವಾರು ಹಾಗು ಹಂಗಾಮುವಾರು ಕೃಷಿ ಬೆಳೆಗಳ ನೀರಾವರಿ ಮತ್ತು ಮಳೆಯಾಶ್ರಿತ ಬಿತ್ತನೆ ವಿಸ್ತೀರ್ಣದ ಗುರಿ**

**ಘಟಕ: ವಿಸ್ತೀರ್ಣ ಲಕ್ಷ ಹೆಕ್ಟೇರ್**

| ಕ್ರ ಸಂ | ಬೆಳೆಗಳು | ಮುಂಗಾರು | | | ಹಿಂಗಾರು | | | ಬೇಸಿಗೆ | | | ಒಟ್ಟು | | |
|---|---|---|---|---|---|---|---|---|---|---|---|---|---|
| | | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** |
| 1 | ಬೆಂಗಳೂರು ನಗರ | 0.01 | 0.14 | 0.15 | 0.00 | 0.01 | 0.01 | 0.00 | 0.00 | 0.00 | 0.02 | 0.14 | 0.15 |
| 2 | ಬೆಂಗಳೂರು (ಗ್ರಾ) | 0.02 | 0.55 | 0.57 | 0.01 | 0.01 | 0.02 | 0.00 | 0.00 | 0.00 | 0.04 | 0.55 | 0.59 |
| 3 | ರಾಮನಗರ | 0.06 | 0.90 | 0.96 | 0.00 | 0.03 | 0.03 | 0.01 | 0.00 | 0.01 | 0.07 | 0.93 | 1.00 |
| 4 | ಕೋಲಾರ | 0.06 | 0.76 | 0.82 | 0.00 | 0.09 | 0.09 | 0.02 | 0.00 | 0.02 | 0.08 | 0.84 | 0.92 |
| 5 | ಚಿಕ್ಕಬಳ್ಳಾಪುರ | 0.13 | 1.27 | 1.41 | 0.01 | 0.00 | 0.02 | 0.03 | 0.00 | 0.03 | 0.18 | 1.28 | 1.46 |
| 6 | ತುಮಕೂರು | 0.24 | 3.57 | 3.81 | 0.01 | 0.08 | 0.09 | 0.04 | 0.00 | 0.04 | 0.29 | 3.65 | 3.94 |
| 7 | ಶಿವಮೊಗ್ಗ | 0.69 | 0.79 | 1.48 | 0.01 | 0.01 | 0.02 | 0.15 | 0.00 | 0.15 | 0.86 | 0.80 | 1.65 |
| 8 | ಚಿತ್ರದುರ್ಗ | 0.11 | 2.73 | 2.85 | 0.06 | 0.48 | 0.54 | 0.06 | 0.00 | 0.06 | 0.24 | 3.21 | 3.45 |
| 9 | ದಾವಣಗೆರೆ | 0.86 | 1.49 | 2.35 | 0.04 | 0.13 | 0.16 | 0.53 | 0.00 | 0.53 | 1.42 | 1.62 | 3.04 |
| 10 | ಮೈಸೂರು | 1.19 | 2.63 | 3.82 | 0.02 | 0.58 | 0.61 | 0.14 | 0.00 | 0.14 | 1.35 | 3.21 | 4.56 |
| 11 | ಚಾಮರಾಜನಗರ | 0.18 | 1.03 | 1.21 | 0.03 | 0.39 | 0.41 | 0.03 | 0.00 | 0.03 | 0.23 | 1.42 | 1.64 |
| 12 | ಮಂಡ್ಯ | 0.90 | 0.88 | 1.79 | 0.12 | 0.22 | 0.34 | 0.27 | 0.00 | 0.27 | 1.29 | 1.10 | 2.40 |
| 13 | ಕೊಡಗು | 0.02 | 0.31 | 0.34 | 0.00 | 0.00 | 0.00 | 0.00 | 0.00 | 0.00 | 0.02 | 0.31 | 0.34 |
| 14 | ಹಾಸನ | 0.28 | 2.03 | 2.31 | 0.07 | 0.13 | 0.20 | 0.03 | 0.00 | 0.03 | 0.37 | 2.17 | 2.54 |
| 15 | ಚಿಕ್ಕಮಗಳೂರು | 0.09 | 1.04 | 1.12 | 0.00 | 0.31 | 0.31 | 0.02 | 0.00 | 0.02 | 0.11 | 1.34 | 1.45 |
| 16 | ದಕ್ಷಿಣ ಕನ್ನಡ | 0.00 | 0.11 | 0.11 | 0.00 | 0.05 | 0.05 | 0.00 | 0.02 | 0.02 | 0.00 | 0.18 | 0.18 |
| 17 | ಉಡುಪಿ | 0.00 | 0.36 | 0.36 | 0.00 | 0.09 | 0.09 | 0.00 | 0.01 | 0.01 | 0.00 | 0.46 | 0.46 |
| 18 | ಧಾರವಾಡ | 0.16 | 2.24 | 2.40 | 0.26 | 1.66 | 1.91 | 0.02 | 0.00 | 0.02 | 0.45 | 3.89 | 4.34 |
| 19 | ಗದಗ | 0.36 | 2.15 | 2.50 | 0.27 | 2.44 | 2.71 | 0.14 | 0.00 | 0.14 | 0.76 | 4.59 | 5.35 |
| 20 | ಹಾವೇರಿ | 0.52 | 2.62 | 3.14 | 0.13 | 0.48 | 0.60 | 0.16 | 0.00 | 0.16 | 0.82 | 3.09 | 3.91 |
| 21 | ಉತ್ತರ ಕನ್ನಡ | 0.00 | 0.73 | 0.73 | 0.00 | 0.09 | 0.09 | 0.00 | 0.02 | 0.02 | 0.00 | 0.83 | 0.83 |

| 2020-21 ನೇ ಸಾಲಿನ ಬೆಳೆವಾರು ಹಾಗು ಹಂಗಾಮುವಾರು ಕೃಷಿ ಬೆಳೆಗಳ ನೀರಾವರಿ ಮತ್ತು ಮಳೆಯಾಶ್ರಿತ ಬಿತ್ತನೆ ವಿಸ್ತೀರ್ಣದ ಗುರಿ | | | | | | | | | | | | | |
|---|---|---|---|---|---|---|---|---|---|---|---|---|---|
| ಘಟಕ: ವಿಸ್ತೀರ್ಣ ಲಕ್ಷ ಹೆಕ್ಟೇರ್ | | | | | | | | | | | | | |
| ಕ್ರ ಸಂ | ಬೆಳೆಗಳು | ಮುಂಗಾರು | | | ಹಿಂಗಾರು | | | ಬೇಸಿಗೆ | | | ಒಟ್ಟು | | |
| | | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು | ನೀರಾವರಿ | ಮಳೆಯಾಶ್ರಿತ | ಒಟ್ಟು |
| 22 | ಬೆಳಗಾವಿ | 3.72 | 3.16 | 6.88 | 1.10 | 2.14 | 3.24 | 0.13 | 0.00 | 0.13 | 4.95 | 5.31 | 10.25 |
| 23 | ವಿಜಯಪುರ | 1.22 | 3.66 | 4.88 | 1.05 | 4.19 | 5.24 | 0.39 | 0.00 | 0.39 | 2.67 | 7.85 | 10.52 |
| 24 | ಬಾಗಲಕೋಟೆ | 1.49 | 1.02 | 2.51 | 1.12 | 1.95 | 3.08 | 0.35 | 0.00 | 0.35 | 2.97 | 2.97 | 5.94 |
| 25 | ರಾಯಚೂರು | 1.76 | 1.69 | 3.45 | 0.79 | 2.39 | 3.18 | 0.64 | 0.00 | 0.64 | 3.19 | 4.08 | 7.27 |
| 26 | ಕೊಪ್ಪಳ | 0.68 | 1.66 | 2.33 | 0.07 | 1.47 | 1.54 | 0.69 | 0.00 | 0.69 | 1.44 | 3.12 | 4.56 |
| 27 | ಬಳ್ಳಾರಿ | 2.02 | 2.34 | 4.35 | 0.52 | 1.20 | 1.71 | 0.72 | 0.00 | 0.72 | 3.25 | 3.53 | 6.78 |
| 28 | ಕಲಬುರಗಿ | 0.77 | 6.66 | 7.43 | 0.30 | 2.61 | 2.91 | 0.16 | 0.00 | 0.16 | 1.23 | 9.27 | 10.50 |
| 29 | ಯಾದಗಿರಿ | 1.57 | 1.78 | 3.35 | 0.50 | 1.24 | 1.74 | 0.22 | 0.00 | 0.22 | 2.29 | 3.02 | 5.31 |
| 30 | ಬೀದರ್ | 0.29 | 3.30 | 3.59 | 0.08 | 1.00 | 1.08 | 0.02 | 0.00 | 0.02 | 0.38 | 4.30 | 4.68 |
| | **ರಾಜ್ಯ** | **19.40** | **53.60** | **73.00** | **6.57** | **25.43** | **32.00** | **4.96** | **0.04** | **5.00** | **30.93** | **79.07** | **110.00** |
| | **ಶೇಕಡ ವಿಸ್ತೀರ್ಣ** | **27** | **73** | | **21** | **79** | | **99** | **1** | | **28** | **72** | |

## 2. ಗಣಕಕೇಂದ್ರ ಮತ್ತು ಸಿ.ಯು.ಜಿ. (ಲೆಕ್ಕ ಶೀರ್ಷಿಕೆ: 2401-00-001-1-01) ಉಪ ಶೀರ್ಷಿಕೆ: 051

ಕೃಷಿ ಇಲಾಖೆ ರೈತರಿಗೆ ಅಗತ್ಯವಿರುವ ಸೇವೆಗಳನ್ನು ಹಾಗೂ ಮಾಹಿತಿಗಳನ್ನು ಒದಗಿಸಲು ಸ್ಥಾಪಿಸಲಾಗಿರುವ 740 ರೈತ ಸಂಪರ್ಕ ಕೇಂದ್ರಗಳ ಸ್ಟೇಕ್ ಹೋಲ್ಡರ್ ಗಳಿಗೆ ಸೂಕ್ತವಾಗಿ, ಪಾರದರ್ಶಕವಾಗಿ, ಸಮಯಕ್ಕೆ ಸರಿಯಾಗಿ ಹಾಗೂ ನಿಖರವಾಗಿ ಮಾಹಿತಿ ಹಾಗೂ ಸೇವೆಗಳನ್ನು ಒದಗಿಸಲು ಇಲಾಖೆಯ ಪ್ರಮುಖ ಕಾರ್ಯಕ್ರಮಗಳನ್ನು 2014-15ನೇ ಸಾಲಿನಿಂದ ರಾಜ್ಯವಲಯ ಕರ್ನಾಟಕ ಕೃಷಿ ಇನ್‌ಫರ್ಮೇಷನ್ ಸರ್ವೀಸಸ್ ಅಂಡ್ ನೆಟ್‌ವರ್ಕಿಂಗ್ (ಕೆ-ಕಿಸಾನ್) ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯಡಿ ಕೆ-ಕಿಸಾನ್ ಪೋರ್ಟಲ್‌ನ್ನು ಅಭಿವೃದ್ಧಿಪಡಿಸಿ ಇಲಾಖೆಯ ಪ್ರಮುಖ ಕಾರ್ಯಕ್ರಮಗಳಾದ ಕೃಷಿ ಯಾಂತ್ರಿಕರಣ, ಸೂಕ್ಷ್ಮ ನೀರಾವರಿ, ಕೃಷಿ ಸಂಸ್ಕರಣೆ, ಕೃಷಿ ಭಾಗ್ಯ ಯೋಜನೆ, ಬೀಜ, ಪೀಡೆನಾಶಕ ಹಾಗೂ ರಸಗೊಬ್ಬರ ಮಾರಾಟ ಪರವಾನಗಿ, ಬೀಜ ವಿತರಣೆ, ಪೀಡೆನಾಶಕ ವಿತರಣೆ, ಸಿಂಪರಣಾ ಉಪಕರಣಗಳ ವಿತರಣೆ ಕಾರ್ಯಕ್ರಮಗಳ ಅನುಷ್ಠಾನವನ್ನು ಗಣಕೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಮುಂದುವರೆದು, Common Farmer Registration Portal (FRUITS) ನಲ್ಲಿ ರೈತರ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಅಲ್ಲದೇ, ಕೇಂದ್ರ ಪುರಸ್ಕೃತ ಯೋಜನೆಗಳಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ, PM-KISAN, ಹಾಗೂ ರಾಜ್ಯವಲಯ ಯೋಜನೆಗಳಾದ ರೈತ ಸಿರಿ ಈ ಮುಂತಾದ ಯೋಜನೆಗಳನ್ನು DBT ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಮುಂದುವರೆದು, ಇಲಾಖೆಯ ಅಧಿಕಾರಿಗಳಿಗೆ ಹಾಗೂ ಅಧಿಕಾರಿಗಳ ನಡುವೆ ಸಮರ್ಥ ಸಂಪರ್ಕ ಸೌಕರ್ಯವನ್ನು ಕಲ್ಪಿಸಲು ಕ್ಲೋಸ್ಡ್ ಯೂಸರ್ ಗ್ರೂಪ್ ಸಂಚಾರಿ ದೂರವಾಣಿ ಸೇವೆಗಳನ್ನು ಒದಗಿಸಲಾಗಿದೆ.

ಈ ಚಟುವಟಿಕೆಗಳ ಸಮರ್ಥ ನಿರ್ವಹಣೆಗಾಗಿ ಲೆಕ್ಕ ಶೀರ್ಷಿಕೆ: 2401-00-001-1-01 ನ ಉಪ ಶೀರ್ಷಿಕೆ: 051 (ಗಣಕಯಂತ್ರ ಸ್ಥಾಪನೆ & ಸಿಯುಜಿ ವೆಚ್ಚಗಳು)ರಡಿ 2020-21 ನೇ ಸಾಲಿನಲ್ಲಿ ರೂ. 500 ಲಕ್ಷಗಳನ್ನು ಒದಗಿಸಲಾಗಿದೆ.

## ಈ ಕೆಳಗಿನ ಘಟಕಗಳಿಗೆ ಮಾರ್ಗಸೂಚಿಯನ್ವಯ ವೆಚ್ಚ ಭರಿಸುವುದು:

- ಕೇಂದ್ರ ಕಛೇರಿ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿ ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳ ವ್ಯಾಪ್ತಿಗೆ ಬರುವ ಅಧೀನ ಕಛೇರಿಗಳ ಗಣಕಯಂತ್ರ ಮತ್ತು ಪೂರಕ ಸಾಧನಗಳ ವಾರ್ಷಿಕ ನಿರ್ವಹಣೆ ವೆಚ್ಚ ಭರಿಸುವುದು. ಹಾಗೂ, ಆಂಟಿವೈರಸ್ ತಂತ್ರಾಂಶ ಖರೀದಿ ವೆಚ್ಚ ಭರಿಸುವುದು.

- ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮತ್ತು ಎಲ್ಲಾ ಅಧೀನ ಕಛೇರಿಗಳಿಗೆ ಬೇಕಾಗಬಹುದಾದ ಕಂಪ್ಯೂಟರ್ ಕನ್ಸ್ಯೂಮೆಬಲ್ ಗಳ (For eg., Toner/Cartridges, External Hard Disk, Pendrive, CDs etc.,) ಖರೀದಿಗಳ ವೆಚ್ಚವನ್ನು ಈ ಲೆಕ್ಕ ಶೀರ್ಷಿಕೆಯಡಿ ಕೆ.ಟಿ.ಪಿ.ಪಿ. 1999 ನಿಯಮಗಳನ್ವಯ ಭರಿಸಲು ಕ್ರಮ ಕೈಗೊಳ್ಳತಕ್ಕದ್ದು.
- ಇಲಾಖೆ ವತಿಯಿಂದ ನೀಡಲಾದ ಸಿ.ಯು.ಜಿ. ಸಿಮ್ ಗಳ ವೆಚ್ಚ ಭರಿಸುವುದು.

## I. ಗಣಕಯಂತ್ರಗಳ ನಿರ್ವಹಣೆ ಕುರಿತಂತೆ ಅನುಸರಿಸಬೇಕಾದ ಮುನ್ನೆಚ್ಚರಿಕೆಗಳು:

- ವಿದ್ಯುತ್ ಪೂರೈಕೆ ಮೂರು ಫೇಸ್ ಹೊಂದಿದ್ದು, ಅರ್ಥಿಂಗ್ ಸಮರ್ಪಕವಾಗಿರಬೇಕು.
- ಯು.ಪಿ.ಎಸ್. ಇಲ್ಲದೆ ಗಣಕಯಂತ್ರ ಮತ್ತು ಪೂರಕ ಸಾಧನಗಳನ್ನು ಬಳಸಬಾರದು.
- ಕಡ್ಡಾಯವಾಗಿ ವಾರ್ಷಿಕ ನಿರ್ವಹಣೆಯನ್ನು ಮತ್ತು ಎಲ್ಲಾ ಆಂಟಿವೈರಸ್ ತಂತ್ರಾಂಶ ಅಳವಡಿಕೆಯೊಂದಿಗೆ ಕೈಗೊಳ್ಳತಕ್ಕದ್ದು.
- ಗಣಕಯಂತ್ರ ಮತ್ತು ಸಂಬಂಧಿತ ಸಾಧನಗಳನ್ನು ಧೂಳು ಮುಕ್ತವಾಗಿರಿಸಬೇಕು ಮತ್ತು ಹೊದಿಕೆಗಳನ್ನು ಬಳಸಬೇಕು. ಗಣಕಯಂತ್ರಗಳನ್ನು ಇಟ್ಟಿರುವ ಕೊಠಡಿಯನ್ನು ಸ್ವಚ್ಛವಾಗಿರಸಬೇಕು.
- ಯು.ಪಿ.ಎಸ್ ನ ಬ್ಯಾಟರಿಗಳನ್ನು ಸ್ಟಾಂಡ್ ನಲ್ಲಿರಿಸಬೇಕು.
- ಎಲ್ಲಾ ಕಛೇರಿಗಳು ಇಂಟರ್ ನೆಟ್ ಸಂಪರ್ಕ ಇ-ಮೇಲ್ ವಿಳಾಸ ಹೊಂದಿರತಕ್ಕದ್ದು.
- ಬಳಕೆ ಪ್ರಮಾಣ ಪತ್ರ ಅಥವಾ ಸಹಿ ಮಾಡಿದ ದಾಖಲೆ ಕಳುಹಿಸುವುದನ್ನು ಹೊರತುಪಡಿಸಿ ಉಳಿದಂತೆ ಇ-ಮೇಲ್ ಮೂಲಕವೇ ವ್ಯವಹರಿಸತಕ್ಕದ್ದು.
- ಕನ್ನಡ ಬಳಕೆ ಕುರಿತಂತೆ ಯೂನಿಕೊಡ್ (Unicode) ತಂತ್ರಾಂಶವನ್ನು ಕಡ್ಡಾಯವಾಗಿ ಬಳಸುವುದು.

## II. ವಾರ್ಷಿಕ ಕಾರ್ಯನಿರ್ವಹಣೆ ಕರಾರು ಕುರಿತು ಅನುಸರಿಸಬೇಕಾದ ಅಂಶಗಳು:

- ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿ ಮತ್ತು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಕಛೇರಿಗಳಲ್ಲಿರುವ ಒಟ್ಟಾರೆ ಗಣಕಯಂತ್ರ, ಲ್ಯಾಪ್ ಟಾಪ್, ಪ್ರಿಂಟರ್, ಯು.ಪಿ.ಎಸ್/ಸೋಲಾರ್ ಹೈಬ್ರಿಡ್ ಯು.ಪಿ.ಎಸ್ ಮತ್ತಿತರ ಪೂರಕ ಸಾಧನಗಳನ್ನು ಕಡ್ಡಾಯವಾಗಿ ವಾರ್ಷಿಕ ನಿರ್ವಹಣೆಗೆ ಒಳಪಡಿಸಬೇಕು.

- ಗಣಕಯಂತ್ರ ಮತ್ತು ಪೂರಕ ಸಾಧನಗಳನ್ನು ವಾರ್ಷಿಕ ನಿರ್ವಹಣೆಗೆ ಒಳಪಡಿಸುವ ಮುನ್ನ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಎಲ್ಲಾ ಅಧೀನ ಕಛೇರಿಗಳ ದಾಸ್ತಾನು ವಹಿಯ ಪ್ರಕಾರ ಗಣಕಯಂತ್ರ ಮತ್ತು ಪೂರಕ ಸಾಧನಗಳ ದಾಸ್ತಾನು ಪರಿಶೀಲನೆ ನಡೆಸುವುದು (ಸಾಧನಗಳನ್ನು ಖರೀದಿಸಿದ ದಿನಾಂಕ, ಬಿಲ್ ಸಂಖ್ಯೆ, ಮೊತ್ತ, ವಾರಂಟಿ ಅವಧಿ ಕೊನೆಗೊಳ್ಳುವ ದಿನಾಂಕ, ಪ್ರಸ್ತುತ ಕಾರ್ಯನಿರ್ವಹಣೆ).
- ಜಂಟಿ ಕೃಷಿ ನಿರ್ದೇಶಕರ ಕಛೇರಿ ಹಾಗೂ ಅದರ ವ್ಯಾಪ್ತಿಯ ಅಧೀನ ಕಛೇರಿಗಳ ವಾರ್ಷಿಕ ನಿರ್ವಹಣೆಯನ್ನು ನಿಯಮಾನುಸಾರ ಭರಿಸತಕ್ಕದ್ದು.
- ವಾರ್ಷಿಕ ನಿರ್ವಹಣೆಗೆ ಕೆ.ಟಿ.ಪಿ.ಪಿ. 1999 ನಿಯಮಗಳನ್ವಯ ಕ್ರಮ ಕೈಗೊಳ್ಳುವುದು.
- ವಾರ್ಷಿಕ ನಿರ್ವಹಣೆ ಅವಧಿಯಲ್ಲಿ ದೂರುಗಳನ್ನು ನಿರ್ವಹಿಸಿದ ಸರ್ವೀಸ್ ಇಂಜಿನಿಯರ್ ನ ಸರ್ವೀಸ್ ಕಾಲ್ ವರದಿಗಳನ್ನು ಆಯಾ ಕಛೇರಿಗಳಲ್ಲಿ ನಿರ್ವಹಿಸುವುದು. ವಾರ್ಷಿಕ ಕಾರ್ಯ ನಿರ್ವಹಣೆ ಮಾಡುತ್ತಿರುವ ಸಂಸೆ ಹಣ ಪಾವತಿಸುವ ಮುನ್ನ ಸರ್ವೀಸ್ ಕಾಲ್ ವರದಿಗಳನ್ನು ಪರಿಶೀಲಿಸಿ ಕಾರ್ಯ ನಿರ್ವಹಣೆ ತೃಪ್ತಿಕರವಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳುವುದು.
- ವಾರ್ಷಿಕ ಕಾರ್ಯ ನಿರ್ವಹಣೆ ಅವಧಿಯಲ್ಲಿ ಗಣಕಯಂತ್ರ ಮತ್ತು ಪೂರಕ ಸಾಧನಗಳು ದುರಸ್ತಿಗೆ ಬಂದಲ್ಲಿ, ಹಾಳಾದ ಬಿಡಿ ಭಾಗಗಳು ವಾರ್ಷಿಕ ಕಾರ್ಯ ನಿರ್ವಹಣೆಗೆ ಒಳಪಡದಿದ್ದಲ್ಲಿ ಮಿತವ್ಯಯದ ಮಾರ್ಗ ಅನುಸರಿಸಿ ನಿಯಮಾನುಸಾರ ದುರಸ್ತಿ ಮಾಡಿಸಬಹುದು.
- ಮುಂದುವರೆದು, e-Governance ಇಲಾಖೆಯ ವತಿಯಿಂದ (KSWAN 2.0) 2 Mbps Optical Fibre Network Connectivity ಒದಗಿಸಲು ಕ್ರಮ ಜರುಗಿಸಲಾಗಿರುತ್ತದೆ. ಈ ಕಾರ್ಯವು ಪೂರ್ಣಗೊಂಡ ನಂತರ 4 G-WiFi ಸಂಪರ್ಕವನ್ನು ಸ್ಥಗಿತಗೊಳಿಸಿ KSWAN ಸಂಪರ್ಕ ಮುಂದುವರೆಸುವುದು.
- ಹೊಸದಾಗಿ ಖರೀದಿ ಮಾಡಬೇಕಾದ 4G-WiFi ಸಂಪರ್ಕ ಹಾಗೂ ಹೊಸ ಬ್ಯಾಟರಿಗಳ ವೆಚ್ಚಗಳನ್ನು ಕೃಷಿ ಆಯುಕ್ತಾಲಯ ಲೆಕ್ಕ ಶೀರ್ಷಿಕೆ: 2401-00-001-1-01 ನ ಉಪ ಶೀರ್ಷಿಕೆ: 051 (ಗಣಕಯಂತ್ರ ಸ್ಥಾಪನೆ & ಸಿಯುಜಿ ವೆಚ್ಚಗಳು)ರಡಿ ನಿಯಮಾನುಸಾರ ಭರಿಸುವುದು.
- ಕೆ-ಕಿಸಾನ್ ಯೋಜನೆಯಡಿ ಸರಬರಾಜಾದ ಯಾವುದೇ devicesಗಳು ಕಳೆದುಹೋದಲ್ಲಿ, ಪೋಲೀಸ್ ಠಾಣೆಯಲ್ಲಿ ವರದಿ ಮಾಡಿ FIR ಪ್ರತಿಯನ್ನು ವಿಳಂಬ ಮಾಡದೇ ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

## IV. ಸಿಯುಜಿ ಸಿಮ್ ಕಾರ್ಡ್ ಗಳ ವಿತರಣೆ ಹಾಗೂ ಮಾಸಿಕ ಪಾವತಿ ಕುರಿತು ಅನುಸರಿಸಬೇಕಾದ ಅಂಶಗಳು:

1. ಸಿ.ಯು.ಜಿ. ಸಂಪರ್ಕಗಳನ್ನು ಒದಗಿಸುವ ಸಂಸ್ಥೆಗೆ ಪ್ರತಿ ಮಾಹೆಯು ತಪ್ಪದೇ ಶುಲ್ಕವನ್ನು ಪಾವತಿಸುವುದು.
2. ನಿವೃತ್ತಿ ಹೊಂದಿದ ಹಾಗೂ ವರ್ಗಾವಣೆ ಹೊಂದಿದ ಅಧಿಕಾರಿಗಳಿಂದ ಕೂಡಲೇ ಸಿಮ್ ಕಾರ್ಡ್ ನ್ನು ಹಿಂಪಡೆಯುವುದು.
3. ಹಿಂಪಡೆದ ಸಿಮ್ ಕಾರ್ಡ್ ನ್ನು ಇಲಾಖೆಯ ಕ್ಷೇತ್ರ ಮಟ್ಟದ ತಾಂತ್ರಿಕ ಅಧಿಕಾರಿಗಳಿಗೆ ಮಾತ್ರ ವಿತರಿಸುವುದು ಮತ್ತು ಇಲಾಖೆಯ ಇತರೆ ಸಿಬ್ಬಂದಿ ವರ್ಗದವರಿಗೆ ವರ್ಗಾಯಿಸಬಾರದು.

**ಮುಖ್ಯವಾದ ಸೂಚನೆ:** ಕಳೆದು ಹೋದ ಸಿ.ಯು.ಜಿ. ಸಿಮ್ ಕಾರ್ಡ್ ಗಳಿಗೆ ಅದೇ ಸಂಖ್ಯೆಗೆ ಹೊಸ ಸಿಮ್ ಕಾರ್ಡ್ ನ್ನು ನೀಡುವಂತೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ letter head ನಲ್ಲಿ 30 ದಿನಗಳ ಒಳಗೆ ಸಲ್ಲಿಸುವುದು.

## FRUITS ಮತ್ತು KKISAN ತಂತ್ರಾಂಶಗಳು:

ಕರ್ನಾಟಕ ರಾಜ್ಯ ಸರ್ಕಾರ 2018 ಅಕ್ಟೋಬರ್ ನಿಂದ FRUITS (Farmer Registration and Unified Beneficiary Information System) ತಂತ್ರಾಂಶದಲ್ಲಿ ರೈತರ ನೋಂದಣಿಯನ್ನುಖಡ್ಡಾಯಗೊಳಿಸಿದೆ.ಈ ತಂತ್ರಾಂಶವು ಇ-ಆಡಳಿತ ಇಲಾಖೆಯಿಂದ ಅಭಿವೃದ್ಧಿಪಡಿಸಿದ್ದು, ರೈತರು ಒಂದು ಬಾರಿ ಮಾತ್ರ ಕೃಷಿ/ ತೋಟಗಾರಿಕೆ/ ರೇಷ್ಮೆ/ ಪಶುಸಂಗೋಪನೆ ಯಾವುದಾದರೊಂದು ಇಲಾಖೆಯಿಂದ ನೋಂದಾಯಿಸಿಕೊಳ್ಳುವುದು. ನೋಂದಾಯಿಸಿಕೊಳ್ಳಲು ಪಾಸ್ ಪೋರ್ಟ್ ಗಾತ್ರದ ಫೋಟೋ, ಆಧಾರ್ ಕಾರ್ಡ್ ಪ್ರತಿ, ಪಹಣಿ (RTC), ಬ್ಯಾಂಕ್ ವಿವರ, ಜಾತಿ ಪ್ರಮಾಣ ಪತ್ರ ದಾಖಲಾತಿಗಳನ್ನು ಸಲ್ಲಿಸಬೇಕು. ನೋಂದಾಯಿಸಿಕೊಂಡ ರೈತರಿಗೆ ರೈತರ ನೋಂದಣಿ ಸಂಖ್ಯೆ (Farmer identity number FID) ಸೃಷ್ಟಿಯಾಗುತ್ತದೆ. FRUITS ತಂತ್ರಾಂಶದಲ್ಲಿ ನೋಂದಾಯಿಸಲು ರೈತರ ಜಮೀನಿನ ವಿವರವನ್ನು ಕಂದಾಯ ಇಲಾಖೆಯ Bhoomi ವೆಬ್ ಸರ್ವೀಸಸ್ ನಿಂದ ಪಡೆಯಲಾಗುತ್ತದೆ. ಈ FRUITS ತಂತ್ರಾಂಶದ ಮಾಹಿತಿಯು ಕೃಷಿ ಇಲಾಖೆಯ KKISAN ತಂತ್ರಾಂಶಕ್ಕೆ ಲಿಂಕ್ ಆಗಿರುತ್ತದೆ.

KKISAN ತಂತ್ರಾಂಶವನ್ನು ಕೃಷಿ ಇಲಾಖೆಯಿಂದ National Informatics Centre ರವರಿಂದ ಅಭಿವೃದ್ಧಿ ಪಡಿಸಲಾಗಿದೆ. ಕೃಷಿ ಇಲಾಖೆಯ ಎಲ್ಲಾ ಯೋಜನೆಗಳ ಫಲಾನುಭವಿಗಳು FRUITS ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಕೃಷಿ ಇಲಾಖೆಯ ವಿವಿಧ ಯೋಜನೆಗಳಾದ ಕೃಷಿ ಯಾಂತ್ರೀಕರಣ, ಕೃಷಿ ಭಾಗ್ಯ ಯೋಜನೆ, ಸೂಕ್ಷ್ಮ ನೀರಾವರಿ ಯೋಜನೆ, ಕೃಷಿ ಸಂಸ್ಕರಣೆ, ಬಿತ್ತನೆ ಬೀಜ, ಪೀಡೆನಾಶಕ, ಸಿಂಪರಣಾ ಉಪಕರಣಗಳು, ನೇರ ಸೌಲಭ್ಯ ವರ್ಗಾವಣೆ (DBT) ಅಡಿಯಲ್ಲಿ ಸವಲತ್ತುಗಳನ್ನು ಪಡೆಯಲು KKISAN ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ. ರೈತರು ತಾವೇ KKISAN ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಬಹುದು ಅಥವಾ ಹತ್ತಿರದ ಹೋಬಳಿಯ ರೈತ ಸಂಪರ್ಕ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬಹುದು.

## 2020-21 ನೇ ಸಾಲಿನ ಕೃಷಿ ಆಯುಕ್ತಾಲಯ ಲೆಕ್ಕ ಶೀರ್ಷಿಕೆ: 2401-00-001-1-01 ಉಪ ಶೀರ್ಷಿಕೆ: 051 (ಇತರೆ ವೆಚ್ಚ ಗಣಕಕೇಂದ್ರ ಸ್ಥಾಪನೆ) ರಡಿ ಜಿಲ್ಲಾವಾರು ಕಾರ್ಯಕ್ರಮ

**(ಆರ್ಥಿಕ – ರೂ.ಲಕ್ಷಗಳಲ್ಲಿ)**

| ಕ್ರ. ಸಂ. | ಜಿಲ್ಲೆಗಳು | ಸಿಯುಜಿ ವೆಚ್ಚ | AMC | ಗಣಕಯಂತ್ರ ಖರೀದಿ | ಗಣಕಯಂತ್ರಗಳ ಉಪಭೋಗ್ಯ ಸಾಧನಗಳು | ಕೆ-ಕಿಸಾನ್ ಯೋಜನಾ ವೆಚ್ಚ (ತಂತ್ರಾಂಶ ಅಭಿವೃದ್ಧಿ ಸೇರಿದಂತೆ) ಹಾಗೂ Schemes Rationalisation | ಒಟ್ಟು |
|---|---|---|---|---|---|---|---|
| 1 | ಬಾಗಲಕೋಟೆ | 2.87 | 0.43 | 0.00 | 0.90 | 0.00 | 4.20 |
| 2 | ಬೆಂಗಳೂರು (ಗ್ರಾ) ಹಾಗೂ ನಗರ | 2.34 | 0.43 | 0.00 | 0.80 | 0.00 | 3.57 |
| 3 | ಬೆಳಗಾವಿ | 9.64 | 0.71 | 0.00 | 1.30 | 0.00 | 11.65 |
| 4 | ಬಳ್ಳಾರಿ | 3.03 | 0.50 | 0.00 | 1.00 | 0.00 | 4.53 |
| 5 | ಬೀದರ್ | 3.24 | 0.36 | 0.00 | 0.80 | 0.00 | 4.40 |
| 6 | ಚಾಮರಾಜನಗರ | 3.96 | 0.28 | 0.00 | 0.60 | 0.00 | 4.84 |
| 7 | ಚಿಕ್ಕಬಳ್ಳಾಪುರ | 1.87 | 0.43 | 0.00 | 0.90 | 0.00 | 3.20 |
| 8 | ಚಿಕ್ಕಮಗಳೂರು | 0.94 | 0.50 | 0.00 | 1.00 | 0.00 | 2.44 |
| 9 | ಚಿತ್ರದುರ್ಗ | 2.40 | 0.43 | 0.00 | 0.90 | 0.00 | 3.73 |
| 10 | ದಕ್ಷಿಣ ಕನ್ನಡ | 3.59 | 0.36 | 0.00 | 0.80 | 0.00 | 4.75 |
| 11 | ದಾವಣಗೆರೆ | 1.03 | 0.43 | 0.00 | 0.90 | 0.00 | 2.36 |
| 12 | ಧಾರವಾಡ | 3.87 | 0.36 | 0.00 | 0.80 | 0.00 | 5.03 |
| 13 | ಗದಗ | 2.53 | 0.36 | 0.00 | 0.80 | 0.00 | 3.69 |
| 14 | ಹಾಸನ | 2.00 | 0.57 | 0.00 | 1.10 | 0.00 | 3.67 |
| 15 | ಹಾವೇರಿ | 4.34 | 0.50 | 0.00 | 1.00 | 0.00 | 5.84 |
| 16 | ಕಲಬುರ್ಗಿ | 2.75 | 0.50 | 0.00 | 1.00 | 0.00 | 4.25 |
| 17 | ಕೊಡಗು | 2.12 | 0.21 | 0.00 | 0.50 | 0.00 | 2.83 |
| 18 | ಕೋಲಾರ | 0.94 | 0.36 | 0.00 | 0.80 | 0.00 | 2.10 |
| 19 | ಕೊಪ್ಪಳ | 1.97 | 0.28 | 0.00 | 0.60 | 0.00 | 2.85 |
| 20 | ಮಂಡ್ಯ | 2.87 | 0.50 | 0.00 | 1.00 | 0.00 | 4.37 |
| 21 | ಮೈಸೂರು | 2.81 | 0.50 | 0.00 | 1.00 | 0.00 | 4.31 |
| 22 | ರಾಯಚೂರು | 3.03 | 0.36 | 0.00 | 0.80 | 0.00 | 4.19 |
| 23 | ರಾಮನಗರ | 3.74 | 0.28 | 0.00 | 0.60 | 0.00 | 4.62 |
| 24 | ಶಿವಮೊಗ್ಗ | 1.78 | 0.50 | 0.00 | 1.00 | 0.00 | 3.28 |
| 25 | ತುಮಕೂರು | 3.65 | 0.71 | 0.00 | 1.30 | 0.00 | 5.66 |

| ಕ್ರ. ಸಂ. | ಜಿಲ್ಲೆಗಳು | ಸಿಯುಜಿ ವೆಚ್ಚ | AMC | ಗಣಕಯಂತ್ರ ಖರೀದಿ | ಗಣಕಯಂತ್ರಗಳ ಉಪಭೋಗ್ಯ ಸಾಧನಗಳು | ಕೆ-ಕಿಸಾನ್ ಯೋಜನಾ ವೆಚ್ಚ (ತಂತ್ರಾಂಶ ಅಭಿವೃದ್ಧಿ ಸೇರಿದಂತೆ) ಹಾಗೂ Schemes Rationalisation | ಒಟ್ಟು |
|---|---|---|---|---|---|---|---|
| **26** | **ಉಡುಪಿ** | 3.71 | 0.21 | 0.00 | 0.50 | 0.00 | 4.42 |
| **27** | **ಉತ್ತರ ಕನ್ನಡ** | 0.90 | 0.78 | 0.00 | 1.40 | 0.00 | 3.08 |
| **28** | **ವಿಜಯಪುರ** | 1.87 | 0.36 | 0.00 | 0.80 | 0.00 | 3.03 |
| **29** | **ಯಾದಗಿರಿ** | 1.90 | 0.21 | 0.00 | 0.50 | 0.00 | 2.61 |
| **30** | **ಕೇಂದ್ರ ಕಛೇರಿ** | 4.21 | 6.50 | 14.91 | 0.50 | 354.38 | 380.50 |
| **ಒಟ್ಟು** | | **85.90** | **18.91** | **14.91** | **25.90** | **354.38** | **500.00** |

## 3. ಕೃಷಿ ಆಯುಕ್ತಾಲಯ " ಕಟ್ಟಡಗಳ ನಿರ್ವಹಣೆ " (ಲೆಕ್ಕ ಶೀರ್ಷಿಕೆ 2401-00-001-1-01 ಯೋಜನೆ ಉಪ ಶೀರ್ಷಿಕೆ 200)

2020-21 ನೇ ಸಾಲಿನ ಆಯವ್ಯಯದಲ್ಲಿ ಮೇಲಿನ ಲೆಕ್ಕ ಶೀರ್ಷಿಕೆಯಡಿ ರೂ.626.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಕೇಂದ್ರ ಕಛೇರಿ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿ, ಉಪ ಕೃಷಿ ನಿರ್ದೇಶಕರು ಕಛೇರಿ-1 ಮತ್ತು 2, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರೈತ ಸಂಪರ್ಕ ಕೇಂದ್ರಗಳು ಹಾಗೂ ವಿವಿಧ ಪ್ರಯೋಗಾಲಯಗಳ ಕಛೇರಿ ಕಟ್ಟಡಗಳ ಅಭಿವೃದ್ದಿ ಹಾಗೂ ಇತರೆ ಇಲಾಖಾ ಕಟ್ಟಡಗಳ ನವೀಕರಣ, ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿಗಳ ವೆಚ್ಚವನ್ನು ಈ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸಲಾಗುವುದು.

**ಕೈಗೊಳ್ಳಬಹುದಾದ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.**

### ಅನುಬಂಧ-1

### ಇಲಾಖೆಯ ವಿವಿಧ ಕಛೇರಿ ಕಟ್ಟಡಗಳಿಗೆ ತೀರಾ ಅವಶ್ಯವಿರುವ

1. ನೀರು ಸರಬರಾಜು ಮತ್ತು ಒಳಚರಂಡಿ ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿ.
2. ವಿದ್ಯು   ಸರಬರಾಜು ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿ.
3. ಕಟ್ಟಡಗಳ ಶೌಚಾಲಯ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ
4. ಕಛೇರಿ ಆವರಣದಲ್ಲಿರುವ ರಸ್ತೆ ದುರಸ್ತಿ ಕಾಮಗಾರಿ.
5. ಕಟ್ಟಡಗಳ ಮೇಲ್ಚಾವಣಿ ದುರಸ್ತಿ ಹಾಗೂ ಮಳೆ ನೀರು ಕೊಯ್ಲು ಕಾಮಗಾರಿ.
6. ಕಛೇರಿ ಕಟ್ಟಡಗಳ ಬಣ್ಣ ಬಳಿಯುವ ಕಾಮಗಾರಿ.
7. ರೈತ ಸಂಪರ್ಕ ಕೇಂದ್ರಗಳ ಮತ್ತು ಇತರೆ ಇಲಾಖಾ ಕಟ್ಟಡಗಳ ಕಾಂಪೌಂಡ್ ನಿರ್ಮಾಣ ಕಾಮಗಾರಿ.
8. ಬೆಂಕಿ ನಂದಿಸುವ ಉಪಕರಣಗಳ ಖರೀದಿ ಕಾಮಗಾರಿ.
9. ಸೋಲಾರ್, ಯು.ಪಿ.ಎಸ್ ಹಾಗೂ ಬೀದಿ ದೀಪಗಳ ನಿರ್ವಹಣೆ ಹಾಗೂ ದುರಸ್ತಿ (ಕೇಂದ್ರ ಕಛೇರಿಗೆ ಮಾತ್ರ ಅನ್ವಯ).
10. ಹವಾ ನಿಯಂತ್ರಣಗಳ ನಿರ್ವಹಣೆ ಹಾಗೂ ದುರಸ್ತಿ ಕಾಮಗಾರಿ (ಕೇಂದ್ರ ಕಛೇರಿಗೆ ಮಾತ್ರ ಅನ್‌ವಯ).
11. ಎಫ್-ಬ್ಲಾಕಿನಲ್ಲಿರುವ ಲಿಫ್ಟಿನ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ (ಕೇಂದ್ರ ಕಛೇರಿಗೆ ಮಾತ್ರ ಅನ್ವಯ).
12. ಜನರೇಟರ್ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ (ಕೇಂದ್ರ ಕಛೇರಿಗೆ ಮಾತ್ರ ಅನ್ವಯ).
13. ಅವಶ್ಯವಿರುವ ಇತರೆ ಕಾಮಗಾರಿಗಳು.

## ಕಾಮಗಾರಿ ಕೈಗೊಳ್ಳಲು ಮಾರ್ಗಸೂಚಿಗಳು

1. ಜಿಲ್ಲಾ ಜಂಟಿ ಕೃಷಿ ನಿದೇಶಕರು ಅಧೀನ ಕಛೇರಿಗಳಿಂದ ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅತೀ ಅವಶ್ಯವಿರುವ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲು ಕಟ್ಟಡದ ವಸ್ತು ಸ್ಥಿತಿಯ Colour Photo ಗಳೊಂದಿಗೆ ಅವಶ್ಯವಿರುವ ಅನುದಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಸಲ್ಲಿಸುವುದು (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಪ್ರಸ್ತಾವನೆಗಳನ್ನು ಮಾತ್ರ ಮಾನ್ಯ ಮಾಡಲಾಗುವುದು)
2. ಕಾಮಗಾರಿಗಳನ್ನು KTPP ನಿಯಮಾನುಸಾರ ಕೈಗೊಳ್ಳುವುದು.
3. ಸಿವಿಲ್ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ಅಥವಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮುಖಾಂತರ ಕೈಗೊಳ್ಳುವುದು. ಇತರೆ ಸಂಸ್ಥೆಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾದಲ್ಲಿ ಕೇಂದ್ರ ಕಛೇರಿಯ ಆದೇಶ ಸಂ 01/2017-18, ದಿನಾಂಕ:05.03.2018 ರ ಮಾರ್ಗ ಸೂಚಿಯನ್ವಯ ಕಾಮಗಾರಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು. ತಪ್ಪಿದ್ದಲ್ಲಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
4. ನಿರ್ದಿಷ್ಟ ಕಾಮಗಾರಿಯನ್ನು ಕೈಗೊಳ್ಳಲು ಕೇಂದ್ರ ಕಛೇರಿಯಿಂದ ಜಿಲ್ಲೆಗಳಿಗೆ ಅನುದಾನ ಬಿಡುಗಡೆಯಾದ ನಂತರ ಕಾಮಗಾರಿಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.
5. ಪ್ರತಿ ಮಾಹೆಯ 5 ನೇ ತಾರೀಖಿನ ಒಳಗೆ ಕಾಮಗಾರಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಇಂಜಿನಿಯರಿಂಗ್ ವಿಭಾಗಕ್ಕೆ ಸಲ್ಲಿಸುವುದು e-mail:agrieng@nic.in

ಕಟ್ಟಡ ವೆಚ್ಚಗಳು ಲೆಕ್ಕ ಶೀರ್ಷಿಕೆ: **2401-00-001-1-01** ಉಪ ಲೆಕ್ಕ ಶೀರ್ಷಿಕೆ: **071**

**2020-21** ನೇ ಸಾಲಿನ ಕೃಷಿ ನಿರ್ದೇಶನಾಲಯ (ಯೋಜನೆ) ಲೆಕ್ಕ ಶೀರ್ಷಿಕೆ: **2401-00-00-1-01,** ಉಪ ಲೆಕ್ಕ ಶೀರ್ಷಿಕೆ:**071,** ಕಟ್ಟಡ ವೆಚ್ಚಗಳು ಅಡಿಯಲ್ಲಿ ರೂ.**140.00** ಲಕ್ಷಗಳನ್ನು ಒದಗಿಸಲಾಗಿದ್ದು, ಅನುಬಂಧದಲ್ಲಿ ನಮೂದಿಸಿರುವಂತೆ ವಿವಿಧ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಲಾಗಿದೆ.

ಕೃಷಿ ನಿರ್ದೇಶನಾಲಯ (ಯೋಜನೆ) ಅಡಿಯಲ್ಲಿ, ಉಪ ಲೆಕ್ಕ ಶೀರ್ಷಿಕೆ: **071 -** ಕಟ್ಟಡ ವೆಚ್ಚಗಳು ಅಡಿಯಲ್ಲಿ ತಮ್ಮ ಅಧೀನ ಕಛೇರಿಗಳ ಬಾಡಿಗೆಯನ್ನು ಪಾವತಿ ಮಾಡುವ ಸಲುವಾಗಿ ಈ ಪತ್ರದ ಅನುಬಂಧದಲ್ಲಿ ತೋರಿಸಿರುವಂತೆ ಎಲ್ಲಾ **30** ಜಿಲ್ಲೆಗಳಿಗೆ ಒದಗಿಸಲಾಗಿದೆ. ಕೇಂದ್ರ ಕಛೇರಿಯ ಲೆಕ್ಕ ಶಾಖೆಯಿಂದ ಕಾಲಕಾಲಕ್ಕೆ ಬಿಡುಗಡೆ ಮಾಡುವ ಅನುದಾನವನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಕಛೇರಿ ಕಟ್ಟಡ ಬಾಡಿಗೆ ಮತ್ತು ಇತರೆ ಸಂಬಂಧಿತ ವೆಚ್ಚಗಳು ಅಂದರೆ ತೆರಿಗೆ ಮತ್ತು ಶುಲ್ಕಗಳ ಸಂದಾಯಕ್ಕೆ ಬಳಸಲು ಅನುಮತಿಸಿದೆ.

1. ಬಾಡಿಗೆಯನ್ನು ಸಕ್ರಮ ಪ್ರಾಧಿಕಾರಿಯವರಿಂದ ಮಂಜೂರಾತಿ ಪಡೆದು ಪಾವತಿ ಮಾಡತಕ್ಕದು.
2. ಪ್ರತಿ ಕಟ್ಟಡದ ಬಾಡಿಗೆ ಸಂದಾಯ ಕುರಿತು ವೆಚ್ಚದ ವಹಿಯನ್ನು ನಿರ್ವಹಿಸತಕ್ಕದು.
3. ಒಂದು ವರ್ಷಕ್ಕಿಂತ ಹಿಂದಿನ ಅವಧಿಗೆ ಬಾಡಿಗೆಯನ್ನು ಪಾವತಿ ಮಾಡಲು ವಿಳಂಬ ವಿನಾಯ್ತಿ

   ಆದೇಶವನ್ನು ಪಡೆದಿರಬೇಕು/ ಸುತ್ತೋಲೆ ಸಂಖ್ಯೆ:ರೈ.ಸಂ.ಕೇ/ತಾ-**2/**ಸ.ಕೃ.ನಿ.ಬಾ/**09-10/405,** ದಿನಾಂಕ: **29-10-2009** ರ ಪ್ರಕಾರ ಕ್ರಮಕೈಗೊಳ್ಳುವುದು.
4. ಸದರಿ ಯೋಜನೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ರೈತ ಸಂಪರ್ಕ ಕೇಂದ್ರಗಳ ಕಟ್ಟಡ ಬಾಡಿಗೆ ಪಾವತಿಸಲು ಬರುವುದಿಲ್ಲ.

ಬಾಡಿಗೆ ಪಾವತಿ ಮಾಡಿದ ನಂತರ ಈ ಬಗ್ಗೆ ಪೂರ್ಣ ಮಾಹಿತಿಯುಳ್ಳ ವರದಿಯನ್ನು ಕೇಂದ್ರ ಕಛೇರಿಯ, ಮುಖ್ಯ ಲೆಕ್ಕಾಧಿಕಾರಿಗ**ಳು, ಲೆಕ್ಕ ವಿಭಾಗ,** ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು. ಒಂದು ವೇಳೆ ಜಿಲ್ಲಾ ಪಂಚಾಯ್ತಿ ವತಿಯಿಂದ ಕಛೇರಿಗಳ ಬಾಡಿಗೆಗಾಗಿ ಅನುದಾನವನ್ನು ಬಿಡುಗಡೆ ಮಾಡಿದ್ದಲ್ಲಿ ಇಲಾಖೆಯ ವತಿಯಿಂದ ಬಿಡುಗಡೆ ಮಾಡಿರುವ ಅನುದಾನವನ್ನು ಅದ್ಯರ್ಪಣೆ ಮಾಡತಕ್ಕದ್ದು. ಜಿಲ್ಲಾ ಪಂಚಾಯ್ತಿಗಳಿಂದ ಈ ಹಿಂದೆ ಬಾಡಿಗೆ ಪಾವತಿ ಮಾಡಿದ್ದಲ್ಲಿ ಯಾವ ಅವಧಿಯವರೆಗೆ ಬಾಡಿಗೆಯನ್ನು ಪಾವತಿ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡತಕ್ಕದ್ದು.

ಸೂಚನೆಃ

- ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಕಟ್ಟಡದಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಂತಹ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಿಗೆ ಈ ಘಟಕದಡಿ ಹೆಚ್ಚಿನ ಅನುದಾನವನ್ನು ನೀಡಿರುವುದರಿಂದ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ವೆಚ್ಚದಲ್ಲಿ ರೈತ ಸಂಪರ್ಕ ಕೇಂದ್ರದ ನಿರ್ವಹಣಾ ವೆಚ್ಚವನ್ನು ಸಹ ಬರಿಸಬಹುದು.
- ಈ ಯೋಜನೆಯಡಿ ಬಿಡುಗಡೆಯಾಗುವ ತ್ರೈಮಾಸಿಕ ಅನುದಾನವನ್ನು ಆಯಾ ತ್ರೈಮಾಸಿಕದಲ್ಲೇ ಪೂರ್ಣ ವೆಚ್ಚ ಮಾಡುವುದು. ಇಲ್ಲವಾದಲ್ಲಿ ಮುಂದಿನ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ.

ಕೃಷಿ ನಿರ್ದೇಶನಾಲಯ ಯೋಜನೆ ಮಾಸಿಕ ಪ್ರಗತಿ ವರದಿ
ಲೆಕ್ಕ ಶೀರ್ಷಿಕೆ **2401-00-001-1-01** ಕೃಷಿ ನಿರ್ದೇಶನಲಾಯ (ಯೋಜನೆ)
ಉಪ ಲೆಕ್ಕ ಶೀರ್ಷಿಕೆ **071-**ಜಮೀನು ಮತ್ತು ಕಟ್ಟಡಗಳು

ಜಿಲ್ಲೆ: ತಿಂಗಳ ವರದಿ----------

ಆರ್ಥಿಕ: ಲಕ್ಷ ರೂ.ಗಳಲ್ಲಿ

| ಸಂ | ಘಟಕಗಳು | ವಾರ್ಷಿಕ ಗುರಿ | ಹಿಂದಿನ ತಿಂಗಳವರೆಗಿನ | | ಈ ತಿಂಗಳ ಸಾಧಿಸಿದ ಪ್ರಗತಿ | | **ಒಟ್ಟು ಪ್ರಗತಿ** | | **ಷರಾ** |
|---|---|---|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾದನೆ | ಗುರಿ | ಸಾಧನೆ | |
| **1** | **071-** ಜಮೀನು ಮತ್ತು ಕಟ್ಟಡಗಳು | | | | | | | | |

ವಿ.ಸೂ. ಯಾವುದೇ ಘಟಕದಲ್ಲಿ ಸಾಧಿಸಿದ ಪ್ರಗತಿ ಪ್ರತಿಶತ **75** ಕ್ಕಿಂತ ಕಡಿಮೆ ಇದ್ದರೆ ಷರಾ ಕಾಲಂನಲ್ಲಿ ವಿವರಣೆ ಖಡ್ಡಾಯವಾಗಿ ನೀಡಬೇಕು.

**2020-21**ನೇ ಸಾಲಿನ ಕೃಷಿ ಆಯುಕ್ತಾಲಯ (ಯೋಜನೆ) ಲೆಕ್ಕ ಶೀರ್ಷಿಕೆ **2401-00-001-1-01,**
ಉಪ ಲೆಕ್ಕ ಶೀರ್ಷಿಕೆ: **071-** ಕಟ್ಟಡ ವೆಚ್ಚಗಳು ಅನುದಾನ ಹಂಚಿಕೆ ಪಟ್ಟಿ. (ಆರ್ಥಿಕ-ಲಕ್ಷ ಗಳಲ್ಲಿ)

| **ಕ್ರ. ಸಂ** | **ಜಿಲ್ಲೆ** | **ಉಕೃನಿ ಕಛೇರಿ (1&2)** | **ತಾಲ್ಲೂಕು ಸಂಖ್ಯೆ** | **ರೈತ ಸಂಪರ್ಕ ಕೇಂದ್ರುಗಳ ಸಂಖ್ಯೆ** | **ಕಟ್ಟಡ ವೆಚ್ಚಗಳು, ಬಾಡಿಗೆ** | ತೆರಿಗೆ ಮತ್ತು ಶುಲ್ಕಗಳ ಸಂದಾಯ ವೆಚ್ಚ/ ವರ್ಷ** (ಲಕ್ಷಗಳು) | ಸ.ಕೃ.ನಿ ಕಛೇರಿಗಳಲ್ಲಿ ಇರುವ ರೈ.ಸಂ.ಕೇ.ಗಳ ನಿರ್ವಹಣಾ ವೆಚ್ಚ. **(ಲಕ್ಷಗಳಲ್ಲಿ) | | ಒಟ್ಟು ಅನುದಾನ (ರೂ. ಲಕ್ಷಗಳು) |
|---|---|---|---|---|---|---|---|---|---|
| | | | | | (ಬಾಡಿಗೆ ಕಟ್ಟಡಗಳಲ್ಲಿರುವ ಕಛೇರಿಗಳಿಗೆ ಮಾತ್ರ ಮೀಸಲು) – ಲಕ್ಷಗಳು | | ಸ.ಕೃ.ನಿ ಕಛೇರಿಗಳಲ್ಲಿ ಇರುವ ರೈ.ಸಂ.ಕೇ.ಗಳ ಸಂ. | ಸ.ಕೃ.ನಿ ಕಛೇರಿಗಳಲ್ಲಿ ಇರುವ ರೈ.ಸಂ.ಕೇ.ಗಳ ನಿರ್ವಹಣಾ ವೆಚ್ಚ. **(ಲಕ್ಷಗಳಲ್ಲಿ) | |
| 1 | ಬಾಗಲಕೋಟೆ | 2 | 6 | 18 | 3.67 | 2.25 | 0 | 0.00 | 5.92 |
| 2 | ಬೆಂಗಳೂರು | 1 | 4 | 17 | 0.00 | 1.50 | 2 | 0.36 | 1.86 |
| 3 | ಬೆಂಗಳೂರು (ನ) | 0 | 2 | 11 | 0.00 | 0.50 | 1 | 0.18 | 0.68 |
| 4 | ಬೆಳಗಾವಿ | 2 | 10 | 35 | 0.93 | 3.25 | 3 | 0.54 | 4.72 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 5 | ಬಳ್ಳಾರಿ | 2 | 7 | 31 | 1.07 | 2.50 | 3 | 0.54 | 4.11 |
| 6 | ಬೀದರ್ | 2 | 5 | 30 | 0.00 | 4.00 | 0 | 0.00 | 4.00 |
| 7 | ವಿಜಯಪುರ | 2 | 5 | 20 | 0.00 | 2.00 | 0 | 0.00 | 2.00 |
| 8 | ಚಾಮರಾಜನ ಗರ | 1 | 4 | 16 | 0.50 | 1.50 | 3 | 0.54 | 2.54 |
| 9 | ಚಿಕ್ಕಬಳ್ಳಾಪು ರ | 2 | 6 | 26 | 3.31 | 1.25 | 3 | 0.54 | 5.10 |
| 10 | ಚಿಕ್ಕಮಗಳೂ ರು | 2 | 7 | 34 | 1.98 | 2.50 | 3 | 0.54 | 5.02 |
| 11 | ಚಿತ್ರದುರ್ಗ | 2 | 6 | 22 | 3.16 | 2.25 | 0 | 0.00 | 5.41 |
| 12 | ದಕ್ಷಿಣ ಕನ್ನಡ | 2 | 5 | 17 | 0.84 | 1.75 | 2 | 0.36 | 2.95 |
| 13 | ದಾವಣಗೆರೆ | 2 | 6 | 20 | 3.70 | 2.25 | 2 | 0.36 | 6.31 |
| 14 | ಧಾರವಾಡ | 2 | 5 | 14 | 2.00 | 2.00 | 1 | 0.18 | 4.18 |
| 15 | ಗದಗ | 2 | 5 | 11 | 1.99 | 2.00 | 2 | 0.36 | 4.35 |
| 16 | ಕಲಬುರಗಿ | 2 | 7 | 32 | 3.82 | 3.00 | 3 | 0.54 | 7.36 |
| 17 | ಹಾಸನ | 2 | 8 | 38 | 1.37 | 2.75 | 2 | 0.36 | 4.48 |
| 18 | ಹಾವೇರಿ | 2 | 7 | 19 | 6.00 | 2.50 | 1 | 0.18 | 8.68 |
| 19 | ಕೊಡಗು | 1 | 3 | 16 | 2.12 | 1.25 | 1 | 0.18 | 3.55 |
| 20 | ಕೋಲಾರ | 2 | 5 | 27 | 3.00 | 2.00 | 3 | 0.54 | 5.54 |
| 21 | ಕೊಪ್ಪಳ | 1 | 4 | 20 | 1.39 | 1.50 | 1 | 0.54 | 3.43 |
| 22 | ಮಂಡ್ಯ | 2 | 7 | 31 | 5.39 | 2.5 | 1 | 0.18 | 8.07 |
| 23 | ಮೈಸೂರು | 2 | 7 | 33 | 1.02 | 2.50 | 3 | 0.54 | 4.06 |
| 24 | ರಾಯಚೂರು | 2 | 5 | 37 | 2.00 | 2.00 | 0 | 0.00 | 4.00 |
| 25 | ರಾಮನಗರ | 1 | 4 | 18 | 3.80 | 1.50 | 3 | 0.54 | 5.84 |
| 26 | ಶಿವಮೊಗ್ಗ | 2 | 7 | 39 | 0.84 | 3.58 | 2 | 0.36 | 4.78 |
| 27 | ತುಮಕೂರು | 2 | 10 | 50 | 1.20 | 3.25 | 6 | 1.08 | 5.53 |
| 28 | ಉಡುಪಿ | 1 | 3 | 9 | 3.22 | 1.25 | 2 | 0.36 | 4.83 |
| 29 | ಉತ್ತರ ಕನ್ನಡ | 2 | 11 | 35 | 0.00 | 2.25 | 9 | 1.32 | 3.57 |
| 30 | ಯಾದಗಿರಿ | 1 | 3 | 16 | 5.70 | 1.25 | 1 | 0.18 | 7.13 |
|  | **ಒಟ್ಟು** | **51** | **174** | **742** | **64.02** | **64.58** | **63** | **11.40** | **140.00** |

** ಪ್ರತಿ ಸ.ಕೃ.ನಿ ಕಛೇರಿಗಳಿಲ್ಲಿ ಇರುವ ರೈ.ಸಂ.ಕೇ.ಗಳಿಗೆ ರೂ. 18,000/-ದವರೆಗೂ ಪ್ರತಿ ವರ್ಷ ನಿರ್ವಹಣಾ ವೆಚ್ಚ. ಭರಿಸಬಹುದಾಗಿರುತ್ತದೆ.

## II ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ: (2401-00-001-1-75)

ಸದರಿ ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ಕೇಂದ್ರ ಪುರಸ್ಕೃತ SMAM ಯಾಂತ್ರೀಕರಣ / NFSM ಯೋಜನೆಯಡಿ ಅನುಷ್ಠಾನ ಮಾಡಿದ SCP ಮತ್ತು TSP ಯೋಜನೆಗಳಿಗೆ ಪೂರಕ ಅನುದಾನವನ್ನಾಗಿ ಮಾತ್ರ ಬಳಸುವುದು. ಯಾವುದೇ ಕಾರಣಕ್ಕೂ ಒಂದೇ ಬಿಲ್ಲಿನಲ್ಲಿ ವೆಚ್ಚ ಭರಿಸಲು ಅವಕಾಶ ಇರುವುದಿಲ್ಲ.

2020-21ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನ ಈ ಕೆಳಕಂಡಂತಿರುತ್ತದೆ.

**(ಆರ್ಥಿಕ: ಲಕ್ಷ ರೂ.ಗಳಲ್ಲಿ)**

| ಕ್ರ. ಸಂ. | ಕಾರ್ಯಕ್ರಮ / ಯೋಜನೆ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ |
|---|---|---|---|
| 1 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ | 2401-00-001-1-75 | 141.00 |

# III ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ-

## _ಎನ್.ಎಫ್.ಎಸ್.ಎಂ- ಅಕ್ಕಿ, ದ್ವಿದಳಧಾನ್ಯ, ಒರಟುಧಾನ್ಯಗಳ(ಮುಸುಕಿನ ಜೋಳ) ಮತ್ತು ನ್ಯೂಟ್ರಿ ಸಿರಿಧಾನ್ಯ

## (National Food Security Mission-NFSM)

ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ದಡಿ **2020-21** ನೇ ಸಾಲಿನಲ್ಲಿ ಎನ್.ಎಫ್.ಎಸ್.ಎಂ-ಅಕ್ಕಿ**,**ದ್ವಿದಳಧಾನ್ಯ**,**ಒರಟುಧಾನ್ಯಗಳ(ಮುಸುಕಿನ ಜೋಳ) ಮತ್ತು ನ್ಯೂಟ್ರಿ ಸಿರಿಧಾನ್ಯ**,** ಹತ್ತಿ ಕಬ್ಬು ಮತ್ತು ಎಣ್ಣೆ ಕಾಳು ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. **2020-21** ನೇ ಸಾಲಿನಲ್ಲಿ ಎನ್.ಎಫ್.ಎಸ್.ಎಂ ಯೋಜನೆಯ ಕಾರ್ಯಕ್ರಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಶೇ.**60:40** ರ ಹಂಚಿಕೆ ಅನುಪಾತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

| ಕ್ರ.ಸಂ | ಎನ್.ಎಫ್.ಎಸ್.ಎಂ | ಅನು**ಷ್ಠಾ**ನಗೊಳಿಸಬೇಕಾದ ಜಿಲ್ಲೆಗಳು |
|---|---|---|
| 1 | **ಅಕ್ಕಿ ಕಾರ್ಯಕ್ರಮ** | ಒಟ್ಟು 07 ಜಿಲ್ಲೆಗಳು: ಬೆಳಗಾವಿ, ದಕ್ಷಿಣಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರಕನ್ನಡ, ಯಾದಗಿರಿ |
| 2 | ದ್ವಿದಳಧಾ**ನ್ಯ ಕಾರ್ಯಕ್ರಮ** | ರಾಜ್ಯದ ಎಲ್ಲಾ ಜಿಲ್ಲೆಗಳು: ಬಾಗಲಕೋಟೆ, ಬೆಂಗಳೂರು-ನಗರ, ಬೆಂಗಳೂರು -ಗ್ರಾ, ಬೆಳಗಾವಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣಕನ್ನಡ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರಕನ್ನಡ, ವಿಜಯಪುರ, ಯಾದಗಿರಿ |
| 3 | ಒರಟುಧಾನ್ಯಗಳು-**ಕಾರ್ಯಕ್ರಮ** (ಮುಸುಕಿನ ಜೋಳ) | ಒಟ್ಟು 09 ಜಿಲ್ಲೆಗಳು: ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಹಾವೇರಿ, ವಿಜಯಪುರ |
| 4 | ನ್ಯೂಟ್ರಿಸಿರಿಧಾನ್ಯಗಳು **ಕಾರ್ಯಕ್ರಮ** | ಒಟ್ಟು 25 ಜಿಲ್ಲೆಗಳು:<br>ರಾಗಿ: ಬೆಂಗಳೂರು)ನಗರ(, ಬೆಂಗಳೂರು) ಗ್ರಾ(, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು<br>ಸಜ್ಜೆ: ಬಾಗಲಕೋಟೆ, ಬಳ್ಳಾರಿ, ಕಲಬುರಗಿ, |

| ಕ್ರ.ಸಂ | ಎನ್.ಎಫ್.ಎಸ್.ಎಂ | ಅನು**ಷ್ಠಾ**ನಗೊಳಿಸಬೇಕಾದ ಜಿಲ್ಲೆಗಳು |
|---|---|---|
| | | ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ<br>ಜೋಳ: ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ<br>ಇತರೆ)ಹಾರಕ, ಸಾಮೆ, ಊದಲು, ಬರಗು,ನವಣೆ (: ಬಳ್ಳಾರಿ, ಚಿತ್ರದುರ್ಗ, ಕೊಪ್ಪಳ, ತುಮಕೂರು |
| 5 | ಹತ್ತಿ **ಕಾರ್ಯಕ್ರಮ** | 7 ಜಿಲ್ಲೆಗಳು: ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರಗಿ, ಹಾವೇರಿ, ರಾಯಚೂರು, ಯಾದಗೀರ್ |
| 6 | ಕಬ್ಬು **ಕಾರ್ಯಕ್ರಮ** | 6 ಜಿಲ್ಲೆಗಳು: ಬಾಗಲಕೋಟೆ , ಬೆಳಗಾವಿ, ಬೀದರ್, ದಾವಣಗೆರೆ, ಕಲಬುರಗಿ, ಮಂಡ್ಯ |
| 7 | ಕಬ್ಬು + ಅಂತರ ಬೆಳೆ **ಕಾರ್ಯಕ್ರಮ** | 12 ಜಿಲ್ಲೆಗಳು: ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ದಾವಣಗೆರೆ, ಧಾರವಾಡ, ಕಲಬುರಗಿ, ಹಾವೇರಿ, ಮಂಡ್ಯ, ಮೈಸೂರು, ಉತ್ತರ ಕನ್ನಡ, ವಿಜಯಪುರ . |
| 8 | ಎಣ್ಣೆಕಾಳು **ಕಾರ್ಯಕ್ರಮ** | 27 ಜಿಲ್ಲೆಗಳು: ಬಾಗಲಕೋಟೆ, ಬೆಂಗಳೂರು)ಗ್ರಾ&ನಗರ(, ಬೆಳಗಾವಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ವಿಜಯಪುರ, ಯಾದಗಿರಿ |

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

- ✓ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ  ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗದಿಪಡಿಸಿ ಬಿಡುಗಡೆಗೊಳಿಸಲಾಗುವುದು.
- ✓ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಟ ಶೇ.33 ರಷ್ಟನ್ನು ಮೀಸಲಿರಿಸುವುದು.
- ✓ ಮಹಿಳಾ ರೈತರಿಗೆ ಅನುದಾನದ ಕನಿಷ್ಟ ಶೇ.30 ರಷ್ಟನ್ನು ಮೀಸಲಿರಿಸುವುದು.

- ✓ ಒಂದು ಹಂಗಾಮಿನಲ್ಲಿ ಯೋಜನೆಯ ವಿವಿಧ ಘಟಕಗಳಡಿ ಸಹಾಯಾನುದಾನವನ್ನು ಪಡೆಯಲು ಎಲ್ಲಾ ವರ್ಗದ ರೈತರಿಗೂ 5 ಹೆಕ್ಟೇರ್‍ಗಳವರೆಗೆ ಕ್ಷೇತ್ರ ವಿಸ್ತೀರ್ಣವನ್ನು ಮಿತಿಗೊಳಿಸಲಾಗಿರುತ್ತದೆ.
- ✓ ಒಂದು ಹಂಗಾಮಿನಲ್ಲಿ ಪ್ರಾತ್ಯಕ್ಷಿಕೆಯಡಿ ಸಹಾಯಾನುದಾನವನ್ನು ಪಡೆಯಲು ಎಲ್ಲಾ ವರ್ಗದ ಫಲಾನುಭವಿ ರೈತರುಗಳಿಗೆ 2 ಹೆಕ್ಟೇರ್‍ಗಳವರೆಗೆ ಕ್ಷೇತ್ರ ವಿಸ್ತೀರ್ಣವನ್ನು ಮಾತ್ರ ಮಿತಿಗೊಳಿಸಲಾಗಿರುತ್ತದೆ
- ✓ ಅಧ್ಯಕ್ಷರು, ಜಿಲ್ಲಾ ಮಟ್ಟದ ಆಹಾರ ಭದ್ರತಾ ಅಭಿಯಾನ ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜ ಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜ ಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ ದೃಢಪಡಿಸಿಕೊಳ್ಳುವುದು.
- ✓ ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃ.ವಿ.ವಿಯ ವಲಯ ಸಂಶೋಧನಾ ಕೇಂದ್ರಗಳು, ಕೆ.ವಿ.ಕೆಗಳು, ATMA, NGO ಗಳು ಮತ್ತು ಸಹ ಇಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ವಹಿಸುವುದು.
- ✓ ಜಿಲ್ಲಾ ಮಟ್ಟದ ಯೋಜನಾ ನಿರ್ವಹಣೆ ತಂಡವು ಸಂಶೋಧನಾ ಕೇಂದ್ರಗಳು ಮತ್ತು ಸಹ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

## 2020-21 **ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.**

I. **ಪ್ರಾತ್ಯಕ್ಷಿಕೆಗಳು:** ಎನ್.ಎಫ್.ಎಸ್.ಎಂ-ಅಕ್ಕಿ**,** ದ್ವಿದಳಧಾನ್ಯಗಳು**,** ಒರಟುಧಾನ್ಯಗಳು ಮತ್ತು ನ್ಯೂಟ್ರಿಸಿರಿಧಾನ್ಯಗಳು

- ✓ ಅಕ್ಕಿ, ದ್ವಿದಳಧಾನ್ಯ, ಒರಟುಧಾನ್ಯ, ನ್ಯೂಟ್ರಿಸಿರಿಧಾನ್ಯ ಬೆಳೆಗಳಲ್ಲಿ ನೂತನ/ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿ ಏಕ ಬೆಳೆ, ದ್ವಿದಳಧಾನ್ಯ ಅಂತರಬೆಳೆ ಮತ್ತು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
- ✓ ಪ್ರಾತ್ಯಕ್ಷಿಕೆಗಳಡಿ ಉಪಯೋಗಿಸುವ ಬಿತ್ತನೆ ಬೀಜ ತಳಿಗಳು 10 ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳಾಗಿರಬೇಕು.
- ✓ ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 100 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstrations) ಪದ್ಧತಿಯಲ್ಲಿ ಏರ್ಪಡಿಸುವುದು.
- ✓ ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು. ಕಡಿಮೆ ಇಳುವರಿ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ✓ ಒಂದು ಗುಚ್ಛ ಪ್ರದೇಶದಲ್ಲಿ ಒಳಪಡುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಸುವುದು.

- ✓ ಅಕ್ಕಿ ಬೆಳೆಯಲ್ಲಿ ನೇರ ಬಿತ್ತನೆ/ ಯಾಂತ್ರೀಕೃತ/ಸಾಲು ನಾಟಿ/ SRI ಪ್ರಾತ್ಯಕ್ಷಿಕೆ, ಸಂಕರಣ ಅಕ್ಕಿ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು. ಒತ್ತಡ ಸಹಿಷ್ಣುತೆ-ಬರ ನಿರೋಧಕ ತಳಿಗಳ ಪ್ರಾತ್ಯಕ್ಷಿಕೆಯನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರ ಸಹಯೋಗದೊಂದಿಗೆ ಆಯೋಜಿಸುವುದು
- ✓ ಎನ್.ಎಫ್.ಎಸ್.ಎಂ-ಅಕ್ಕಿ, ದ್ವಿದಳಧಾನ್ಯಗಳು ಕಾರ್ಯಕ್ರಮಗಳಡಿ ಶೇ.30 ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು. ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಯಲ್ಲಿ ಬೆಳೆಗಳÀನ್ನು ಅನುಕ್ರಮವಾಗಿ ಅದೇ ತಾಕಿನಲ್ಲಿ ಬೆಳೆಯುವುದು. ಬೆಳೆ ಪದ್ಧತಿ ಆಧಾರಿತ (Cropping System Based)ಪ್ರಾತ್ಯಕ್ಷಿಕೆಗಳನ್ನು ಭತ್ತದ ಬೆಳೆಯ ಕಟಾವಿನ ನಂತರÀ ಅಲಸಂದೆ/ಕಡಲೆ/ಹೆಸರು/ಉದ್ದು ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವ ಬಗ್ಗೆ ಆಯೋಜಿಸುವುದು.
- ✓ ದ್ವಿದಳಧಾನ್ಯಗಳಲ್ಲಿ ಅಂತರ ಬೆಳೆ/ ಸುಧಾರಿತ ತಳಿಗಳ/ ಯಾಂತ್ರೀಕೃತ/ಕೂರಿಗೆ ಬಿತ್ತನೆ, ತೊಗರಿ ಬೆಳೆಯಲ್ಲಿ ನಾಟಿ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ✓ ದ್ವಿದಳ ಧಾನ್ಯ ಅಂತರ ಬೆಳೆ ಪ್ರಾತ್ಯಕ್ಷಿಕೆಯಡಿ ದ್ವಿದಳ ಧಾನ್ಯ ಬೆಳೆ ಮುಖ್ಯ ಬೆಳೆಯಾಗಿ ಮತ್ತು ನೆಲಗಡಲೆ, ಹೆಸರು ಇತರೆ ಒರಟುಧಾನ್ಯ ಬೆಳೆಗಳನ್ನು ಅಂತರಬೆಳೆಯಾಗಿ ಬೆಳೆಯುವುದು.
- ✓ ಒರಟು ಧಾನ್ಯ ಕಾರ್ಯಕ್ರಮದಡಿ ಮೆಕ್ಕೆಜೋಳ ಬೆಳೆಯನ್ನು ಮುಖ್ಯ ಬೆಳೆಯಾಗಿ ಹಾಗೂ ಸೊಯಾಬೀನ್, ಅವರೆ, ತೊಗರಿ, ಹೆಸರು ಇತ್ಯಾದಿ ದ್ವಿದಳ ಧಾನ್ಯ ಬೆಳೆಗಳನ್ನು ಅಂತರ ಬೆಳೆಯಾಗಿ ಬೆಳೆಯುವ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ✓ ನ್ಯೂಟ್ರಿಸಿರಿಧಾನ್ಯ ಕಾರ್ಯಕ್ರಮದಡಿ ಸುಧಾರಿತ ಬೇಸಾಯ ಕ್ರಮ ಮತ್ತು ರಾಗಿ, ತೊಗರಿ, ಹೆಸರು ಮತ್ತು ನೆಲಗಡಲೆ ಬೆಳೆಗಳೊಂದಿಗೆ ಅಂತರಬೆಳೆ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ✓ ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ/ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ✓ ಜಿಲ್ಲಾ ಕ್ರಿಯಾಯೋಜನೆಯಲ್ಲಿ ವಿವಿಧ ಬೆಳೆಗಳಲ್ಲಿ ತಾಂತ್ರಿಕತೆವಾರು ನಿಗದಿಪಡಿಸಿರುವ ಪ್ರಾತ್ಯಕ್ಷಿಕೆ ಕಾರ್ಯಕ್ರಮದಡಿ ತಿಳಿಸಲಾಗಿರುವ ಆಯಾ ಚಟುವಟಿಕೆಗಳನ್ನು (Cafeteria of activities) ಪರಿಗಣನೆಯಲ್ಲಿರಿಸಿ ಅನುಷ್ಟಾನಗೊಳಿಸುವುದು.
- ✓ ಎನ್.ಎಫ್.ಎಸ್.ಎಂ ಯೋಜನೆಯ ಪ್ರಾತ್ಯಕ್ಷಿಕೆಗಳಡಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಚಟುವಟಿಕೆಯಡಿ ಈಗಾಗಲೇ ತಿಳಿಸಿರುವ ಲಘು ಪೋಷಕಾಂಶಗಳು, ಕೃಷಿ ಸುಣ್ಣ, ಜಿಪ್ಸಂ ಜೊತೆಗೆ ಬೀಜೋಪಚಾರ ಜೀವಾಣುಗಳು, ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರಗಳನ್ನು ಸಹ ಉಪಯೋಗಿಸಬಹುದಾಗಿದೆ.

- ✓ ಪ್ರಾತ್ಯಕ್ಷಿಕೆಯ ವಿವರಣಾ ಫಲಕ ((Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ, ಬಳಸಲಾದ ಪೋಷಕಾಂಶಗಳು, ಬಿತ್ತನೆ/ನಾಟಿ ದಿನಾಂಕ, ಬಿತ್ತನೆ ಬೀಜ ಪ್ರಮಾಣ, ಬೆಳೆಯ ಅಂತರ, ಬಳಸಲಾದ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು.
- ✓ ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ (Grain filling stage) ಕ್ಷೇತ್ರೋತ್ಸವವನ್ನು ಆಚರಿಸುವುದು.
- ✓ ಪ್ರಾತ್ಯಕ್ಷಿಕೆಗಳ ವಿವರಗಳು (GPS co-ordinate ಸಹಿತ) ಹಾಗೂ ದಾಖಲಾತಿಗಳನ್ನೊಳಗೊಂಡ (ಛಾಯಾಚಿತ್ರಗಳು, ಕರಪತ್ರಗಳು ಇತ್ಯಾದಿ) ಪ್ರತ್ಯೇಕ ವಹಿಯನ್ನು - ಆಯಾ ರೈತ ಸಂಪರ್ಕ ಕೇಂದ್ರಗಳಲ್ಲಿ ನಿರ್ವಹಿಸುವುದು.
- ✓ ಜಿಲ್ಲಾ ಮಟ್ಟದ ತಾಂತ್ರಿಕ ಸಲಹೆಗಾರರು ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಾತ್ಯಕ್ಷಿಕೆಗಳ ವಿವರಗಳನ್ನು ಕ್ರೋಢೀಕರಿಸಿ ಜಿಲ್ಲಾ ಮಟ್ಟದಲ್ಲಿ ಮಾಹಿತಿಯು ಸಕಾಲದಲ್ಲಿ ಲಭ್ಯವಿರುವಂತೆ ಕ್ರಮ ವಹಿಸುವುದು.
- ✓ ಪ್ರಾತ್ಯಕ್ಷಿಕೆಗಳನ್ನು ATMA ಯೋಜನೆಯೊಂದಿಗೆ ಸಂಯೋಜನೆಗೊಳಿಸಿ ಅನುಷ್ಠಾನಗೊಳಿಸುವುದು.
- ✓ ಪ್ರಾತ್ಯಕ್ಷಿತೆಗಳ ಅನುಷ್ಠಾನ ತದನಂತರ ಅನುದಾನ ವೆಚ್ಚ ಕುರಿತಂತೆ ವಿವರವಾದ ಪ್ರತ್ಯೇಕ ಮಾರ್ಗಸೂಚಿಯನ್ನು ನೀಡಲಾಗುವುದು

### ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರ:

| ಕಾರ್ಯಕ್ರಮ | ಮೊತ್ತ(ರೂ) |
|---|---|
| **ಎನ್.ಎಫ್.ಎಸ್.ಎಂ –ಅಕ್ಕಿ**<br>**ಅ. ಗುಚ್ಛ ಪ್ರಾತ್ಯಕ್ಷಿಕೆಗಳು:** (100 ಹೆಕ್ಟೇರ್ ಪ್ರದೇಶದಲ್ಲಿ ಗುಚ್ಛ ಪ್ರಾತ್ಯಕ್ಷಿಕೆ) | ರೂ.9000/ಹೆ |
| ಅಕ್ಕಿ ಬೆಳೆಯಲ್ಲಿ ನೇರ ಭತ್ತ ಬಿತ್ತನೆ/ಯಾಂತ್ರೀಕೃತ ಸಾಲು ನಾಟಿ/ SRI ಪದ್ಧತಿ (ಜಿಲ್ಲೆಯ 1.5% ರಷ್ಟು ಅಕ್ಕಿ ಬೆಳೆ ಪ್ರದೇಶ) ಪ್ರಾತ್ಯಕ್ಷಿಕೆ, ಸಂಕರಣ ಅಕ್ಕಿ (ಜಿಲ್ಲೆಯ 1.5 % ರಷ್ಟು ಅಕ್ಕಿ ಬೆಳೆ ಪ್ರದೇಶ), ಒತ್ತಡ ಸಹಿಷ್ಣುತೆ-ಬರ ನಿರೋಧಕ ತಳಿಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು.<br>**ಆ. ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು (Cropping system based demonstration)**<br>ಭತ್ತದ ಬೆಳೆ ಕಟಾವಿನ ನಂತರ ಕಡಲೆ/ಹೆಸರು/ಉದ್ದು/ಅಲಸಂದಿ ದ್ವಿದಳಧಾನ್ಯ ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವುದು | ರೂ.7500/ಹೆ |

| ಕಾರ್ಯಕ್ರಮ | ಮೊತ್ತ(ರೂ) |
|---|---|
| **ಎನ್.ಎಫ್.ಎಸ್.ಎಂ–ದ್ವಿದಳಧಾನ್ಯ:**<br>ಅ. ಗುಚ್ಚ ಪ್ರಾತ್ಯಕ್ಷಿಕೆಗಳು: (100 ಹೆಕ್ಟೇರ್ ಪ್ರದೇಶದಲ್ಲಿ ಗುಚ್ಚ ಪ್ರಾತ್ಯಕ್ಷಿಕೆ) : ದ್ವಿದಳಧಾನ್ಯಗಳಲ್ಲಿ ಸುಧಾರಿತ ತಾಂತ್ರಿಕತೆಗಳಾದ ಕೂರಿಗೆ/ಯಾಂತ್ರೀಕೃತ ಬಿತ್ತನೆ, ಅಂತರ ಬೆಳೆ/ ತೊಗರಿಯಲ್ಲಿ ನಾಟಿ ಪದ್ಧತಿ ಗುಚ್ಚ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು<br>ಆ. ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು **(Cropping system based demonstration)**<br>ಭತ್ತದ ಬೆಳೆ ಕಟಾವಿನ ನಂತರ ಕಡಲೆ/ಹೆಸರು/ಉದ್ದು/ಅಲಸಂದಿ ದ್ವಿದಳದಾನ್ಯ ಬೆಳೆಗಳನ್ನು ಅನುಕ್ರಮ ಪದ್ಧತಿಯಲ್ಲಿ ಬೆಳೆಯುವುದು | ರೂ. 9000/ಹೆ<br><br>ರೂ.7500/ಹೆ |
| **ಎನ್.ಎಫ್.ಎಸ್.ಎಂ – ಒರಟುಧಾನ್ಯಗಳು (ಮುಸುಕಿನ ಜೋಳ) :**<br>ಅ. ಗುಚ್ಚ ಪ್ರಾತ್ಯಕ್ಷಿಕೆಗಳು: (100 ಹೆಕ್ಟೇರ್ ಪ್ರದೇಶದಲ್ಲಿ ಗುಚ್ಚ ಪ್ರಾತ್ಯಕ್ಷಿಕೆ)<br>ಒರಟುಧಾನ್ಯಗಳಲ್ಲಿ (ಮುಸುಕಿನ ಜೋಳ)- ದ್ವಿದಳಧಾನ್ಯ ಅಂತರಬೆಳೆ, ಸುಧಾರಿತ ಬೇಸಾಯ ಪದ್ಧತಿ ಕ್ರಮಗಳನ್ನು ಗುಚ್ಚ ಪ್ರಾತ್ಯಕ್ಷಿಕೆಗಳಾಗಿ ಏರ್ಪಡಿಸುವುದು. | ರೂ. 6000/ಹೆ |
| **ಎನ್.ಎಫ್.ಎಸ್.ಎಂ – ನ್ಯೂಟ್ರಿಸಿರಿಧಾನ್ಯಗಳು:**<br>ನ್ಯೂಟ್ರಿಸಿರಿಧಾನ್ಯಗಳಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು. | ರೂ. 6000/ಹೆ |

ಕ್ಷೇತ್ರೋತ್ಸವ /ರೈತರ ಗೋಷ್ಠಿಗೆ ರೂ.250/ಹೆ (100 ಹೆಕ್ಟೇರ್ ಗುಚ್ಚಕ್ಕೆ ತಗಲುವ ಒಟ್ಟು ವೆಚ್ಚ ರೂ.25000/-)ಘಟಕವಾರು ವೆಚ್ಚಗಳನ್ನು ಈ ಕೆಳಕಂಡಂತೆ ನೀಡಿದೆ

| ಘಟಕ | ದರ | ಒಟ್ಟು ಮೊತ್ತ(ರೂ) |
|---|---|---|
| ಬ್ಯಾನರ್, ಕರಪತ್ರ, ಲೇಖನ ಸಾಮಗ್ರಿಗಳು ಹಾಗೂ ಸ್ಟೇಷನರಿ | ಒಂದು ಗುಚ್ಚಕ್ಕೆ | 4000.00 |
| ಕ್ಷೇತ್ರೋತ್ಸವದಲ್ಲಿ ಹಾಜರಾಗುವ ರೈತರಿಗೆ ಮತ್ತು ಪೂರಕ ಸಿಬ್ಬಂದಿಗಳಿಗೆ ಟೀ/ಲಘು ಉಪಹಾರ ಒದಗಿಸುವುದು | ಒಬ್ಬ ರೈತನಿಗೆ ರೂ 60 ರಂತೆ ಪ್ರತಿ 200 (ರೈತರು) ರೂ. 200x 60/- | 12000.00 |
| ವಿಜ್ಞಾನಿಗಳಿಗೆ/ಪ್ರಗತಿಪರ ರೈತರಿಗೆ ಗೌರವಧನ | ಇಬ್ಬರಿಗೆ ರೂ 500/- ರಂತೆ | 1000.00 |
| ಶಾಮಿಯಾನ, ಕುರ್ಚಿಗಳು, ವೇದಿಕೆ ಮತ್ತು ಇತರೆ ವೆಚ್ಚ | ಒಂದು ಗುಚ್ಚಕ್ಕೆ | 8000.00 |
| | ಒಟ್ಟು | 25000.00 |

- ವಿಜ್ಞಾನಿಗಳ /ಕೇಂದ್ರ ಸರ್ಕಾರದ ಅಧಿಕಾರಿಗಳ/ಯೋಜನೆ ಉಸ್ತುವಾರಿ ತಂಡ/ರಾಜ್ಯ ಸರ್ಕಾರದ ಅಧಿಕಾರಿಗಳ ಭೇಟಿಗೆ ಟ್ಯಾಕ್ಸಿ ಬಾಡಿಗೆ ಮತ್ತು ಪೆಟ್ರೋಲ್ ವೆಚ್ಚಕ್ಕೆ (ಯಾವುದೇ ರೀತಿಯ ಪ್ರವಾಸ/ತುಟ್ಟಿ ಭತ್ಯೆ ಹೊರತುಪಡಿಸಿ) ರೂ. 300/ಹೆ. ವಿನಿಯೋಗಿಸುವುದು. ಪ್ರತಿ 100 ಹೆಕ್ಟೇರ್ ಗುಚ್ಛಕ್ಕೆ ಗರಿಷ್ಠ ರೂ.**30000/-** ನೀಡುವುದು.

ಪ್ರಾತ್ಯಕ್ಷಿತೆಗಳ ಉಸ್ತುವಾರಿ ಮತ್ತು ದಾಖಲೀಕರಣ:

- ಪ್ರಾತ್ಯಕ್ಷಿತೆಗಳ ವಿವಿಧ ಘಟಕಗಳ ಅನುಷ್ಠಾನ, ಉಸ್ತುವಾರಿ ಮತ್ತು ದಾಖಲೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿರುವ ಸೂಚನೆಗಳನ್ನು ಪಾಲಿಸುವುದು.

- ಪ್ರಾತ್ಯಕ್ಷಿಕೆಗಳಿಗೆ ಆಯ್ಕೆ ಮಾಡಲಾಗುವ ಫಲಾನುಭವಿಗಳಿಗೆ ಇಲಾಖೆಯ FRUITS ತಂತ್ರಾಂಶದಲ್ಲಿ ರೈತರ ನೊಂದಣಿ ಕಡ್ಡಾಯ.
- ಪ್ರಾತ್ಯಕ್ಷಿಕೆಗಳಿಗೆ ಆಯ್ಕೆ ಮಾಡಲಾಗುವ ಫಲಾನುಭವಿಗಳ ದಾಖಲಾತಿ ಮತ್ತು ಉಸ್ತುವಾರಿಯನ್ನು Mobile & Web portal ಮೂಲಕ ನಿರ್ವಹಿಸುವುದು.
- ಈ ಮೂಲಕ ಪ್ರಾತ್ಯಕ್ಷಿಕೆಗಳ ನಿರ್ವಹಣೆಗೆ ಜಿಲ್ಲಾಮಟ್ಟದಲ್ಲಿ ನೋಡಲ್ ಮತ್ತು ಸಹಾಯಕ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಪ್ರಾತ್ಯಕ್ಷಿಕೆ ಮಾಹಿತಿಯನ್ನು ಆಯಾ ಹಂಗಾಮಿನಲ್ಲಿ ಸಕಾಲದಲ್ಲಿ ಹಾಗೂ ನಿಯತಕಾಲಿಕವಾಗಿ Mobile & Web portal ನಲ್ಲಿ ಅಪ್ ಲೋಡ್ ಮಾಡಲು ಕ್ರಮ ವಹಿಸುವುದು.

## II. ಬಿತ್ತನೆ ಬೀಜ ವಿತರಣೆ:

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ, ಪ್ರತಿ ಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.
- ಪ್ರಾತ್ಯಕ್ಷಿಕೆಗಳಡಿ ಹತ್ತು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ.
- ಭತ್ತ /ದ್ವಿದಳಧಾನ್ಯಗಳು/ ನ್ಯೂಟ್ರಿ ಸಿರಿಧಾನ್ಯಗಳುಗಳಡಿ

ಹೈಬ್ರಿಡ್/ಅಧಿಕ ಇಳುವರಿ ನೀಡುವ ಬಿತ್ತನೆ ಬೀಜ, 10 ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳು ಮತ್ತು ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ವಿಶೇಷ ಗುಣ ಮತ್ತು ಭರವಸೆಯ ಇಳುವರಿ ನೀಡುವ 10 ವರ್ಷಗಳಿಗಿಂತ ಮೇಲ್ಪಟ್ಟ ತಳಿಗಳ ಬಿತ್ತನೆ ಬೀಜಗಳನ್ನು (ಒಟ್ಟಾರೆ ಬಿತ್ತನೆ ಬೀಜ ಪ್ರಮಾಣದಲ್ಲಿ ಶೇ.20ರಷ್ಟು ಮಿತಿಗೊಳಿಸಿದ ಪ್ರಮಾಣ) ಶೇ.50ರ ರಿಯಾಯಿತಿ ದರದಲ್ಲಿ ವಿತರಣೆಗೆ ಅವಕಾಶವಿರುತ್ತದೆ. ಕಾರ್ಯಕ್ರಮವಾರು ಬಿತ್ತನೆ ಬೀಜದ ಸಹಾಯಧನದ ವಿವರ ಕೆಳಗಿನಂತಿದೆ

| ಕ್ರ. ಸಂ | ಕಾರ್ಯಕ್ರಮ | ಹೈಬ್ರಿಡ್/ಸಂಕರಣ ತಳಿಗಳಿಗೆ ಸಹಾಯಧನ (ರೂ./ಕೆ.ಜಿ) | 10 ವರ್ಷಗಳಿಂದೀಚೆಗೆ ಬಿಡುಗಡೆಯಾದ ಭತ್ತದ ತಳಿಗಳಿಗೆ ಸಹಾಯಧನ (ರೂ./ಕೆ.ಜಿ) | 10 ವರ್ಷಗಳಿಗಿಂತ ಮೇಲ್ಪಟ್ಟ ತಳಿಗಳಿಗೆ ಸಹಾಯಧನ (ರೂ./ಕೆ.ಜಿ) |
|---|---|---|---|---|
| 1. | ಎನ್.ಎಫ್.ಎಸ್.ಎಂ –ಅಕ್ಕಿ | 100 | 20 | 10 |
| 2. | ಎನ್.ಎಫ್.ಎಸ್.ಎಂ–ದ್ವಿದಳ ಧಾನ್ಯ | - | 50 | 25 |
| 3. | ಎನ್.ಎಫ್.ಎಸ್.ಎಂ– ನ್ಯೂಟ್ರಿ ಸಿರಿ ಧಾನ್ಯಗಳು | 100 | 30 | 15 |
| 4. | ಎನ್.ಎಫ್.ಎಸ್.ಎಂ– ಒರಟು ಧಾನ್ಯಗಳು | | 30 | 50 |

**III.** ಸಮಗ್ರ ಪೋಷಕಾಂಶಗಳ ನಿರ್ವಹಣೆ ಮತ್ತು ಸಮಗ್ರ ಕೀಟ ನಿರ್ವಹಣೆ:

ಅ) ಸಮಗ್ರ ಪೋಷಕಾಂಶಗಳ ನಿರ್ವಹಣೆ

ಸಮಗ್ರ ಪೋಷಕಾಂಶಗಳ ನಿರ್ವಹಣೆ ಚಟುವಟಿಕೆಯಡಿ ಲಘು ಪೋಷಕಾಂಶಗಳು, ಕೃಷಿ ಸುಣ್ಣ, ಜಿಪ್ಸಂ ಜೊತೆಗೆ ಬೀಜೋಪಚಾರ ಜೀವಾಣುಗಳು, ರಂಜಕಯುಕ್ತ ಗೊಬ್ಬರಗಳನ್ನು ಉಪಯೋಗಿಸಬಹುದಾಗಿದೆ.

ಆ) ಸಮಗ್ರ ಕೀಟ ನಿರ್ವಹಣೆ

ಸಸ್ಯ ಸಂರಕ್ಷಣಾ ಔಷಧಿಗಳನ್ನು ಆಯಾ ಹಂಗಾಮಿನಲ್ಲಿ ಜಿಲ್ಲೆಯ ಬೆಳೆ ಪರಿಸ್ಥಿತಿ, ಕೀಟ ರೋಗಗಳ ಬಾಧೆಯ ತೀವ್ರತೆ ಮತ್ತು ಅವಶ್ಯಕತೆಯನ್ನಾಧರಿಸಿ consignment ಮಾದರಿಯಲ್ಲಿ ಪೀಡೆನಾಶಕಗಳು ಪಡೆಯಲು ಕ್ರಮ ವಹಿಸುವುದು. ಈ ಕುರಿತು ಜಿಲ್ಲೆಯಲ್ಲಿ ನಿಯತಕಾಲಿಕವಾಗಿ ಪೀಡೆ ಸರ್ವೇಕ್ಷಣೆ ಕೈಗೊಂಡು ವರದಿಯನ್ನು ಕಡ್ಡಾಯವಾಗಿ ಹಾಗೂ ಸಕಾಲದಲ್ಲಿ ಈ ಕಛೇರಿಗೆ ಸಲ್ಲಿಸುವುದು.

## IV. ರೈತರಿಗೆ ತರಬೇತಿ:

- ರೈತರಿಗೆ ತರಬೇತಿಯನ್ನು 'ಬೆಳೆಪದ್ದತಿ' (Cropping System) ತತ್ವದಡಿ ಆಯೋಜಿಸುವುದು

- 30 ರೈತರ ಗುಂಪುಗಳನ್ನೊಳಗೊಂಡ ಪ್ರತಿ Session ಗೆ ರೂ. 3500/- ನಂತೆ ಒಟ್ಟು ನಾಲ್ಕು Session ಗಳನ್ನು ಏರ್ಪಡಿಸುವುದು

▪ ಪ್ರತಿ ತರಬೇತಿಗೆ (4 Session) ಒಟ್ಟು ರೂ. 14,000/- ನ್ನು ಈ ಕೆಳಗಿನಂತೆ ವೆಚ್ಚ ಮಾಡಬಹುದಾಗಿರುತ್ತದೆ.

▪ ಈ ನಾಲ್ಕು Session ಗಳಲ್ಲಿ, ಮೊದಲನೆಯದನ್ನು ಪೂರ್ವ ಮುಂಗಾರಿನಲ್ಲಿ, ಎರಡನೆಯದನ್ನು ಮುಂಗಾರು ಬೆಳೆಯ ಅವಧಿಯಲ್ಲಿ, ಮೂರನೆಯ Session ಅನ್ನು ಹಿಂಗಾರಿನಲ್ಲಿ ಮತ್ತು ನಾಲ್ಕನೆಯದನ್ನು ಹಿಂಗಾರು ಬೆಳೆಯ ಕಟಾವಿನ ಹಂತದಲ್ಲಿ ಏರ್ಪಡಿಸುವುದು.

| ಘಟಕ | ದರ | ಒಟ್ಟು ಮೊತ್ತ(ರೂ) |
|---|---|---|
| ತರಬೇತಿ ಸಾಮಗ್ರಿಗಳು ಹಾಗೂ ಸ್ಟೇಷನರಿ | ಒಟ್ಟು ನಾಲ್ಕು Session'ಗಳಿಗೆ ರೂ 500/ Session ರಂತೆ | 2000.00 |
| ಒಬ್ಬ ಗೌರವಧನ | ಒಟ್ಟು ನಾಲ್ಕು Session'ಗಳಿಗೆ ರೂ 500/ Session'ರಂತೆ | 2000.00 |
| ತರಬೇತುದಾರರಿಗೆ, ತರಬೇತಿ ಪಡೆಯುವವರಿಗೆ ಮತ್ತು ಪೂರಕ ಸಿಬ್ಬಂದಿಗಳಿಗೆ ಟೀ/ಲಘು ಉಪಹಾರ ಒದಗಿಸುವುದು | ಒಬ್ಬ ರೈತನಿಗೆ ರೂ 50 ರಂತೆ ಪ್ರತಿ Session'ಗೆ 35 (ರೈತರು+ಸಿಬ್ಬಂದಿ) 50X35X4 | 7000.00 |
| ಸಾದಿಲ್ವಾರು ವೆಚ್ಚ, ಇಂಧನ ವೆಚ್ಚ ಮತ್ತು ರೈತರ ಪ್ರಯಾಣ ವೆಚ್ಚ | ಒಟ್ಟು ನಾಲ್ಕು Session ಗಳಿಗೆ ರೂ 750/ Session' ರಂತೆ | 3000.00 |
| ಒಟ್ಟು | | 14000.00 |

ಸೂಚನೆ:

ಯೋಜನೆಯಡಿ ಜಿಲ್ಲಾವಾರು ನಿಗದಿಪಡಿಸಿರುವ ಪ್ರಾತ್ಯಕ್ಷಿಕೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆತ್ಮ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವುದು.

V. ಕೃಷಿ ಯಂತ್ರೋಪಕರಣ ಮತ್ತು ಸಮರ್ಥ ನೀರಾವರಿ ಸಾಧನಗಳು ಮತ್ತು ಸ್ಥಳೀಯ ಪ್ರೇರಕಗಳು (Flexi Components)

1) **ಕೃಷಿ ಯಂತ್ರೋಪಕರಣಗಳು:**

- ಎನ್.ಎಫ್.ಎಸ್.ಎಂ-ಅಕ್ಕಿ: ಕೋನೋವೀಡರ್, ಬ್ಯಾಟರಿ/ವಿದ್ಯುತ್‌ಚಾಲಿತ ಸಿಂಪರಣಾ ಯಂತ್ರಗಳು, ಒಕ್ಕಣೆ ಯಂತ್ರ, ರೀಪರ್, ಚಾಪ್ ಕಟರ್, ಬೆಲರ್ ಯಾಂತ್ರೀಕೃತ ನಾಟಿ ಯಂತ್ರಗೆ ಅವಕಾಶ ಕಲ್ಪಿಸಲಾಗಿದೆ.
- ಎನ್.ಎಫ್.ಎಸ್.ಎಂ-ಧ್ವಿದಳ ಧಾನ್ಯ: ಬ್ಯಾಟರಿ/ವಿದ್ಯುತ್‌ಚಾಲಿತ ಸಿಂಪರಣಾ ಯಂತ್ರಗಳು, ಒಕ್ಕಣೆ ಯಂತ್ರ ಗೆ ಅವಕಾಶ ಕಲ್ಪಿಸಲಾಗಿದೆ.

ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಕೃಷಿ ಯಂತ್ರೋಪಕರಣಗಳು / ಸಿಂಪರಣಾ ಸಾಧನಗಳು ಮತ್ತು ಕೊಯ್ಲೋತ್ತರ ತಾಂತ್ರಿಕತೆ ಉಪಕರಣಗಳನ್ನು ಅನುಷ್ಠಾನಗೊಳಿಸುವುದು.

2) ಸಮರ್ಥ ನೀರಾವರಿ ಸಾಧನಗಳು:

1. ಎನ್.ಎಫ್.ಎಸ್.ಎಂ-ಅಕ್ಕಿ: ಡೀಸಲ್ ಪಂಪ್ ಸೆಟ್, ನೀರು ಸಾಗಾಣಿಕಾ ಪೈಪ್ ಗಳು (ಪಿ.ವಿ.ಸಿ. ಪೈಪ್‌ಗಳು)
2. ಎನ್.ಎಫ್.ಎಸ್.ಎಂ-ಧ್ವಿದಳ ಧಾನ್ಯ: ಡೀಸಲ್ ಪಂಪ್ ಸೆಟ್, ಸ್ಪ್ರಿಂಕ್ಲರ್ ಸೆಟ್/ಮೊಬೈಲ್ ರೈನ್ ಗನ್, ನೀರು ಸಾಗಾಣಿಕಾ ಪೈಪ್ ಗಳು (ಪಿ.ವಿ.ಸಿ. ಪೈಪ್‌ಗಳು)
3. ಎನ್.ಎಫ್.ಎಸ್.ಎಂ-ನ್ಯೂಟ್ರಿ ಸಿರಿಧಾನ್ಯಗಳು: ಸ್ಪ್ರಿಂಕ್ಲರ್ ಸೆಟ್

ಸಮರ್ಥ ನೀರಾವರಿ ಸಾಧನಗಳಡಿ ಸ್ಪ್ರಿಂಕ್ಲರ್ ಸೆಟ್ ವಿತರಣೆ ಕಾರ್ಯಕ್ರಮಗಳನ್ನು ಮುಖ್ಯ ಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ (PMKSY) ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸುವುದು.

ವಿಶೇಷ ಸೂಚನೆ: ಸ್ಪ್ರಿಂಕ್ಲರ್ ಸೆಟ್/ಮೊಬೈಲ್ ರೈನ್ ಗನ್ / ಕೃಷಿ ಯಂತ್ರೋಪಕರಣಗಳು / ಸಿಂಪರಣಾ ಸಾಧನಗಳು ಮತ್ತು ಕೊಯ್ಲೋತ್ತರ ತಾಂತ್ರಿಕತೆ ಉಪಕರಣಗಳಿಗೆ ರಾಜ್ಯದ ಅನುಮೋದಿತ ಧರಸೂಚಿಯನ್ವಯ ಹೆಚ್ಚುವರಿ ಮೊತ್ತವನ್ನು ಕೃಷಿ ಯಾಂತ್ರೀಕರಣ ಯೋಜನೆ (ರಾಜ್ಯವಲಯ) ಹಾಗೂ ಕೃಷಿ ಸಂಸ್ಕರಣೆ ಯೋಜನೆಗಳಡಿ ಒಗ್ಗೂಡಿಸಿ ಭರಿಸುವುದು.

3. ಸ್ಥಳೀಯ ಪ್ರೇರಕಗಳು:

ಭತ್ತ, ದ್ವಿದಳಧಾನ್ಯ ಹಾಗೂ ನ್ಯೂಟ್ರಿ ಸಿರಿಧಾನ್ಯಗಳಲ್ಲಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಸ್ಥಳೀಯವಾಗಿ ಪ್ರಾಮುಖ್ಯತೆ ಪಡೆದಿರುವ ಚಟುವಟಿಕೆಗಳನ್ನು ಸೇರ್ಪಡೆಗೊಳಿಸಿ ಅನುದಾನ ಒದಗಿಸಿಕೊಳ್ಳಲು ರಾಜ್ಯಗಳಿಗೆ ಅವಕಾಶವಿರುತ್ತದೆ.

1. ಎನ್.ಎಫ್.ಎಸ್.ಎಂ-ಅಕ್ಕಿ: ಭತ್ತದ ಬೆಳೆಯಲ್ಲಿ ಹಸಿರೆಲೆ ಗೊಬ್ಬರ ಬೀಜಗಳ ವಿತರಣೆ,ಎಲೆ ಬಣ್ಣದ ಚಾರ್ಟ್ ಗಳ ವಿತರಣೆ
2. ಎನ್.ಎಫ್.ಎಸ್.ಎಂ-ಧ್ವಿದಳ ಧಾನ್ಯ: ದ್ವಿದಳ ಧಾನ್ಯ ಬೆಳೆಯಲ್ಲಿ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಲ್ಲಿ ಯಂತ್ರೋಪಕರಣಗಳ ಬಳಕೆಗೆ ರೈತರಿಗೆ ಪ್ರತಿ ಹೆಗೆ ರೂ.1500/- ಸಹಾಯಧನ

3. ಎನ್.ಎಫ್.ಎಸ್.ಎಂ-ನ್ಯೂಟ್ರಿ ಸಿರಿಧಾನ್ಯಗಳು: ಸಹಾಯಧನವನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಹಾಗೂ ಕೃಷಿ ಉಪಕರಣಗಳಿಗೆ ಅವಕಾಶ ಕಲ್ಪಿಸಲಾಗಿದೆ.

- ನ್ಯೂಟ್ರಿ ಸಿರಿಧಾನ್ಯಗಳ ಕೃಷಿ ಮತ್ತು ಬಳಕೆಯ ಬಗ್ಗೆ ವ್ಯಾಪಕ ಪ್ರಚಾರಕ್ಕಾಗಿ ರಾಜ್ಯ ಮಟ್ಟದ ಕಾರ್ಯಾಗಾರ, ಜಿಲ್ಲಾ ಮಟ್ಟದ ಕಾರ್ಯಾಗಾರ, ರೋಡ್ ಶೋಗಳ ಆಯೋಜನೆ, ಅಧ್ಯಯನ ಪ್ರವಾಸ, ಪ್ರಿಂಟ್ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಚಾರ ಕೈಗೊಳ್ಳಬಹುದಾಗಿದೆ.

ರಾಜ್ಯಮಟ್ಟದ ಕಾರ್ಯಗಾರ/ ಜಿಲ್ಲಾಮಟ್ಟದ ಸಿರಿಧಾನ್ಯ ಹಬ್ಬ/ ಅರಿವು ಮೂಡಿಸುವ ಕಾರ್ಯಕ್ರಮ, ಸಿರಿಧಾನ್ಯ ರೋಡ್ ಶೋ ಮತ್ತು ಪ್ರಚಾರ ಕಾರ್ಯಕ್ರಮಗಳ ಅನುಷ್ಠಾನ ಕುರಿತ ಮಾರ್ಗಸೂಚಿ

ಎನ್,ಎಫ್.ಎಸ್.ಎಮ್ ನ್ಯೂಟ್ರಿಸಿರಿಧಾನ್ಯಗಳನ್ನು ಉತ್ತೇಜಿಸುವ ಹಿನ್ನಲೆಯಲ್ಲಿ, ರಾಜ್ಯಮಟ್ಟದ ಕಾರ್ಯಗಾರ/ ಜಿಲ್ಲಾಮಟ್ಟದ ಸಿರಿಧಾನ್ಯ ಹಬ್ಬ/ ಅರಿವು ಮೂಡಿಸುವ ಕಾರ್ಯಕ್ರಮ, ಸಿರಿಧಾನ್ಯ ರೋಡ್ ಶೋ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ

ಅನುಷ್ಠಾಮಗೊಳಿಸಲು ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತವೆ.

1. **ರಾಜ್ಯಮಟ್ಟದ ಕಾರ್ಯಗಾರ:** ಒಂದು ದಿನದ ರಾಜ್ಯಮಟ್ಟದ ಕಾರ್ಯಗಾರವನ್ನು ಜಿಲ್ಲಾಮಟ್ಟದ ಅಧಿಕಾರಿಗಳು, ವಿಜ್ಞಾನಿಗಳು, ಪ್ರಗತಿಪರ ರೈತರು, ಮಾರುಕಟ್ಟೆದಾರರನ್ನೊಳಗೊಂಡಂತೆ ಆಯೋಜಿಸುವುದು. ಸದರಿ ಸಮಾವೇಶಕ್ಕೆ ಗರಿಷ್ಠ 500 ಸಂಖ್ಯೆ ಸದಸ್ಯರನ್ನು ಪರಿಗಣಿಸುವುದು. ಸದರಿ ನಿಗದಿಪಡಿಸಿದ ಆರ್ಥಿಕ ವೆಚ್ಚ ಈ ಕೆಳಕಂಡಂತಿದೆ

| ಕ್ರ ಸಂ | ವಿವರಗಳು | ಅಂದಾಜು ಆರ್ಥಿಕ ವೆಚ್ಚದ ವಿವರ **(ರೂ. ಲಕ್ಷಗಳು)** |
|---|---|---|
| 1 | ಧ್ವನಿ ವ್ಯವಸ್ಥೆ, ವೇದಿಕೆ ಅಲಂಕಾರ, ಡಿಜಿಟಲ್ ಪ್ರದರ್ಶನ, ಜನರೇಟರ್ ಇತ್ಯಾದಿ ಸೇರಿದಂತೆ ಸಭಾಂಗಣದ ಶುಲ್ಕಗಳು | 1.00 |
| 2 | ಪ್ರದರ್ಶನಕ್ಕಾಗಿ ಸಿದ್ಧತೆ | 0.50 |
| 3 | ಆಮಂತ್ರಣಗಳ ಮುದ್ರಣಕ್ಕಾಗಿ ಸ್ಟೇಷನರಿ, ಪೋಸ್ಟರ್ ಗಳು, ಬ್ಯಾನರ್ ಗಳು, ಕರ ಪತ್ರಗಳು, ಮಾಹಿತಿ ಸಾಮಾಗ್ರಿಗಳಿ ಇತ್ಯಾದಿ | 0.50 |
| 4 | ಫೋಟೊ ಮತ್ತು ವೀಡಿಯೋ ದಾಖಲೀಕರಣ | 0.30 |

| | | |
|---|---|---|
| 5 | ಅತಿಥಿ ಉಪನ್ಯಾಸಕರಿಗೆ ಗೌರವ ಧನ (5*1000) | 0.05 |
| 6 | ವಾಹನ ವ್ಯವಸ್ಥೆ, ಭದ್ರತೆ ಮತ್ತು ಕ್ಷೇತ್ರ ಸಿದ್ಧತೆ | 0.30 |
| 7 | ಮಾಹಿತಿ ಕಿರುಹೊತ್ತಿಗೆಗಳು ಮತ್ತು ತಿಂಡಿಗಳ ವಿತರಣೆಗಳು | 0.10 |
| 8 | ಟೀ, ಕಾಫಿ, ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ (200*500) | 1.00 |
| 9 | ಮಾಧ್ಯಮದವರ ಭಾಗವಹಿಸುವಿಕೆ ಮತ್ತು ಪ್ರಚಾರ | 0.25 |
| | ಒಟ್ಟು | 4.00 |

ಷರಾ: ಸ್ಥಳೀಯ ಅವಶ್ಯಕತೆಗನುಗುಣವಾಗಿ ದಿನಭತ್ಯೆ ಹೊರೆತುಪಡಿಸಿ ಅಂತರಘಟಕ ಬದಲಾವಣೆಗೆ ಅವಕಾಶವಿರುತ್ತದೆ.

**2. ಜಿಲ್ಲಾಮಟ್ಟದ ಸಿರಿಧಾನ್ಯ ಹಬ್ಬ:** ಒಂದು ದಿನದ ಜಿಲ್ಲಾಮಟ್ಟದ ಸಿರಿಧಾನ್ಯ ಹಬ್ಬ ವನ್ನು ಜನ ಪ್ರತಿನಿಧಿಗಳು, ಜಿಲ್ಲಾಮಟ್ಟದ ಅಧಿಕಾರಿಗಳ ಸಹಯೋಗದೊಂದಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ವಿಜ್ಞಾನಿಗಳು, ಪ್ರಗತಿಪರ ರೈತರು ಮತ್ತು ಮಾರುಕಟ್ಟೆದಾರರನ್ನೊಳಗೊಂಡಂತೆ ಆಯೋಜಿಸುವುದು.. ಸದರಿ ನಿಗದಿಪಡಿಸಿದ ಆರ್ಥಿಕ ವೆಚ್ಚ ಈ ಕೆಳಕಂಡಂತಿದೆ

| ಕ್ರ ಸಂ | ವಿವರಗಳು | ಅಂದಾಜು ಆರ್ಥಿಕ ವೆಚ್ಚದ ವಿವರ (ರೂ. ಲಕ್ಷಗಳು) |
|---|---|---|
| 1 | ಧ್ವನಿ ವ್ಯವಸ್ಥೆ, ವೇದಿಕೆ ಅಲಂಕಾರ, ಡಿಜಿಟಲ್ ಪ್ರದರ್ಶನ, ಜನರೇಟರ್ ಇತ್ಯಾದಿ ಸೇರಿದಂತೆ ಸಭಾಂಗಣದ ಶುಲ್ಕಗಳು | 0.50 |
| 2 | ಸಿರಿಧಾನ್ಯಗಳ ಕುರಿತು ವಸ್ತು ಪ್ರದರ್ಶನ | 0.30 |
| 3 | ಆಮಂತ್ರಣಗಳ ಮುದ್ರಣಕ್ಕಾಗಿ ಸ್ಟೇಷನರಿ, ಪೋಸ್ಟರ್ ಗಳು, ಬ್ಯಾನರ್ ಗಳು, ಕರ ಪತ್ರಗಳು, ಮಾಹಿತಿ ಸಾಮಾಗ್ರಿಗಳಿ ಇತ್ಯಾದಿ | 0.10 |
| 4 | ಫೋಟೊ ಮತ್ತು ವೀಡಿಯೋ ಪ್ರಸಾರ | 0.15 |
| 5 | ಅತಿಥಿ ಉಪನ್ಯಾಸಕರಿಗೆ ಗೌರವ ಧನ (4*1000) | 0.04 |

| | | |
|---|---|---|
| 6 | ವಾಹನ ವ್ಯವಸ್ಥೆ, ಭದ್ರತೆ ಮತ್ತು ಕ್ಷೇತ್ರ ಸಿದ್ಧತೆ | 0.16 |
| 7 | ರೈತರಿಗೆ ಪ್ರಯಾಣ ವೆಚ್ಚ/ ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ (150*300) | 0.45 |
| 9 | ಮಾಧ್ಯಮದವರ ಭಾಗವಹಿಸುವಿಕೆ ಮತ್ತು ಪ್ರಚಾರ | 0.15 |
| | ಒಟ್ಟು | 1.85 |

**ಸ್ಥಳೀಯ ಅವಶ್ಯಕತೆಗನುಗುಣವಾಗಿ ದಿನ ಭತ್ಯೆ ಹೊರೆತುಪಡಿಸಿ ಅಂತರಘಟಕ ಬದಲಾವಣೆಗೆ ಅವಕಾಶವಿರುತ್ತದೆ.

### 3. ಅರಿವು ಮೂಡಿಸುವ ಕಾರ್ಯಕ್ರಮ, ಸಿರಿಧಾನ್ಯ ಸಂಸ್ಕರಣೆ/ ಮೌಲ್ಯ ಸರಪಳಿ ಕುರಿತು ಉತ್ಪಾದಕರ ಮಾರುಕಟ್ಟೆದಾರರ ಕಾರ್ಯಗಾರ:

ಸದರಿ ಕಾರ್ಯಗಾರವನ್ನು ಸಂಸ್ಕರಣೆ & ಮೌಲ್ಯಸರಪಳಿ ಹಾಗೂ ಉತ್ತಮ ಮಾರುಕಟ್ಟೆ ಕಲ್ಪಿಸುವ ಹಿನ್ನಲೆಯಲ್ಲಿ ಉತ್ಪಾದಕರು ಮತ್ತು ಮಾರುಕಟ್ಟೆದಾರರು ಒಟ್ಟಾಗಿ ಚರ್ಚಿಸುವ ಸಲುವಾಗಿ ವೇದಿಕೆ ಕಲ್ಪಿಸಲು ಕಾರ್ಯಗಾರವನ್ನು ಏರ್ಪಡಿಸವುದು.ಸದರಿ ಕಾರ್ಯಕ್ರಮವನ್ನು ಜಿಲ್ಲಾಮಟ್ಟದ ಕಾರ್ಯಗಾರದ ಅಂಗವಾಗಿ ಅಥವಾ ಬೇರೆಯಾಗಿ ಸಹ ಆಯೋಜಿಸಲು ಅವಕಾಶವಿರುತ್ತದೆ. ಈ ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ರೈತರಿಂದ ಖರೀದಿಸಲು ಅನುವು ಮಾಡಿಕೊಡುವ ಕುರಿತು ತಾಲ್ಲೂಕುವಾರು, ಗ್ರಾಮವಾರು, ರೈತವಾರು ಸಿರಿಧಾನ್ಯ ಬೆಳೆಗಳ ಉತ್ಪಾದನೆಯ ವಿವರಗಳನ್ನು ಮಾರುಕಟ್ಟೆದಾರರೊಂದಿಗೆ (ಎಫ್.ಪಿ.ಒ) ಚರ್ಚಿಸಿ, ಉತ್ಪಾದಕರಿಂದ ನೇರವಾಗಿ ಖರೀದಿ ಮಾಡುವ ಪ್ರಮಾಣವನ್ನು ಸ್ಪಷ್ಟೀಕರಿಸುವ ಕುರಿತು ಸಂಪರ್ಕ ಏರ್ಪಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸುವುದು. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ನಿಗದಿಪಡಿಸಿರುವ ಆರ್ಥಿಕ ವೆಚ್ಚದ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ವಿವರಗಳು | ಅಂದಾಜು ಆರ್ಥಿಕ ವೆಚ್ಚದ ವಿವರ (ರೂ. ಲಕ್ಷಗಳು) |
|---|---|---|
| 1 | ಧ್ವನಿ ವ್ಯವಸ್ಥೆ, ವೇದಿಕೆ ಅಲಂಕಾರ, ಡಿಜಿಟಲ್ ಪ್ರದರ್ಶನ, ಜನರೇಟರ್ ಇತ್ಯಾದಿ ಸೇರಿದಂತೆ ಸಭಾಂಗಣದ ಶುಲ್ಕಗಳು | 0.05 |
| 2 | ಟೀ, ಕಾಫಿ, ಊಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ (250X60) | 0.15 |
| 4 | ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಧನ, ಪ್ರಯಾಣ ವೆಚ್ಚ ಮತ್ತು ಇತರೆ | 0.10 |
| 5 | ದಾಖಲಾತಿ, ದತ್ತಾಂಶ ನಿರ್ವಹಣೆಗಾಗಿ ಮತ್ತು | 0.10 |

| | | |
|---|---|---|
| | ತರಬೇತಿ ಸಾಮಾಗ್ರಿ | |
| | ಒಟ್ಟು | 0.40 |

ಷರಾ: ಸ್ಥಳೀಯ ಅವಶ್ಯಕತೆಗನುಗುಣವಾಗಿ ದಿನ ಭತ್ಯೆ ಹೊರೆತುಪಡಿಸಿ ಅಂತರಘಟಕ ಬದಲಾವಣೆಗೆ ಅವಕಾಶವಿರುತ್ತದೆ.

4. ಸಿರಿಧಾನ್ಯ ರೋಡ್ ಶೋ: ಗ್ರಾಹಕರಿಗೆ ಅರಿವು ಮೂಡಿಸುವ ಸಲುವಾಗಿ ಜಿಲ್ಲಾಮಟ್ಟದ ಅಧಿಕಾರಿಗಳ ಸಹಯೋಗದೊಂದಿಗೆ ಸಿರಿಧಾನ್ಯ ರೋಡ್ ಶೋ ಆಯೋಜಿಸುವುದು. ಸದರಿ ರೋಡ್ ಶೋ ಮುಂದಿನ ಪೀಳಿಗೆಗೆ ಸಿರಿಧಾನ್ಯ ಬೆಳೆಗಳ ಬಗ್ಗೆ ಅರಿವು ಮೂಡಿಸಲು ಪ್ರಗತಿ ಪರ ಸಿರಿ ಧಾನ್ಯ ಬೆಳೆಗಾರರು, ಸಂಸ್ಕರಣಾ ಘಟಕಗಳ ಉತ್ಪಾದಕರು ಮಾರುಕಟ್ಟೆದಾರರು, ಸಂಘ ಸಂಸ್ಥೆಗಳಪ್ರತಿನಿಧಿಗಳು , ಶಾಲಾ/ಕಾಲೇಜ್ ಮಕ್ಕಳು/ಯುವಕ, ಯುವತಿಯರನ್ನು ಸಹ ಒಳಗೊಂಡು ರೋಡ್ ಶೋ ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಬಹುದಾಗಿದೆ.

| ಕ್ರ ಸಂ | ವಿವರಗಳು | ಅಂದಾಜು ಆರ್ಥಿಕ ವೆಚ್ಚದ ವಿವರ (ರೂ. ಲಕ್ಷಗಳು) |
|---|---|---|
| 1 | ಪೋಸ್ಟರ್ ಗಳು, ಬ್ಯಾನರ್ ಗಳು, ಮಾಹಿತಿ ಸಾಮಾಗ್ರಿಗಳ ಖರೀದಿ ಮತ್ತು ತಯಾರಿ ಇತ್ಯಾದಿ | 0.15 |
| 2 | ಟೀ ಶರ್ಟ್, ಕ್ಯಾಪ್ ಖರೀದಿ ಮತ್ತು ವಿತರಣೆ ಇತ್ಯಾದಿ ( ಒಟ್ಟು 500 ಸಂಖ್ಯೆ ಗೆ ಪ್ರತಿಯೊಬ್ಬರಿಗೆ ರೂ.250 ಗಳಂತೆ) | 1.25 |
| 4 | ಟೀ, ಕಾಫಿ, ಉಪಹಾರ ಮತ್ತು ಕುಡಿಯುವ ನೀರಿನ ವ್ಯವಸ್ಥೆ (50*600 ಸಂಖ್ಯೆಗಳಂತೆ | 0.30 |
| 5 | ದಾಖಲೀಕರಣ ವೆಚ್ಚ | 0.15 |
| | ಒಟ್ಟು | 1.85 |

5. **ಪ್ರಚಾರ ವೆಚ್ಚಕ್ಕಾಗಿ** ಪ್ರತೀ ಜಿಲ್ಲೆಗೆ ರೂ. 40000/- ಗಳನ್ನು ನಿಗದಿಪಡಿಸಲಾಗಿದೆ. ಸದರಿ ವೆಚ್ಚವನ್ನು ನ್ಯೂಟ್ರಿ ಸಿರಿಧಾನ್ಯಗಳ ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳು, ಸಂಸ್ಕರಣಾ ವಿಧಾನಗಳು ಯಶೋಗಾಥೆಗಳು ಕುರಿತು ಅಡುಗೆ ಸ್ಪರ್ಧೆ, ಚಿತ್ರ ಕಲಾ ಸ್ಪರ್ಧೆ ಇತ್ಯಾದಿಗಳಿಗೆ ಭರಿಸುವುದು.

**VI. ಇತರೆ ವೆಚ್ಚಗಳು:**

ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಎನ್.ಎಫ್.ಎಸ್.ಎಂ ಯೋಜನೆಯಡಿ ಕಾರ್ಯ ನಿರ್ವಹಿಸುವ ಯೋಜನಾ ನಿರ್ವಹಣಾ ತಂಡದ ರಾಜ್ಯ ಮಟ್ಟದ ಸಲಹೆಗಾರರು, ತಾಂತ್ರಿಕ ಸಹಾಯಕರು, ಜಿಲ್ಲಾ ಮಟ್ಟದ ಸಲಹೆಗಾರರು ಮತ್ತು ತಾಂತ್ರಿಕ ಸಹಾಯಕರುಗಳ ವೇತನ ಭರಿಸಲು ಹಾಗೂ ಸಿಬ್ಬಂದಿ

ವರ್ಗದವರ ಕೆಲಸವು ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ಲೇಖನ ಸಾಮಗ್ರಿ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಅನುದಾನವನ್ನು ಒದಗಿಸಿಕೊಳ್ಳಲಾಗಿದೆ.

ಲಗತ್ತು:

1. ಅನುಬಂಧ-1 : ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

2.ಅನುಬಂಧ-2: ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಗುಚ್ಛ ಪ್ರಾತ್ಯಕ್ಷಿಕೆಗಳು: ಚಟುವಟಿಕೆಗಳು ಮತ್ತು ವೆಚ್ಚ

## ಅನುಬಂಧ-1

## 2020-21 ನೇ ಸಾಲಿನ ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

### 1. ಎನ್.ಎಫ್.ಎಸ್.ಎಂ (ಅಕ್ಕಿ) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

| ಕ್ರ. ಸಂ | ಘಟಕ | ಶೇ. 50 ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | ಸಮಗ್ರ ಪೋಷಕಾಂಶ ನಿರ್ವಹಣೆ | |
| | ಅ) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಕೃಷಿ ಸುಣ್ಣ | ಪ್ರತಿ ಹೆಕ್ಟೇರ್ ಗೆ ರೂ.1000/- |
| 2 | ಸಸ್ಯ ಸಂರಕ್ಷಣೆ ನಿರ್ವಹಣೆ | |
| | ಅ) ಸಸ್ಯ ಸಂರಕ್ಷಣಾ ಔಷಧಿಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| 3 | ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು | |
| | ಅ) ಪವರ್ ನ್ಯಾಪ್‌ಸ್ಯಾಕ್ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.2500-3100/- |
| | ಆ) ಭತ್ತದ ಒಕ್ಕಣೆ ಯಂತ್ರ/ ಬಹು ಬೆಳೆ ಒಕ್ಕಣೆ ಯಂತ್ರ | ಪ್ರತಿ ಘಟಕಕ್ಕೆ ರೂ.30000-40000/- |
| | ಇ)ಸೆಲ್ಫ್ ಪ್ರೊಪೆಲ್ಡ್ ಭತ್ತದ ನಾಟಿ ಯಂತ್ರ | ಪ್ರತಿ ಘಟಕಕ್ಕೆ ರೂ.60000-75000/- |
| | ಈ)ರೋಟೋವೇಟರ್ | ಪ್ರತಿ ಘಟಕಕ್ಕೆ ರೂ. 34000-42000/- |
| | ಉ) ಪವರ್ ವೀಡರ್ | ಪ್ರತಿ ಘಟಕಕ್ಕೆ ರೂ. 20000-25000/- |
| 4 | ಸಮರ್ಥ ನೀರಾವರಿ ಸಾಧನಗಳು | |
| | ಅ) ಪಂಪ್ ಸೆಟ್‌ಗೆ ಪ್ರೋತ್ಸಾಹ ಧನ | ಪ್ರತಿ ಘಟಕಕ್ಕೆ ರೂ.10000/- |
| 5 | ಸ್ಥಳೀಯ ಪ್ರೇರಕಗಳು | |
| | ಅ) ಹಸಿರೆಲೆ ಗೊಬ್ಬರ ಬೀಜ ವಿತರಣೆ | ಶೆ.50 ರ ರಿಯಾಯಿತಿ, ಗರಿಷ್ಟ ಪ್ರತಿ ಹೆಕ್ಟೇರ್ ಗೆ ರೂ.2000/- |

2. ಎನ್.ಎಫ್.ಎಸ್.ಎಂ (ದ್ವಿದಳಧಾನ್ಯಗಳು) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

| ಸಂ | ಘಟಕ | ಶೇ.50 ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | ಸಮಗ್ರ ಪೀಡೆ ನಿರ್ವಹಣೆ | |
| | ಅ) ಸಸ್ಯ ಸಂರಕ್ಷಣಾ ಔಷಧಿಗಳು/ ಜೈವಿಕ ನಿಯಂತ್ರಣಕಾರಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| 2 | ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು | |
| | ಅ) ಪವರ್ ನ್ಯಾಪ್‌ಸ್ಯಾಕ್ ಸ್ಪ್ರೇಯರ್ | ಪ್ರತಿ ಘಟಕಕ್ಕೆ ರೂ.2500-3100/ |
| | ಆ) ರೋಟೋವೇಟರ್ | ಪ್ರತಿ ಘಟಕಕ್ಕೆ ರೂ.34000-42000/- |
| | ಇ) ಬಹು ಬೆಳೆ ಒಕ್ಕಣೆ ಯಂತ್ರ | ಪ್ರತಿ ಘಟಕಕ್ಕೆ ರೂ.30000-40000/- |
| 3 | ಸಮರ್ಪಕ ನೀರಾವರಿ ಸಾಧನಗಳು | |
| | ಅ) ಸ್ಪ್ರಿಂಕ್ಲರ್ ಸೆಟ್ | ಪ್ರತಿ ಘಟಕಕ್ಕೆ ರೂ.8794-12046/- |
| | ಆ) ಪಂಪ್ ಸೆಟ್ | ಪ್ರತಿ ಘಟಕಕ್ಕೆ ರೂ.10000/- |
| 4 | **ಇತರೆ ವೆಚ್ಚಗಳು** | |
| | ಅ) ಜಿಲ್ಲಾ ಮಟ್ಟದ PMT ಹಾಗೂ ಸಾದಿಲ್ವಾರು ವೆಚ್ಚ | ರೂ 14.50 ಲಕ್ಷ/ ಪ್ರತಿ ಜಿಲ್ಲೆಗೆ |
| | ಆ) ರಾಜ್ಯ ಮಟ್ಟದ PMTಹಾಗೂ ಸಾದಿಲ್ವಾರು ವೆಚ್ಚ | ರೂ 38.50 ಲಕ್ಷ/ ಪ್ರತಿ ಜಿಲ್ಲೆಗೆ |
| 5 | ಸ್ಥಳೀಯ ಪ್ರೇರಕಗಳು | |
| | ಅ) ಕೊಯ್ಲೋತ್ತರ ತಾಂತ್ರಿಕತೆ-ಉಪಕರಣಗಳ ವಿತರಣೆ | |
| | ದಾಲ್ ಪ್ರೊಸೆಸರ್ | ಶೇ. 50 ರ ರಿಯಾಯಿತಿ ದರದಲ್ಲಿ ಗರಿಷ್ಟ ರೂ. 61,000/- ಗಳವರೆಗೆ ಯಾವುದು ಕಡಿಮೆಯೋ ಆ ದರ |

3. ಎನ್.ಎಫ್.ಎಸ್.ಎಂ (ಒರಟು ಧಾನ್ಯಗಳು) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

| ಕ್ರ. ಸಂ. | ಘಟಕ | ಶೇ.50ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | ಸಮಗ್ರ ಪೋಷಕಾಂಶ ನಿರ್ವಹಣೆ | |
| | ಅ) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಜೈವಿಕ ಗೊಬ್ಬರಗಳು | ಪ್ರತಿ ಹೆಕ್ಟೇರ್ ಗೆ ರೂ.300/- |

| | | |
|---|---|---|
| 2 | ಸಮಗ್ರ ಪೀಡೆ ನಿರ್ವಹಣೆ | |
| | ಅ) ಸಸ್ಯ ಸಂರಕ್ಷಣಾ ಔಷಧಿಗಳು/ಜೈವಿಕ ನಿಯಂತ್ರಣಕಾರಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |

### 4. ಎನ್.ಎಫ್.ಎಸ್.ಎಂ (ನ್ಯೂಟ್ರಿಸಿರಿಧಾನ್ಯಗಳು) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

| ಕ್ರ. ಸಂ. | ಘಟಕ | ಶೇ.50ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | ಸಮಗ್ರ ಪೋಷಕಾಂಶ ನಿರ್ವಹಣೆ | |
| | ಅ) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಜೈವಿಕ ಗೊಬ್ಬರಗಳು | ಪ್ರತಿ ಹೆಕ್ಟೇರ್ ಗೆ ರೂ.300/- |
| 2 | ಸಮಗ್ರ ಪೀಡೆ ನಿರ್ವಹಣೆ | |
| | ಅ) ಸಸ್ಯ ಸಂರಕ್ಷಣಾ ಔಷಧಿಗಳು/ಜೈವಿಕ ನಿಯಂತ್ರಣಕಾರಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| 3 | ಸಮರ್ಪಕ ನೀರಾವರಿ ಸಾಧನಗಳು | |
| | ಅ) ಸ್ಪ್ರಿಂಕ್ಲರ್ ಸೆಟ್ | ಪ್ರತಿ ಘಟಕಕ್ಕೆ ರೂ.8794-12046/- |
| 5 | ಸ್ಥಳೀಯ ಪ್ರೇರಕಗಳು | |
| | a) ಸೀಡ್ ಡ್ರಿಲ್ | ಪ್ರತಿ ಘಟಕಕ್ಕೆ ರೂ.2000-2500/- |

## ಅನುಬಂಧ-2

### ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಗುಚ್ಛ ಪ್ರಾತ್ಯಕ್ಷಿಕೆಗಳು: ಚಟುವಟಿಕೆಗಳು ಮತ್ತು ವೆಚ್ಚ

### 1. ಎನ್ಎಫ್ಎಸ್ಎಂ-ಅಕ್ಕಿ :

### (ಅ) ಅಕ್ಕಿ ನೇರ ಬಿತ್ತನೆ ಬೆಳೆ ಗುಚ್ಛ ಪ್ರಾತ್ಯಕ್ಷಿಕೆ

| ಕ್ರ. ಸಂ. | ಚಟುವಟಿಕೆಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-60 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 1800.00 |
| 2 | ಬೀಜೋಪಚಾರ ಔಷಧಿ | 150.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2500.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |

| | | |
|---|---|---|
| 5 | ಸಮಗ್ರ ಪೀಡೆ ನಿರ್ವಹಣೆ | 1750.00 |
| 6 | ಭೂಮಿ ಉಳುಮೆ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು | 9000.00 |

**ಆ) ಯಾಂತ್ರೀಕೃತ ನಾಟಿ ಗುಚ್ಛ ಪ್ರಾತ್ಯಕ್ಷಿಕೆ :**

| ಕ್ರ. ಸಂ | ಚಟುವಟಿಕೆಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-60 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 1800.00 |
| 2 | ಬೀಜೋಪಚಾರ ಔಷಧಿ | 150.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2500.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ | 1750.00 |
| 6 | ಭೂಮಿ ಉಳುಮೆ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು | 9000.00 |

**ಇ) SRI ಮಾದರಿ ಗುಚ್ಛ ಪ್ರಾತ್ಯಕ್ಷಿಕೆ:**

| ಕ್ರ. ಸಂ | ಚಟುವಟಿಕೆಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-8 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 240.00 |
| 2 | ಬೀಜೋಪಚಾರ ಔಷಧಿ | 150.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2500.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ | 1750.00 |
| 6 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 3060.00 |
| 7 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು | 9000.00 |

ಈ). **ಒತ್ತಡ ಸಹಿಷ್ಣುತೆ-ಬರ ನಿರೋಧಕ ಅಕ್ಕಿ ಬೆಳೆ ಗುಚ್ಛ ಪ್ರಾತ್ಯಕ್ಷಿಕೆ**

| ಕ್ರ. ಸಂ | ಚಟುವಟಿಕೆಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-60 ಕಿ.ಗ್ರಾಂ( ರೂ.30/ಕಿ.ಗ್ರಾಂ.) | 1800.00 |
| 2 | ಬೀಜೋಪಚಾರ ಔಷಧಿ | 150.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2500.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ | 1750.00 |
| 6 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು | 9000.00 |

**ಉ). ಸಂಕರಣ ಅಕ್ಕಿ ಗುಚ್ಛ ಪ್ರಾತ್ಯಕ್ಷಿಕೆ :**

| ಕ್ರ. ಸಂ | ಚಟುವಟಿಕೆಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-20 ಕಿ.ಗ್ರಾಂ (ರೂ.100/ಕಿ.ಗ್ರಾಂ.) | 2000.00 |
| 2 | ಬೀಜೋಪಚಾರ ಔಷಧಿ | 150.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2500.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ | 1550.00 |
| 6 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು | 9000.00 |

## 2. ಎನ್ಎಫ್ಎಸ್ಎಂ-ದ್ವಿದಳಧಾನ್ಯ:ಅ. ತೊಗರಿ ಯಾಂತ್ರೀಕೃತ ಬಿತ್ತನೆ/ಕೂರಿಗೆ ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆ:

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-12 ಕಿ.ಗ್ರಾಂ( ರೂ.120/ಕಿ.ಗ್ರಾಂ.) | 1450.00 |
| 2 | ಬೀಜೋಪಚಾರ(ಪಿ.ಎಸ್.ಬಿ., ರೈಜೋಬಿಯಂ, ಟ್ರೈಕೋಡರ್ಮಾ ಇತ್ಯಾದಿ) | 500.00 |
| 3 | ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 2250.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ-ಸಸ್ಯ ಸಂರಕ್ಷಣೆ ಮತ್ತು ಕಳೆನಾಶಕ | 2000.00 |
| 6 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಕ್ಷೇತ್ರೋತ್ಸವ/ರೈತರ ಗೋಷ್ಠಿ, ಪ್ರಚಾರ, ವಿಜ್ಞಾನಿ/ ತಜ್ಞರುಗಳ ಭೇಟಿ | 800.00 |
| | ಒಟ್ಟು | 9000.00 |

### ಆ. ತೊಗರಿ ನಾಟಿ ಪದ್ಧತಿ ಗುಚ್ಛ ಪ್ರಾತ್ಯಕ್ಷಿಕೆ:

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-2.5 ಕಿ.ಗ್ರಾಂ( ರೂ.120/ಕಿ.ಗ್ರಾಂ.) | 300.00 |
| 2 | ಬೀಜೋಪಚಾರ(ಪಿ.ಎಸ್.ಬಿ., ರೈಜೋಬಿಯಂ, ಟ್ರೈಕೋಡರ್ಮಾ ಇತ್ಯಾದಿ) | 500.00 |
| 3 | ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 2250.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ-ಸಸ್ಯ ಸಂರಕ್ಷಣೆ ಮತ್ತು ಕಳೆನಾಶಕ | 2000.00 |
| 6 | ಸಸಿಗಳ ಸಿದ್ಧತೆ ಮತ್ತು ನಾಟಿ | 2650.00 |
| 7 | ಕ್ಷೇತ್ರೋತ್ಸವ/ರೈತರ ಗೋಷ್ಠಿ, ಪ್ರಚಾರ, ವಿಜ್ಞಾನಿ/ ತಜ್ಞರುಗಳ ಭೇಟಿ | 800.00 |
| | ಒಟ್ಟು | 9000.00 |

## ಇ. ಕಡಲೆ ಯಾಂತ್ರೀಕೃತ ಬಿತ್ತನೆ/ಕೂರಿಗೆ ಬಿತ್ತನೆ ಗುಚ್ಛ ಪ್ರಾತ್ಯಕ್ಷಿಕೆ:

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-50 ಕಿ.ಗ್ರಾಂ( ಗರಿಷ್ಟ ಮಿತಿ) | 1450.00 |
| 2 | ಬೀಜೋಪಚಾರ(ಪಿ.ಎಸ್.ಬಿ., ರೈಜೋಬಿಯಂ, ಟ್ರೈಕೋಡರ್ಮಾ ಇತ್ಯಾದಿ) | 500.00 |
| 3 | ಲಘು ಪೋಷಕಾಂಶಗಳು ಮತ್ತು ಸಾವಯವ ಗೊಬ್ಬರ | 2250.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ-ಸಸ್ಯ ಸಂರಕ್ಷಣೆ ಮತ್ತು ಕಳೆನಾಶಕ | 2000.00 |
| 6 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಕ್ಷೇತ್ರೋತ್ಸವ/ರೈತರ ಗೋಷ್ಠಿ, ಪ್ರಚಾರ, ವಿಜ್ಞಾನಿ/ ತಜ್ಞರುಗಳ ಭೇಟಿ | 800.00 |
| | ಒಟ್ಟು | 9000.00 |

## ಉ. ಹೆಸರು/ಉದ್ದು ಸಾಲು ಬಿತ್ತನೆ ಪ್ರಾತ್ಯಕ್ಷಿಕೆ:

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ-12 ಕಿ.ಗ್ರಾಂ( ರೂ.100/ಕಿ.ಗ್ರಾಂ.) | 1200.00 |
| 2 | ಬೀಜೋಪಚಾರ(ಪಿ.ಎಸ್.ಬಿ., ರೈಜೋಬಿಯಂ, ಟ್ರೈಕೋಡರ್ಮಾ ಇತ್ಯಾದಿ) | 500.00 |
| 3 | ಲಘು ಪೋಷಕಾಂಶಗಳು ಮತ್ತು ಸಾವಯವಗೊಬ್ಬರ | 2500.00 |
| 4 | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | 500.00 |
| 5 | ಸಮಗ್ರ ಪೀಡೆ ನಿರ್ವಹಣೆ-ಸಸ್ಯ ಸಂರಕ್ಷಣೆ ಮತ್ತು ಕಳೆನಾಶಕ | 2000.00 |
| 6 | ಭೂಮಿ ಉಳುಮೆ, ನಾಟಿ ಇತ್ಯಾದಿಗಳಿಗೆ ಬಾಡಿಗೆ ಸೇವಾ ಶುಲ್ಕಗಳು | 1500.00 |
| 7 | ಕ್ಷೇತ್ರೋತ್ಸವ/ರೈತರ ಗೋಷ್ಠಿ, ಪ್ರಚಾರ, ವಿಜ್ಞಾನಿ/ ತಜ್ಞರುಗಳ ಭೇಟಿ | 800.00 |
| | ಒಟ್ಟು | 9000.00 |

**ಊ. ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆಗಳು (ಎನ್‌ಎಫ್‌ಎಸ್‌ಎಂ-ಅಕ್ಕಿ ಮತ್ತು ದ್ವಿದಳಧಾನ್ಯ ಕಾರ್ಯಕ್ರಮ)**

**i) . ಭತ್ತ-ಕಡಲೆ ಅನುಕ್ರಮ ಬೆಳೆ ಪ್ರಾತ್ಯಕ್ಷಿಕೆ**

| ಕ್ರ. ಸಂ | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬೀಜ- 60 ಕಿ.ಗ್ರಾಂ (ರೂ.50/ಕಿ.ಗ್ರಾಂ.) | 3000.00 |
| 2 | ಬೀಜೋಪಚಾರ ಔಷಧಿ | 200.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 1500.00 |
| 4 | ಸಮಗ್ರ ಪೀಡೆ ನಿರ್ವಹಣೆ | 2000.00 |
| 5 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು ಮೊತ್ತ | 7500.00 |

## ii). ಭತ್ತ- ಅಲಸಂದೆ/ಹೆಸರು/ಉದ್ದು ಅನುಕ್ರಮ ಬೆಳೆ ಪ್ರಾತ್ಯಕ್ಷಿಕೆ

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬೀಜ- 15 ಕಿ.ಗ್ರಾಂ (ರೂ.100/ಕಿ.ಗ್ರಾಂ.) | 1500.00 |
| 2 | ಬೀಜೋಪಚಾರ ಔಷಧಿ | 200.00 |
| 3 | ಜೈವಿಕ ಗೊಬ್ಬರ, ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2500.00 |
| 4 | ಸಮಗ್ರ ಪೀಡೆ ನಿರ್ವಹಣೆ | 2500.00 |
| 5 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು ಮೊತ್ತ | 7500.00 |

## iii). ಭತ್ತದ ಕಟಾವಿನ ನಂತರ ಅಲಸಂದೆ/ಹೆಸರು/ಉದ್ದು ಅನುಕ್ರಮ ಬೆಳೆ ಪ್ರಾತ್ಯಕ್ಷಿಕೆ (ರೂ.ಗಳಲ್ಲಿ)

| ಕ್ರ. ಸಂ. | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ |
|---|---|---|
| ಅಲಸಂದೆ/ಹೆಸರು/ಉದ್ದು ಅನುಕ್ರಮ ಬೆಳೆ ಪ್ರಾತ್ಯಕ್ಷಿಕೆ | | |
| 1 | ಬೀಜ- 15 ಕಿ.ಗ್ರಾಂ (ರೂ.100/ಕಿ.ಗ್ರಾಂ.) | 1500.00 |
| 2 | ಬೀಜೋಪಚಾರ ಔಷಧಿ | 200.00 |
| 3 | ಜೈವಿಕ ಗೊಬ್ಬರ ಮತ್ತು ಲಘು ಪೋಷಕಾಂಶಗಳು | 700.00 |

| | | |
|---|---|---|
| 4 | ಸಮಗ್ರ ಪೀಡೆ ನಿರ್ವಹಣೆ-ಸೋಲಾರ್ ಬೆಳಕು ಬಲೆಗಳನ್ನು ಗುಚ್ಛಗಳಲ್ಲಿ ಅಳವಡಿಸುವುದು | 1800.00 |
| 5 | ರೈತರಿಗೆ ಪ್ರೋತ್ಸಾಹಧನ | 2500.00 |
| 6 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು ಮೊತ್ತ | 7500.00 |

## 2. ಎನ್.ಎಫ್.ಎಸ್.ಎಂ–ಒರಟು ಧಾನ್ಯಗಳು:

### ಅ) ಮುಸುಕಿನ ಜೋಳ -ದ್ವಿದಳಧಾನ್ಯಗಳ ಅಂತರ ಬೆಳೆ ಮತ್ತು ಸುಧಾರಿತ ಬೇಸಾಯ ಕ್ರಮಗಳ ಪ್ರಾತ್ಯಕ್ಷಿಕೆ

| ಕ್ರ. ಸಂ | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಮುಸುಕಿನ ಜೋಳ 15 ಕೆ.ಜಿ (ಗರಿಷ್ಟ ಮಿತಿ) | 750.00 |
| 2 | ಅಂತರ ಬೆಳೆ ದ್ವಿದಳ ಧಾನ್ಯಗಳ ಬೀಜ/(ಗರಿಷ್ಟ ಮಿತಿ) | 700.00 |
| 3 | ದ್ವಿದಳ ಧಾನ್ಯಗಳ ಬೀಜೋಪಚಾರ ಔಷದಿ | 250.00 |
| 4 | ಸಿಟಿ ಕಾಂಪೋಸ್ಟ/ ಎರೆಹುಳುಗೊಬ್ಬರ ಮತು ತಲಘು ಪೋಷಕಾಂಶಗಳು | 2000.00 |
| 5 | ಜೈವಿಕ ಗೊಬ್ಬರಗಳು | 200.00 |
| 6 | ಸಸ್ಯ ಸಂರಕ್ಷಣೆ | 1300.00 |
| 7 | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| | ಒಟ್ಟು | 6000.00 |

## 2. ಎನ್.ಎಫ್.ಎಸ್.ಎಂ-ನ್ಯೂಟ್ರಿಸಿರಿಧಾನ್ಯಗಳು:

### ಅ) ರಾಗಿ, ಜೋಳ, ಸಜ್ಜೆ & ಇತರೆ ಸಿರಿ ಧಾನ್ಯಗಳ ಪ್ರಾತ್ಯಕ್ಷಿಕೆಗಳು :

| ಕ್ರ.ಸಂ | ಪ್ರೇರಕಗಳ ವಿವರ | ಪ್ರತಿ ಹೆಕ್ಟೇರ್‌ಗೆ ವೆಚ್ಚ (ರೂ.ಗಳಲ್ಲಿ) |
|---|---|---|
| 1 | ಬಿತ್ತನೆ ಬೀಜ(ರಾಗಿ, ಜೋಳ, ಸಜ್ಜೆ & ಇತರೆ ತೃಣ ಧಾನ್ಯಗಳು) | 700.00 |
| 2 | ಬೀಜೋಪಚಾರ ಔಷಧಿ/ಜೈವಿಕ ಗೊಬ್ಬರಗಳು | 250.00 |
| 3 | ಲಘು ಪೋಷಕಾಂಶಗಳು & ಸಾವಯವ ಗೊಬ್ಬರ | 2000.00 |
| 4 | ಸಮಗ್ರ ಪೀಡೆ ನಿರ್ವಹಣೆ | 750.00 |
| 5 | ಪ್ರಚಾರ*, ಕ್ಷೇತ್ರೋತ್ಸವ ಮತ್ತು ಇತರೆ ವೆಚ್ಚ | 800.00 |
| 6 | ಯಾಂತ್ರೀಕರಣಕ್ಕಾಗಿಸಹಾಯಧನ (ಯಾಂತ್ರೀಕೃತ ಕಟಾವು/ ಯಾಂತ್ರೀಕೃತ ಸಂಸ್ಕರಣೆ) | 1500.00 |
| | ಒಟ್ಟು | 6000.00 |

## 2020-21 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎನ್.ಎಫ್.ಎಸ್.ಎಂ- ಎಣ್ಣೆಕಾಳು ಬೆಳೆಗಳ ಮಾರ್ಗಸೂಚಿಗಳು

ಯೋಜನೆಯಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ - ಎಣ್ಣೆಕಾಳು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ.

**ಯೋಜನೆಯ ಉದ್ದೇಶಗಳು:**

4) ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.

5) ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.

6)ಕ್ಷೇತ್ರ ಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದೆ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.

### ಯೋಜನೆಯ ಪ್ರಮುಖ ಘಟಕಗಳು

1. ಬಿತ್ತನೆ ಬೀಜ ವಿತರಣೆ
2. ಗುಚ್ಛ ಪ್ರಾತ್ಯಕ್ಷತೆಗಳು
3. ಉತ್ಪಾದನಾ ಪರಿಕರಗಳು
4. ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳು
5. ಕೃಷಿ ಯಂತ್ರೋಪಕರಣಗಳು
6. ರೈತರ ತರಬೇತಿಗಳು

### ಕಾರ್ಯಕ್ರಮದ ಅನುಮೋದನೆ ಹಾಗೂ ಅನುಷ್ಠಾನ ಪ್ರಕ್ರಿಯೆ

ಕೇಂದ್ರ ಕೃಷಿ ಮತ್ತು ಸಹಕಾರ ಇಲಾಖೆ ಭಾರತ ಸರ್ಕಾರ ಇವರಿಂದ ಪ್ರತಿ ರಾಜ್ಯಕ್ಕೆ ತಾತ್ಕಾಲಿಕ ಕಾರ್ಯಕ್ರಮವನ್ನು ನೀಡುತ್ತಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ದಪಡಿಸುವಂತೆ ತಿಳಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸೂಚಿಸಲಾದ ಮಾರ್ಗಸೂಚಿಗಳನ್ನು ಹಾಗೂ ಆಯಾ ಬೆಳೆಗಳಲ್ಲಿ ಜಿಲ್ಲೆಯ ಆದ್ಯತೆ ಮತ್ತು ಸಾಮರ್ಥ್ಯತೆಯನ್ನು ಪರಿಗಣನೆಯಲ್ಲಿರಿಸಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎಣ್ಣೆಕಾಳು ಕಾರ್ಯಕಾರಿ ಸಮಿತಿಯು ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ರಾಜ್ಯ ಅಭಿಯಾನ ನಿರ್ದೇಶಕರಿಗೆ ಸಲ್ಲಿಸುವುದು.

ಜಿಲ್ಲೆಗಳ ಕ್ರಿಯಾ ಯೋಜನೆಗಳನ್ನು ಪರಿಗಣನೆಯಲ್ಲಿರಿಸಿ ಸಿದ್ದಪಡಿಸಲಾಗುವ ರಾಜ್ಯ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದ ನಂತರ ಕ್ರಿಯಾ ಯೋಜನೆಯನ್ನು ಕೇಂದ್ರ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ -ಎಣ್ಣೆಕಾಳು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.ಕ್ರಿಯಾ ಯೋಜನೆಯೊಂದಿಗೆ ಹಿಂದಿನ ವರ್ಷದಲ್ಲಿ ಅನುಷ್ಠಾನಗೊಳಿಸಲಾದ ಸದರಿ ಯೋಜನೆಯ ಪ್ರಗತಿ ವಿವರ , ನೂತನ ಅವಿಷ್ಕಾರಗಳು, ಫಲಶೃತಿ, ಅನುಭವ ಯಶೋಗಾಥೆಗಳ ವಿವರಗಳನ್ನು ಸಹ ಸಲ್ಲಿಸಲಾಗುವುದು.

ಯೋಜನೆಯಡಿ ರಾಜ್ಯಕ್ಕೆ ಹಂಚಿಕೆಯಾಗಿರುವ ಒಟ್ಟಾರೆ ಅನುದಾನದಲ್ಲಿ ಜಿಲ್ಲೆಗಳ ಸ್ಥಳೀಯ ಅವಶ್ಯಕತೆಗಳನ್ನಾಧರಿಸಿ ಶೇ.20ರಷ್ಟು ಅನುದಾನಕ್ಕೆ ಘಟಕ ಪರಿವರ್ತನೆಗೆ ಅನುಮೋದನೆ ನೀಡಲು ರಾಜ್ಯ ಮಟ್ಟದ ಎಣ್ಣೆಕಾಳು ಅಭಿಯಾನದ ನಿರ್ದೇಶಕರಿಗೆ ಅಧಿಕಾರವಿರುತ್ತದೆ.

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

- ✓ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗದಿಪಡಿಸಿ ಬಿಡುಗಡೆಗೊಳಿಸಲಾಗುವುದು.
- ✓ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಟ ಶೇ.33 ರಷ್ಟನ್ನು ಮೀಸಲಿರಿಸುವುದು.
- ✓ ಮಹಿಳಾ ರೈತರಿಗೆ ಅನುದಾನದ ಕನಿಷ್ಟ ಶೇ.30 ರಷ್ಟನ್ನು ಮೀಸಲಿರಿಸುವುದು.
- ✓ ಅಧ್ಯಕ್ಷರು, ಜಿಲ್ಲಾಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಎಣ್ಣೆಕಾಳು ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು. ಬಿತ್ತನೆಬೀಜ ಸಹಾಯಾನುದಾನವು ಕೇಂದ್ರಮಟ್ಟದಲ್ಲಿ ವಿತರಣೆಯಾಗಿದ್ದಲ್ಲಿ ವಿತರಣೆಯನಂತರ ಫಲಾನುಭವಿಗಳ ಪಟ್ಟಿಯನ್ನು ಐಚ್ಛಿಕವಾಗಿ ಪರಿಶೀಲಿಸಿ ಅನುಮೋದಿಸುವುದು.

- ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃ.ವಿ.ವಿ.ಯವಲಯ ಸಂಶೋಧನಾ ಕೇಂದ್ರಗಳು, ಕೆ.ವಿ.ಕೆಗಳು ATMA, NGOಗಳು ಮತ್ತು ಸಹಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮವಹಿಸುವುದು.

- ಜಿಲ್ಲಾ ಮಟ್ಟದ ಯೋಜನಾನಿರ್ವಹಣೆ ತಂಡವುಸಂಶೋಧನಾಕೇಂದ್ರಗಳು ಮತ್ತುಸಹಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

**2019-20 ನೇ ಸಾಲಿನಲ್ಲಿ ರಾಷ್ಟ್ರೀಯಆಹಾರಭದ್ರತಾಅಭಿಯಾನ – ಎಣ್ಣೆಕಾಳು ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತದೆ.**

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛಪ್ರಾತ್ಯಕ್ಷಿಕೆಗಳಾಗಿ, ಪ್ರತಿಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆಬೀಜವನ್ನು ರೈತರಿಗೆ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಹತ್ತುವರ್ಷಗಳಿಂದೀಚೆಗೆ

ಬಿಡುಗಡೆಯಾದ ತಳಿಗಳ ಬಿತ್ತನೆಬೀಜಗಳನ್ನು ಮಾತ್ರ ವಿತರಿಸಲು ಅವಕಾಶವಿರುತ್ತದೆ.

- ಪ್ರಮಾಣಿತಬಿತ್ತನೆ ಬೀಜವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 15 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು.

## ಯೋಜನೆಯ ಪ್ರಮುಖ ಘಟಕಗಳು

### I. ಬೀಜಘಟಕ

### 1. ತಳಿ ವರ್ಧಕಬಿತ್ತನೆ ಬೀಜ ಖರೀದಿ

ಕೇಂದ್ರಸರ್ಕಾರವು ರಾಜ್ಯದ ಕೃಷಿವಿಶ್ವವಿದ್ಯಾನಿಲಯಗಳು, ಇತರೆ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಿಂದ ಹಾಗೂ ಸಂಶೋಧನಾಕೇಂದ್ರಗಳಿಂದ ತಳಿವರ್ಧಕ ಬಿತ್ತನೆಬೀಜವನ್ನು ಖರೀದಿಸುವ ಬೀಜಸಂಸ್ಥೆಗಳಿಗೆ ಮತ್ತು ಇಲಾಖಾ ಬೀಜೋತ್ಪಾದನಾ ಕೇಂದ್ರಗಳಿಗೆ ಖರೀದಿಸಿದಬೀಜಕ್ಕೆ ಪೂರ್ತಿಹಣವನ್ನು ಮರುಪಾವತಿ ಮಾಡಲು ಕೇಂದ್ರಸರ್ಕಾರವು ನೀಡಿರುವ ಆದೇಶದಂತೆ ನೀಡಲಾಗುವುದು. ಸದರಿಘಟಕವನ್ನು ಕೇಂದ್ರಕಛೇರಿಯಿಂದ ಭರಿಸಲಾಗುವುದು.

### 2.ಪ್ರಮಾಣಿತ ಬಿತ್ತನೆಬೀಜ ವಿತರಣಾ ಕಾರ್ಯಕ್ರಮ

ಪ್ರಮಾಣಿತ ಬಿತ್ತನೆಬೀಜದ ಬಳಕೆಯನ್ನು ಹೆಚ್ಚುಪ್ರಚಾರ ಪಡಿಸುವಸಲುವಾಗಿ ರೈತರುಖರೀದಿಸುವ ಪ್ರತಿ ಕ್ವಿಂಟಾಲ್ ಪ್ರಮಾಣಿತಬೀಜಕ್ಕೆ ಬೀಜದ ಶೇ.50ರಷ್ಟು ದರ ಅಥವಾ ಗರಿಷ್ಠ ರೂ.4000/- ಗಳ ಸಹಾಯಧನವನ್ನು (ನೆಲಗಡಲೆ ತಳಿಗೆ ) ಮತ್ತು ಗರಿಷ್ಠ ರೂ.2000/- ಗಳಸಹಾಯಧನವನ್ನು (ಸೋಯಾಬೀನ್ಸ್) ನೀಡಲಾಗುವುದು, ಹೈಬ್ರಿಡ್ ತಳಿಗಳಿಗೆ ಶೇ.50ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್ ಗೆ ರೂ.8000/- ಕ್ಕೆಮೀರದಂತೆ ವಿತರಿಸುವುದು. (ಸದರಿ ಪ್ರಮಾಣಿತ ಭಿತ್ತನೆ ಬೀಜ ವಿತರಣೆಯನ್ನು ಬೀಜವಿಭಾಗದ ದರಕರಾರಿನ ಅನ್ವಯ ಅನುಷ್ಠಾನಗೊಳಿಸುವುದು)

ಪ್ರಮಾಣಿತ ಬಿತ್ತನೆಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 10 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು.

### II. ಪ್ರಾತ್ಯಕ್ಷಿಕೆಗಳು:

- ಎಣ್ಣೆ ಕಾಳು ಬೆಳೆಗಳಲ್ಲಿ ನೂತನ/ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿ ಏಕ ಬೆಳೆ ಮತ್ತು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಕಿಗಳನ್ನು ಕೈಗೊಳ್ಳುವುದು.
- ಶೇ.30ರಷ್ಟು ಪ್ರಾತ್ಯಕ್ಷಿಕೆಗಳನ್ನುಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು. ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಯಲ್ಲಿ ಬೆಳೆಗಳನ್ನು ಅನುಕ್ರಮವಾಗಿ ಅದೇ ತಾಕಿನಲ್ಲಿ ಬೆಳೆಯುದು.
- ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 50 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstration) ಪದ್ಧತಿಯಲ್ಲಿ ಏರ್ಪಡಿಸುವುದು.

- ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು.
- ಪ್ರಾತ್ಯಕ್ಷಿಕೆಯನ್ನು ಆಯೋಜಿಸುವಾಗ ಪ್ರಾತ್ಯಕ್ಷಿಕೆ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸುವುದು; ಮತ್ತೊಂದು ಭಾಗದಲ್ಲಿ ರೈತರು ಅಳವಡಿಸುವ ಪದ್ಧತಿಗಳೊಂದಿಗೆ ಚೆಕ್ ಪ್ಲಾಟ್ ಆಗಿ ನಿರ್ವಹಿಸುವುದು. ಕಡಿಮೆ ಇಳುವರಿ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ಒಂದು ಗುಚ್ಚ ಪ್ರದೇಶದಲ್ಲಿ ಒಳಪಡುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಸುವುದು. ಪ್ರತಿ ರೈತನ ಕನಿಷ್ಟ1.0 ಹೆ. ಪ್ಎದೇಶವನ್ನು ಗುಚ್ಚದಲ್ಲಿ ಸೇರ್ಪಡೆಗೊಳಿಸುವುದು.
- ಎಣ್ಣೆಕಾಳು ಬೆಳೆಗಳಲ್ಲಿ ಅಂತರ ಬೆಳೆ/ಸುಧಾರಿತ ತಳಿಗಳ/ಕೂರಿಗೆ ಬಿತ್ತನೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- **ಬೆಳೆ ಪದ್ಧತಿಗಳ (ಎಣ್ಣೆಕಾಳು ಬೆಳೆ ಮುಖ್ಯ ಬೆಳೆಯಾಗಿ) ಬಗ್ಗೆ ಮತ್ತು ಅಂತರ ಬೆಳೆಯಾಗಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.**
- ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ / ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ , ಬಳಸಲಾದ ಪೋಷಕಾಂಶಗಳು, ಬಿತ್ತನೆ ಬೀಜ ಪ್ರಮಾಣ , ಬೆಳೆಯತರ ಬಳಸಲಾದ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು.
- ಜಿಲ್ಲೆಯ ಪ್ರಾತ್ಯಕ್ಷಿಕೆಯ ಸಮಗ್ರ ವರದಿಯನ್ನು ನಿಯತಕಾಲಿಕವಾಗಿ ನಿಗದಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಕಳುಹಿಸುವುದು.
- ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ(Pod filling stage) ಕ್ಷೇತ್ರೋತ್ಸವವನ್ನು ಆಚರಿಸುವುದು.
- ಪ್ರಾತ್ಯಕ್ಷಿಕೆ ತಾಕುಗಳು ಭೂ ಚೇತನ ಯೋಜನೆ ಮತ್ತು ಭು ಚೇತನ ಪ್ಲಸ್ ಯೋಜನೆಯಡಿ ವಿಲೀನವಾಗುವಂತೆ ಕಾರ್ಯಕ್ರಮ ರೂಪಿಸುವುದು.
- ಸದರಿ ಯೋಜನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲು ಆತ್ಮ ಸಿಬ್ಬಂದಿಯ ನೆರವನ್ನು ಪಡೆಯುವುದು.
- ಸೂಚನೆ NFSM-Oilseeds ಪ್ರಾತ್ಯಕ್ಷಿಕೆಯ ವಿವರಗಳು (GPS CO-ordinate ಸಹಿತ) ಹಾಗೂ ದಾಕಲಾತಿಗಲನ್ನೊಲಗೊಂಡ (ಛಾಯಚಿತ್ರಗಳು ಇತ್ಯಾದಿ) ಪ್ರತ್ಯೇಕ ವಹಿಯನ್ನು –ಆಯಾ ರೈತ ಸಂಪರ್ಕ ಕೇಂದ್ರಗಳಲ್ಲಿ ನಿರ್ವಹಿಸುವುದು.NFSM-OS ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಾತ್ಯಕ್ಷಿಕೆಗಳ ವಿವರಗಳನ್ನು ಕ್ರೋಢಿಕರಿಸಿ ಮಾಹಿತಿಯು ಸಕಾಲದಲ್ಲಿ ಲಭ್ಯವಿರುವಂತೆ ಕ್ರಮ ವಹಿಸುವುದು.

ಸೂಚನೆ:ಪ್ರಾತ್ಯಕ್ಷಿಕೆಗಳಿಗೆ 10 ವರ್ಷಗಳ ಒಳಗಿನ ತಳಿ/ಸಂಕರಣಗಳನ್ನು ಬಳಸಬಹುದಾಗಿದೆ.

**ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಗುಚ್ಛ ಪ್ರಾತ್ಯಕ್ಷಿಕೆಗಳಚಟುವಟಿಕೆಗಳು ಮತ್ತು ವೆಚ್ಚ ವನ್ನು ಅನುಭಂದ-1 ರಲ್ಲಿ ನೀಡಲಾಗಿದೆ.**

## III. ಬೀಜೇತರ ಘಟಕಗಳು (ಉತ್ಪಾದನಾ ಪರಿಕರಗಳು)

### 1. ಜಿಪ್ಸಂ – ಪೈರೇಟ್ಸ್/ಲೈಮಿಂಗ್/ಡೊಲೊಮೈಟ್/ಸಿಂಗಲ್ ಸೂಪರ್ ಫಾಸ್ಪೇಟ್ ವಿತರಣೆ

ಈ ಕಾರ್ಯಕ್ರಮದ ಮೂಲಕ ಎಣ್ಣೆಕಾಳು ಬೆಳೆಗಳಲ್ಲಿ ಅದರಲ್ಲೂ ಮುಖ್ಯವಾಗಿ ನೆಲಗಡಲೆ ಬೆಳೆಗೆ ಜಿಪ್ಸಂ ಲವಣವನ್ನು ಸರಬರಾಜು ಮಾಡಲಾಗುವುದು. ಜಿಪ್ಸಂ ಸರಬರಾಜಿನಲ್ಲಿ ಸಾಗಾಣಿಕೆ ವೆಚ್ಚವು ಅತೀ ಹೆಚ್ಚಾಗಿರುವುದರಿಂದ ಸಾಗಾಣಿಕೆ ವೆಚ್ಚದ ಭಾರವನ್ನು ರ್ಐತರಿಗೆ ಕಡಿಮೆ ಮಾಡಲು ಈ ಪರಿಕರದ ಶೇಕಡ 50 ರಷ್ಟು ಬೆಲೆ ( ಸಾಗಾಣಿಕೆ ವೆಚ್ಚವೂ ಸೇರಿ) ಪ್ರತ ಹೆಕ್ಟೇರಿಗೆ ಗರಿಷ್ಠ ರೂ. 750/- ಗಳ ಸಹಾಯಧನವನ್ನು ಒದಗಿಸಲಾಗುವುದು. ಈಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ 10 ಹೆ ವಿಸ್ತೀರ್ಣ ಸಾಧ್ಯವಾದ ಮಟ್ಟಿಗೆ ಒಂದೇ ತಾಕಿನಲ್ಲಿ ಬರುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

### 2. ರೈಜೋಬಿಯಂ ಜೀವಾಣು ಹಾಗೂ ಪಿ,ಎಸ್.ಬಿ.ಸರಬರಾಜು

ನೆಲಗಡಲೆ ಮತ್ತು ಸೋಯಾ ಅವರೆಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ರೈಜೋಬಿಯಂ ಹಾಗೂ ಎಣ್ಣೆಕಾಳು ಬೆಳೆಗಳಿಗೆ ಪಿ,ಎಸ್.ಬಿ ಜೀವಾಣುಗಳು ಅಗ್ಗದ ಪರಿಕರವಾಗುತ್ತದೆ. ರೈಜೋಬಿಯಂ ವಾತಾವರಣದಲ್ಲಿರುವ ಸಾರಜನಕವನ್ನು ಹಾಗೂ ಪಿ,ಎಸ್.ಬಿ ಜೀವಾಣು ಭೂಮಿಯಲ್ಲಿರುವ ರಂಜಕವನ್ನು ಕರಗದ ಸ್ಥಿತಿಯಿಂದ ಕರಗುವ ಸ್ಥಿತಿಗೆ ತರಲು ಸಹಾಯ ಮಾಡುತ್ತದೆ. ಇದರಿಂದ ಇಳುವರಿ ಸಹ ಹೆಚ್ಚುತ್ತದೆ. ಈ ಜೀವಾಣುಗಳಿಗೆ ಶೇ 50ರ ಬೆಲೆಯ ಅಥವಾ ಹೆಕ್ಟೇರ್ ಒಂದಕ್ಕೆ ಗರಿಷ್ಠ 300/- ರೂ. ಗಳ ಸಹಾಯಧನವನ್ನು ನೀಡಿ ವಿತರಿಸುವುದು.

### 3. ರಾಸಾಯನಿಕ ಪೀಡೆನಾಶಕ / ಲಘುಪೋಷಕಾಂಶಗಳ ಸರಬರಾಜು.

ರಾಸಾಯನಿಕ ಪೀಡೆನಾಶಕ/ ಶೀಲಿಂದ್ರ ನಾಶಕ /ಬಯೋ(ಜೈವಿಕ) ಪೆಸ್ಟಿಸೈಡ್/ಬಯೋಏಜೆಂಟ್ಸ್/ ಕಳೆನಾಶಕ/ ಲಘುಪೋಶಕಾಂಶಗಳ ಸರಬರಾಜು ಔಷಧಿಗಳನ್ನು ಸರಬರಾಜು ಮಾಡಲು ಶೇ 50ರ ಸಹಾಯಧನದಲ್ಲಿ ರೆ. ಗೆ ಗರಿಷ್ಠ ರೂ. 500/- ಗಳನ್ನು ಮೀರದಂತೆ ಸಹಾಯಧನವನ್ನು ಕಲ್ಪಿಸಲಾಗಿದೆ.

### 4. ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳ ಸರಬರಾಜು

ಎಲ್ಲಾ ಎಣ್ಣೆಕಾಳು ಬೆಳೆಗಳಿಗೆ ಕೀಟ ರೋಗ ಬಾಧೆಯ ರಕ್ಷಣೆಗಾಗಿ ಸಕಾಲದಲ್ಲಿ ಸಿಂಪರಣಾ ಕಾರ್ಯಕ್ರಮ ತೆಗೆದುಕೊಳ್ಳಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

## IV.ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳು

1. **ಕೈಚಾಲಿತ ಉಪಕರಣ:** ರೈತರಿಗೆ ಪ್ರತೀ ಕೈಚಾಲಿತ ಉಪಕರಣದ ಶೇ 40 ರ ದರ ಅಥವಾ ಗರಿಷ್ಠ ರೂ. 600/- ಗಳು ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು. (ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಢ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ 10 ರ ಸಹಾಯಧನ ಅಥವಾ ಗರಿಷ್ಠ ರೂ. 750/- ಗಳು)
2. **ಶಕ್ತಿಚಾಲಿತ ಉಪಕರಣ: ರೈತರಿಗೆ ಪ್ರತಿ ನ್ಯಾಪ್ಸ್ಯಾಕ್ & ತೈವಾನ್ ಶಕ್ತಿ ಚಾಲಿತ (16 ಲೀಟರ್ ಸಾಮರ್ಥ್ಯಕ್ಕಿಂತ ಕಡಿಮೆ) ಉಪಕರಣದ ಶೇ 40 ರ ದರ ಅಥವಾ ಗರಿಷ್ಠ ರೂ. 3000/- ಗಳು** ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು. (ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಢ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ 10 ರ ಸಹಾಯಧನ ಅಥವಾ ಗರಿಷ್ಠ ರೂ. 3800/- ಗಳು)

## V. ಸುಧಾರಿತ ಕೃಷಿ ಉಪಕರಣಗಳ ಸರಬರಾಜು:

ಡೀಸೆಲ್ ಪಂಪ್ ಸೆಟ್ ಹಾಗೂ ಸಣ್ಣ ಪ್ರಮಾಣದ ಎಣ್ಣೆಗಾಣವನ್ನು (0.5 ಹೆಚ್.ಪಿ ಇಂದ 2 ಹೆಚ್.ಪಿ ವರೆಗೆ) ಶೇ 50 ರ ರಿಯಾಯಿತಿ ದರದಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

**ಕೃಷಿ ಯಂತ್ರೋಪಕರಣಗಳು ಸಸ್ಯ ಸಂರಕ್ಷಣಾ ಉಪಕರಣಗಳ ಫಲಾನುಭವಿಗಳನ್ನು ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ – ಎಣ್ಣೆ ಕಾಳು ಯೋಜನೆಯಡಿ ಆಯ್ಕೆ ಮಾಡುವಲ್ಲಿ ಅನುಸರಿಸಿರುವ ಮಾನದಂಡಗಳು**

**ರೈತರನ್ನು ಆಯ್ಕೆ ಮಾಡುವಲ್ಲಿ ಈ ಕೆಳಕಂಡ ಮಾನ ದಂಡಗಳನ್ನು ಅನುಸರಿಸುವುದು**

1. 2020-21 ನೇ ಸಾಲಿನ ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ / ವಿತರಕರಿಂದ ಖರೀದಿಸಿದ ಮಾದರಿಗಳು ಮಾತ್ರ ಸಹಾಯಧನ ಪಡೆಯಲು ಅರ್ಹರಾಗಿರುತ್ತವೆ.
2. ರೈತರು ಸಹಾಯಧನದಡಿ ಸವಲತ್ತನ್ನು ಪಡೆಯಲು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಪಹಣಿ/ಹಿಡುವಳಿ ಪತ್ರ, ಜಾತಿ ಪ್ರಮಾಣ ಪತ್ರ) ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ಸ್ವೀಕೃತಿ ಪತ್ರ ನೀಡುವುದು.
3. ರೈತ ಸಂಪರ್ಕ ಕೇಂದ್ರದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳ ವಿವರಗಳನ್ನು ಜೇಷ್ಠತೆಯಲ್ಲಿ ಪ್ರತ್ಯೇಕ ವಹಿಯಲ್ಲಿ ದಾಖಳಿಸುವುದು.
4. ರೈತರುರೈತ ಸಂಪರ್ಕ ಕೇಂದ್ರಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ನಂತರ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.
5. ಸಹಾಯಕ ಕೃಷಿ ನಿರ್ದೇಶಕರು, ರೈತರು ಇಚ್ಚಿಸಿದ ುಪಕರಣ ಪಡೆಯಲು (ಇಲಾಖೆಯಲ್ಲಿ ಅನುಮೋದಿಸಿರುವ ಪಟ್ಟಿಯಲ್ಲಿ ಇರುವಂತೆ) ನಿಗದಿಪಡಿಸಿರುವ ಕಾರ್ಯಕ್ರಮದನ್ವಯ ಹಾಗೂ ಅನುದಾನದ ಲಭ್ಯತೆ ಮತ್ತು ಜೇಷ್ಠತೆ ಆಧಾರದ ಮೇಲೆ ಅರ್ಹ ಫಲಾನಮುಭವಿಯನ್ನು ಆಯ್ಕೆ ಮಾಡುವುದು.

## ಅನುಬಂಧ-1

### ಎನ್.ಎಫ್.ಎಸ್.ಎಂ(ಎಣ್ಣೆಕಾಳು) ಯೋಜನೆಯ ವಿವಿಧ ಬೆಳೆಗಳಲ್ಲಿ ಗುಚ್ಛ ಪ್ರಾತ್ಯಕ್ಷಿಕೆಗಳು: ಚಟುವಟಿಕೆಗಳು ಮತ್ತು ವೆಚ್ಚ.

1. **ನೆಲಗಡಲೆ ಪ್ರಾತ್ಯಕ್ಷಿಕೆ :**
**(ಶೇ.50%** ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ **ರೂ.10000/-)**

| ಕ್ರ.ಸಂ | ಪರಿಕರಗಳು | ಸಹಾಯಧನದಮೊತ್ತ |
|---|---|---|
| 1. | ಬಿತ್ತನೆ ಬೀಜ(110 ಕೆ.ಜಿ) ರೂ.50/ಕೆ.ಜಿ | 5500.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ | 200.00 |
| 4. | ಲಘು ಪೋಷಕಾಂಶ /ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 1000.00 |
| 5. | ಸಸ್ಯ ಸಂರಕ್ಷಣಾ ಔಷಧಿ | 1800.00 |
| 6. | ವಿಜ್ಞಾನಿಗಳ ಭೇಟಿ | 300.00 |
| 7. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ | 1000.00 |
| | **ಒಟ್ಟು** | **10000.00** |

2.**ಸೋಯಾಅವರೆ ಪ್ರಾತ್ಯಕ್ಷಿಕೆ :** (**ಶೇ**.50% **ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿಹೆಕ್ಟೇರಿಗೆ ರೂ**.6000/-)

| ಕ್ರ.ಸಂ | ಪರಿಕರಗಳು | ಸಹಾಯಧನದಮೊತ್ತ |
|---|---|---|
| 1. | ಬಿತ್ತನೆ ಬೀಜ(60 ಕೆ.ಜಿ-ರೂ.35/ಕೆ.ಜಿ) | 2100.00 |
| 2. | ಬೀಜೋಪಚಾರ ಔಷಧಿ | 100.00 |
| 3. | ಜೀವಾಣು/ಜೈವಿಕ ಗೊಬ್ಬಯ | 1000.00 |
| 4. | ಲಘು ಪೋಷಕಾಂಶ | 600.00 |
| 5. | ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 3500.00 |
| 6. | ಸಸ್ಯ ಸಂರಕ್ಷಣಾ ಔಷಧಿ | 1000.00 |
| 7. | ವಿಜ್ಞಾನಿಗಳ ಭೇಟಿ | 250.00 |
| 8. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ | |
| | **ಒಟ್ಟು** | **6000.00** |

**3.ಸೂರ್ಯಕಾಂತಿ ಪ್ರಾತ್ಯಕ್ಷಿಕೆ:(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿಹೆಕ್ಟೇರಿಗೆ ರೂ.4000/-)**

| **ಕ್ರ.ಸಂ** | **ಪರಿಕರಗಳು** | **ಸಹಾಯಧನದ ಮೊತ್ತ** |
|---|---|---|
| 1. | ಬಿತ್ತನೆ ಬೀಜ(4 ಕೆ.ಜಿ-ರೂ.220/ಕೆ.ಜಿ) | 880.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೊಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 1020.00 |
| 4. | ಎಲೆ ಮೇಲೆ ಸಿಂಪಡಿಸುವ ಪೋಷಕಾಂಶಗಳು | 500.00 |
| 5. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 1000.00 |
| 6. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 400.00 |
| | **ಒಟ್ಟು** | **4000.00** |
| 7 | ಪರಗಾಸ್ಪರ್ಶಕ್ಕಾಗಿ ಜೇನು ಪೆಟ್ಟಿಗೆ ಇಟ್ಟಲ್ಲಿ ರೂ.2000/- ಪ್ರತಿ ಹೆ.ಗೆ ಪ್ರತ್ಯೇಕ ವಾಗಿ ನೀಡಲಾಗುವುದು | |

**4.ಎಳ್ಳು ಪ್ರಾತ್ಯಕ್ಷಿಕೆ: (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿಹೆಕ್ಟೇರಿಗೆ ರೂ.3000/-)**

| **ಕ್ರ.ಸಂ** | **ಪರಿಕರಗಳು** | **ಸಹಾಯಧನದ ಮೊತ್ತ** |
|---|---|---|
| 1. | ಬಿತ್ತನೆ ಬೀಜ(1-1.5 ಕೆ.ಜಿ-ರೂ.330/ಕೆ.ಜಿ) | 600.00 |
| 2. | ಜೀವಾಣು/ಜೈವಿಕ ಗೊಬ್ಬರ /ಲಘು ಪೊಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 1000.00 |
| 3. | ಬೀಜೋಪಚಾರ ಔಷಧಿ / ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 1100.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 300.00 |
| | **ಒಟ್ಟು** | **3000.00** |

**5.ಗುರೆಳ್ಳು ಪ್ರಾತ್ಯಕ್ಷಿಕೆ:** (**ಶೇ**.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ **ರೂ**.3000/-)

| **ಕ್ರ.ಸಂ** | **ಪರಿಕರಗಳು** | **ಸಹಾಯಧನದ ಮೊತ್ತ** |
|---|---|---|
| 1. | ಬಿತ್ತನೆ ಬೀಜ(25 ಕೆ.ಜಿ-ರೂ.50/ಕೆ.ಜಿ) | 1250.00 |

| | | |
|---|---|---|
| 2. | ಜೀವಾಣು/ಜೈವಿಕ ಗೊಬ್ಬರ /ಲಘು ಪೊಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 750.00 |
| 3. | ಬೀಜೋಪಚಾರ ಔಷಧಿ / ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 750.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 250.00 |
| | **ಒಟ್ಟು** | **3000.00** |

6.**ಹರಳು ಪ್ರಾತ್ಯಕ್ಷಿಕೆ:** (**ಶೇ**.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ **ರೂ**.3000/-)

| **ಕ್ರ.ಸಂ** | **ಪರಿಕರಗಳು** | **ಸಹಾಯಧನದ ಮೊತ್ತ** |
|---|---|---|
| 1. | ಬಿತ್ತನೆ ಬೀಜ(10-12ಕೆ.ಜಿ-ರೂ.100/ಕೆ.ಜಿ) | 1200.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೊಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 500.00 |
| 4. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 750.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 350.00 |
| | **ಒಟ್ಟು** | **3000.00** |

III. **ಅಗಸೆ ಪ್ರಾತ್ಯಕ್ಷಿಕೆ:** (**ಶೇ**.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ **ರೂ**.3000/-)

| **ಕ್ರ.ಸಂ** | **ಪರಿಕರಗಳು** | **ಸಹಾಯಧನದ ಮೊತ್ತ** |
|---|---|---|
| 1. | ಬಿತ್ತನೆ ಬೀಜ(20-25 ಕೆ.ಜಿ-ರೂ.75/ಕೆ.ಜಿ) | 1500.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೊಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 500.00 |
| 4. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 500.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 300.00 |
| | **ಒಟ್ಟು** | **3000.00** |

IV. **ಕುಸುಬೆ ಪ್ರಾತ್ಯಕ್ಷಿಕೆ:** (**ಶೇ**.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ **ರೂ**.3000/-)

| **ಕ್ರ.ಸಂ** | **ಪರಿಕರಗಳು** | **ಸಹಾಯಧನದ ಮೊತ್ತ** |
|---|---|---|
| 1. | ಬಿತ್ತನೆ ಬೀಜ10-15 ಕೆ.ಜಿ-ರೂ.65/ಕೆ.ಜಿ) | 975.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೊಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 750.00 |
| 4. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 750.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 325.00 |
| | **ಒಟ್ಟು** | **3000.00** |

## III. <u>ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎನ್.ಎಫ್.ಎಸ್.ಎಂ -ವಾಣಿಜ್ಯ ಬೆಳೆಗಳ ಮಾರ್ಗಸೂಚಿಗಳು</u>

2020-21ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ ವಾಣಿಜ್ಯ ಬೆಳೆಗಳು- ಹತ್ತಿ ಕಾರ್ಯಕ್ರಮವನ್ನು ರೂ.137.06 ಲಕ್ಷಗಳ ಅನುದಾನದೊಂದಿಗೆ ರಾಜ್ಯದ 7 ಮುಖ್ಯ ಜಿಲ್ಲೆಗಳಾದ ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರ್ಗಿ, ಹಾವೇರಿ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

**<u>ಎನ್.ಎಫ್.ಎಸ್.ಎಂ - ವಾಣಿಜ್ಯ ಬೆಳೆಗಳ ಕಾರ್ಯಕ್ರಮದ ಪ್ರಮುಖ ಉದ್ದೇಶಗಳು:</u>**

1) ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ವಾಣಿಜ್ಯ ಬೆಳೆಗಳು (ಹತ್ತಿ & ಕಬ್ಬು) ಕ್ಷೇತ್ರ ವಿಸ್ತೀರ್ಣ, ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚು ಮಾಡುವುದು.
2) ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
3) ಕ್ಷೇತ್ರ ಮಟ್ಟದಲ್ಲಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದು.

## <u>ಹತ್ತಿ (Cotton ):</u>

**<u>ಯೋಜನೆಯ ಪ್ರಮುಖ ಘಟಕಗಳು:</u>**

**1.ಪ್ರಾತ್ಯಕ್ಷಿಕೆಗಳು**

ಅ.ಸಮಗ್ರ ಬೆಳೆ ನಿರ್ವಹಣಾ ಬಗೆಗಿನ ಮುಂಚೂಣಿ ಪ್ರಾತ್ಯಕ್ಷಿಕೆಗಳು

ಆ.ಅಂತರ ಬೆಳೆಗಳ ಮೇಲಿನ ಮುಂಚೂಣಿ ಪ್ರಾತ್ಯಕ್ಷಿಕೆಗಳು

ಇ.ಹತ್ತಿ ದೇಸಿ ತಳಿ & ಅತಿ ಉದ್ದ ಎಳೆಗಳ ತಳಿ ಬಳಕೆ ಪ್ರಾತ್ಯಕ್ಷಿಕೆಗಳು

**2.ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ ಮತ್ತು ಜೈವಿಕ ನಿಯಂತ್ರಣ ಕಾರಕಗಳ ವಿತರಣೆ**

**3.ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ**

**4. ಎಲೆ ಬಣ್ಣದ ಚಾರ್ಟ್( Leaf colour chart) ವಿತರಣೆ**

**<u>1.ಪ್ರಾತ್ಯಕ್ಷಿಕೆಗಳು</u>**

ಈ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 10 ಹೆ. ವಿಸೀರ್ಣದ ಗುಚ್ಛ ತಾಕುಗಳಲ್ಲಿ ಕೈಗೊಳ್ಳುವುದು ಹಾಗೂ ಪ್ರಾತ್ಯಕ್ಷಿಕೆಗಳಲ್ಲಿ ಒಬ್ಬ ರೈತರ ಕನಿಷ್ಠ 0.4 ಹೆ. ವಿಸ್ತೀರ್ಣವಿರುವಂತೆ ಗಮನ ನೀಡುವುದು.ವಿವಿಧ ರೀತಿಯ ಮುಂಚೂಣಿ ಪ್ರಾತ್ಯಕ್ಷಿಕೆಗಳಿಗೆ ನೀಡುವ ಆರ್ಥಿಕ ನೆರವು ಈ ಕೆಳಕಂಡಂತಿರುತ್ತದೆ.

**<u>ಅ. ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣಾ ಮುಂಚೂಣಿ ಪ್ರಾತ್ಯಕ್ಷಿಕೆಗಳು (Front line Demonstrations)</u>**

(ಪ್ರತಿ ಹೆ.ಗೆ. –ರೂಗಳಲ್ಲಿ)

| ಕ್ರ.ಸಂ | ವಿವರ | ವೆಚ್ಚ |
|---|---|---|
| 1 | ಬಿತ್ತನೆ ಬೀಜ(ಬಿ.ಟಿ.ಯೇತರ) | 1500.00 |
| 2 | ಸಾವಯವ ಗೊಬ್ಬರ | 1500.00 |
| 3 | ಲಘು ಪೋಷಕಾಂಶಗಳು | 1250.00 |
| 4 | ಜೈವಿಕ ಗೊಬ್ಬರಗಳು | 1000.00 |
| 5 | ಜೈವಿಕ ಪೀಡೆನಾಶಕಗಳು | 1500.00 |
| 6 | ಕ್ಷೇತ್ರೋತ್ಸವ | 1000.00 |
| 7. | ಪ್ರಚಾರ ಸಾಮಗ್ರಿ | 250.00 |
| | **ಒಟ್ಟು** | **8000.00** |

**<u>ಆ. ಅಂತರ ಬೆಳೆಗಳ ಬಗೆಗಿನ ಮುಂಚೂಣಿ ಪ್ರಾತ್ಯಕ್ಷಿಕೆಗಳು</u>**

| ಕ್ರ.ಸಂ | ವಿವರ | ವೆಚ್ಚ |
|---|---|---|
| 1 | ಬಿತ್ತನೆ ಬೀಜ(ಬಿ.ಟಿ.ಯೇತರ) | 1500.00 |
| 2 | ಸಾವಯವ ಗೊಬ್ಬರ | 1500.00 |
| 3 | ಲಘು ಪೋಷಕಾಂಶಗಳು | 1250.00 |
| 4 | ಜೈವಿಕ ಗೊಬ್ಬರಗಳು | 1000.00 |
| 5 | ಜೈವಿಕ ಪೀಡೆನಾಶಕಗಳು | 1500.00 |
| 6 | ಕ್ಷೇತ್ರೋತ್ಸವ | 1000.00 |
| 7 | ಪ್ರಚಾರ ಸಾಮಗ್ರಿ | 250.00 |
| | **ಒಟ್ಟು** | **8000.00** |

**ಇ. ಹತ್ತಿ ದೇಸಿ ತಳಿ & ಅತಿ ಉದ್ದ ಎಳೆಗಳ ತಳಿ ಬಳಕೆ ಪ್ರಾತ್ಯಕ್ಷಿಕೆಗಳು**

| ಕ್ರ.ಸಂ | ವಿವರ | ವೆಚ್ಚ |
|---|---|---|
| 1 | ಬಿತ್ತನೆ ಬೀಜ(ಬಿ.ಟಿ.ಯೇತರ) | 1250.00 |
| 2 | ಸಾವಯವ ಗೊಬ್ಬರ | 1000.00 |
| 3 | ಲಘು ಪೋಷಕಾಂಶಗಳು | 1000.00 |
| 4 | ಜೈವಿಕ ಗೊಬ್ಬರಗಳು | 1000.00 |
| 5 | ಜೈವಿಕ ಪೀಡೆನಾಶಕಗಳು | 2250.00 |
| 6 | ಕ್ಷೇತ್ರೋತ್ಸವ | 1000.00 |
| 7 | ಪ್ರಚಾರ ಸಾಮಗ್ರಿ | 1500.00 |
| | ಒಟ್ಟು | 9000.00 |

**2). ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ ಮತ್ತು ಜೈವಿಕ ನಿಯಂತ್ರಣ ಕಾರಕಗಳ ವಿತರಣೆ**

ರೂ.500/ಹೆ ರಂತೆ ಅಥವಾ ಒಟ್ಟು ವೆಚ್ಚದ ಮೇಲೆ 50%ಯಾವುದು ಕಡಿಮೆಯೋ ಅದು.

**3. ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ:**

ಪ್ರತಿ ಜಿಲ್ಲೆಗೆ ಒಂದರಂತೆ ಪ್ರತಿ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ವಿಸ್ತರಣಾಧಿಕಾರಿಗಳಿಗೆ, ಕೃಷಿ ಪರಿಕರ ಮಾರಾಟಗಾರರಿಗೆ, ಹತ್ತಿ ಬೆಳೆಯ ಪ್ರಗತಿಪರ ರೈತರಿಗೆ ಎರಡು ದಿನದ ತರಬೇತಿಯನ್ನು ಆಯೋಜಿಸುವುದು.ಕನಿಷ್ಟ 50 ರಷ್ಟು ಇಲಾಖೆಯ ವಿಸ್ತರಣಾಧಿಕಾರಿಗಳು ಇರುವಂತೆ ನೋಡಿಕೊಳ್ಳುವುದು

(ಒಟ್ಟು 50 ಜನ). (ಆರ್ಥಿಕ: ರೂಗಳಲ್ಲಿ)

| ಕ್ರ.ಸಂ | ವಿವರ | ವೆಚ್ಚ |
|---|---|---|
| 1 | ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ (ರೂ.500/- 10 ಸಂಪನ್ಮೂಲ ವ್ಯಕ್ತಿಗಳಿಗೆ) | 5000.00 |
| 2 | ಲೇಖನ ಸಾಮಾಗ್ರಿ/ಸ್ಥಳ/ದೃಶ್ಯ ಶ್ರವಣಸಾಧನಗಳು ಇತ್ಯಾದಿ | 4500.00 |
| 3 | ವಾಸ್ತವ್ಯ ಮತ್ತು ಉಟೋಪಚಾರ ವೆಚ್ಚ (ರೂ.500/- ರಂತೆ ಪ್ರತಿ ರೈತರಿಗೆ) | 20000.00 |
| 4 | ತರಬೇತಿ ಕೀಟ್ (including publication) (ರೂ.400/- ರಂತೆ ಪ್ರತಿ ರೈತರಿಗೆ) | 8000.00 |
| 5 | ಉದ್ಘಾಟನಾ ಕಾರ್ಯಕ್ರಮ (ರೂ.50/- ರಂತೆ ಪ್ರತಿ ರೈತರಿಗೆ) | 2500.00 |
| | ಒಟ್ಟು | 40000.00 |

**4. ಲೀಫ್ ಕಲರ್ ಚಾರ್ಟ್ ವಿತರಣೆ:** ಹತ್ತಿ ಬೆಳೆಯಲ್ಲಿ ಸಾರಜನಕ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮಾಡಲು ಲಿಫ್ ಕಲರ್ ಚಾರ್ಟ್ ಒಂದು ಉತ್ತಮ ವಿಧಾನವಾಗಿರುತ್ತದೆ. ಈ ಚಾರ್ಟ್‌ಗಳನ್ನು ಉಪಯೋಗಿಸಿ ಎಲೆ ಬಣ್ಣದ ಆದಾರದ

ಮೇಲೆ ಸಾರಜನಕದ ಅವಶ್ಯಕತೆಯನ್ನು ನಿರ್ಧರಿಸಬಹುದು. ಎಲೆ ಬಣ್ಣದ ಚಾರ್ಟ್ನಲ್ಲಿ 6 ಬಣ್ಣಗಳ ವಿಭಾಗಗಳಿದ್ದು ಈ ಬಣ್ಣಗಳನ್ನು ಹತ್ತಿ ಎಲೆ ಬಣ್ಣಕ್ಕೆ ಹೋಲಿಕೆ ಮಾಡಿ ಪ್ರತಿ ಎಕರೆಗೆ ನಿಗದಿತ ಸಾರಜನಕದ ಪ್ರಮಾಣವನ್ನು ಉಪಯೋಗಿಸಬಹುದು ಘಟಕ ವೆಚ್ಚ:_ರೂ.100/ಪ್ರತಿ ಒಂದಕ್ಕೆ ಅಥವಾ ಒಟ್ಟು ವೆಚ್ಚದ ಮೇಲೆ 50%ಯಾವುದು ಕಡಿಮೆಯೋ ಅದು.

ವಾಣಿಜ್ಯ ಬೆಳೆಗಳು- ಹತ್ತಿ ಕಾರ್ಯಕ್ರಮದ ಘಟಕವಾರು ಕ್ರಿಯಾಯೋಜನೆಯನ್ನು ಅನುಭಂದ 1 & 1(ಅ) ನಲ್ಲಿ ನೀಡಲಾಗಿದೆ.

## <u>ಕಬ್ಬು (Sugarcane):</u>

2020-21 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ – ವಾಣಿಜ್ಯ ಬೆಳೆಗಳು-ಕಬ್ಬು ಕಾರ್ಯಕ್ರಮವನ್ನು ರೂ.75.46 ಲಕ್ಷಗಳ ಅನುದಾನದೊಂದಿಗೆ ರಾಜ್ಯದ 6 ಮುಖ್ಯ ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬೀದರ್, ದಾವಣಗೆರೆ, ಕಲಬುರ್ಗಿ, ಮಂಡ್ಯ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

### <u>ಯೋಜನೆಯ ಪ್ರಮುಖ ಘಟಕಗಳು:</u>

1.ಕಬ್ಬಿನ ಬೆಳೆಯಲ್ಲಿ ಅಂತರ ಬೆಳೆಗಳ ಬಗೆಗಿನ ಮುಂಚೂಣಿ ಪ್ರಾತ್ಯಕ್ಷಿಕೆಗಳು/ಒಂದು ಕಣ್ಣಿನ ನಾಟಿ ತಾಂತ್ರಿಕತೆಯ ಬಗೆಗಿನ ಪ್ರಾತ್ಯಕ್ಷಿಕೆಗಳು

2.ಅಂಗಾಂಶ ಕೃಷಿ ಬಿತ್ತನೆ ಬೀಜಗಳಿಗೆ ಸಹಾಯಧನ

3. ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ ಮತ್ತು ಜೈವಿಕ ನಿಯಂತ್ರಣ ಕಾರಕಗಳ ವಿತರಣೆ

4.ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ

### <u>1</u>. ಕಬ್ಬು ಬೆಳೆಯಲ್ಲಿ ಅಂತರ ಬೆಳೆ ಪ್ರಾತ್ಯಕ್ಷಿಕೆ ಮತ್ತು ಒಂದು ಕಣ್ಣಿನ ತಾಂತ್ರಿಕತೆ (Demonstration on Inter Cropping and single bud chip technology):

ಕಬ್ಬು ಬೆಳೆಯಲ್ಲಿ ಏಕದಳ, ದ್ವಿದಳ ಮತ್ತು ಎಣ್ಣೆಕಾಳು ಬೆಳೆಗಳನ್ನು ಅಂತರ ಬೆಳೆಗಳಾಗಿ ಬೆಳೆಯುವ ಪ್ರಾತ್ಯಕ್ಷಿಕೆಗಳನ್ನು ಕೃಷಿ ಇಲಾಖೆ, ಸಕ್ಕರೆ ಕಾರ್ಖಾನೆಗಳು ಮತ್ತು ಕಬ್ಬು ಸಂಶೋಧನಾ ಸಂಸ್ಥೆಗಳು, ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಕೃಷಿ ವಿಶ್ವ ವಿದ್ಯಾನಿಲಯ, ICAR sಸಕ್ಕರೆ ಸಂಸ್ಥೆಗಳು ಶಿಫಾರಸ್ಸು ಮಾಡಿದ ತಂತ್ರಜ್ಞಾನಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲಾಗುವುದು.ಪ್ರತಿ ಹೆ.ಗೆ ರೂ.9000/- ಆರ್ಥಿಕ ನೆರವು ಒದಗಿಸಲಾಗುವುದು.ಈ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 10 ಹೆ. ವಿಸ್ತೀರ್ಣದ ಗುಚ್ಛ ತಾಕುಗಳಲ್ಲಿ ಕೈಗೊಳ್ಳುವುದು. ಪ್ರಾತ್ಯಕ್ಷಿಕೆಗಳಲ್ಲಿ ಒಬ್ಬ ರೈತರ ಕನಿಷ್ಠ 0.4 ಹೆ. ವಿಸ್ತೀರ್ಣವಿರುವಂತೆ ಗಮನ ನೀಡುವುದು. ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆ ಒಂದು ಕಣ್ಣಿನ ಕಬ್ಬಿನ ತುಂಡು ಬಿತ್ತನೆಯ ಪ್ರಾತ್ಯಕ್ಷಿಕೆಗಳನ್ನು ಪ್ರತಿ ಹೆ.ಗೆ ರೂ.9000/- ಆರ್ಥಿಕ ನೆರವಿನೊಂದಿಗೆ ಕೈಗೊಳ್ಳುವುದು.

ಪ್ರಾತ್ಯಕ್ಷಿಕೆಯ ವೆಚ್ಚದ ಹಂಚಿಕೆ ಈ ಕೆಳಕಂಡಂತಿರುತ್ತದೆ (ಪ್ರತಿ ಹೆಕ್ಟೇರಿಗೆ)

| ಕ್ರ.ಸಂ | ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಏಕದಳ/ದ್ವಿದಳ/ಎಣ್ಣೆಕಾಳು ಬಿತ್ತನೆ ಬೀಜ | 1500.00 |
| 2. | ಸಾವಯವ ಗೊಬ್ಬರ | 1250.00 |
| 3. | ಲಘು ಪೋಷಕಾಂಶಗಳು | 1500.00 |
| 4. | ಜೈವಿಕ ಗೊಬ್ಬರಗಳು | 2500.00 |
| 5. | ಜೈವಿಕ ಪೀಡೆನಾಶಕಗಳು | 1000.00 |
| 6. | ಕ್ಷೇತ್ರೋತ್ಸವ | 1000.00 |
| 7. | ಪ್ರಚಾರ ಸಾಮಗ್ರಿ | 250.00 |
| | **ಒಟ್ಟು** | **9000.00** |

**2.ಅಂಗಾಂಶ ಕೃಷಿ ಬಿತ್ತನೆ ಬೀಜಗಳಿಗೆ ಸಹಾಯಧನ:**

ಕಬ್ಬು ಬೆಳೆಯಲ್ಲಿ ಅಂಗಾಂಶ ಕೃಷಿ ಬಿತ್ತನೆಬೀಜಗಳ ಬಳಕೆ/ಶೀಘ್ರ ಬೆಳೆಯುವ ಮತ್ತು ಕಡಿಮೆ ವೆಚ್ಚದ ತಾಂತ್ರಿಕತೆಯಾಗಿದ್ದು ಐ.ಸಿ.ಎ.ಆರ್ ಸಂಸ್ಥೆಗಳಿಗೆ/ಕಬ್ಬು ಸಂಶೋಧನಾ ಕೇಂದ್ರಗಳಿಗೆ ಪ್ರತಿ ಸಸಿಗೆ ರೂ.3.50 ಗಳಂತೆ ಸಹಾಯದನ ನೀಡುವುದು.

**3. ಸಸ್ಯ ಸಂರಕ್ಷಣಾ ಔಷಧಿಗಳ ವಿತರಣೆ ಮತ್ತು ಜೈವಿಕ ನಿಯಂತ್ರಣ ಕಾರಕಗಳ ವಿತರಣೆ**

ರೂ.500/ಹೆ ರಂತೆ ಅಥವಾ ಒಟ್ಟು ವೆಚ್ಚದ ಮೇಲೆ 50%, ಯಾವುದು ಕಡಿಮೆಯೋ ಅದು.

**4.ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ:**

ಪ್ರತಿ ಜಿಲ್ಲೆಗೆ ಒಂದರಂತೆ ಪ್ರತಿ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ವಿಸ್ತರಣಾಧಿಕಾರಿಗಳಿಗೆ, ಕೃಷಿ ಪರಿಕರ ಮಾರಾಟಗಾರರಿಗೆ, ಹತ್ತಿ ಬೆಳೆಯ ಪ್ರಗತಿಪರ ರೈತರಿಗೆ ಎರಡು ದಿನದ ತರಬೇತಿಯನ್ನು ಆಯೋಜಿಸುವುದು.ಕನಿಷ್ಟ 50ರಷ್ಟು ಇಲಾಖೆಯ ವಿಸ್ತರಣಾಧಿಕಾರಿಗಳು ಇರುವಂತೆ ನೋಡಿಕೊಳ್ಳುವುದು (ಒಟ್ಟು 50 ಜನ).

(ಆರ್ಥಿಕ: ರೂಗಳಲ್ಲಿ)

| ಕ್ರ.ಸಂ | ವಿವರ | ವೆಚ್ಚ |
|---|---|---|
| 1 | ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ (ರೂ.500/- 10 ಸಂಪನ್ಮೂಲ ವ್ಯಕ್ತಿಗಳಿಗೆ) | 5000.00 |
| 2 | ಲೇಖನ ಸಾಮಾಗ್ರಿ/ಸ್ಥಳ/ದೃಶ್ಯ ಶ್ರವಣಸಾಧನಗಳು ಇತ್ಯಾದಿ | 4500.00 |
| 3 | ವಾಸ್ತವ್ಯ ಮತ್ತು ಉಟೋಪಚಾರ ವೆಚ್ಚ(ರೂ.500/- ರಂತೆ ಪ್ರತಿ ರೈತರಿಗೆ) | 20000.00 |
| 4 | ತರಬೇತಿ ಕೀಟ್ (including publication) (ರೂ.400/- ರಂತೆ | 8000.00 |

| | | |
|---|---|---|
| | ಪ್ರತಿ ರೈತರಿಗೆ) | |
| 5 | ಉದ್ಘಾಟನಾ ಕಾರ್ಯಕ್ರಮ(ರೂ.50/- ರಂತೆ ಪ್ರತಿ ರೈತರಿಗೆ) | 2500.00 |
| | ಒಟ್ಟು | 40000.00 |

ವಾಣಿಜ್ಯ ಬೆಳೆಗಳು-ಕಬ್ಬು ಕಾರ್ಯಕ್ರಮದ ಘಟಕವಾರು ಕ್ರಿಯಾಯೋಜನೆಯನ್ನು ಅನುಭಂದ 2 & 2 (ಅ) ನಲ್ಲಿ ನೀಡಲಾಗಿದೆ

******

## IV. ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿ 2020-2021
## ಲೆ.ಶಿ:- 2401-00-102-0-27 (ಉ.ಶಿ:-106,422,423)

ಮಳೆ ಆಶ್ರಿತ ರೈತರನ್ನು ಕೇಂದ್ರಿಕರಿಸಿ, ಮಳೆ ನೀರು ಸಂಗ್ರಹಣೆ ಮತ್ತು ಪುನರ್ ಬಳಕೆಗೆ ಆದ್ಯತೆ ನೀಡಿ ಕೃಷಿ ಭಾಗ್ಯ ಯೋಜನೆಯನ್ನು 2014-15 ನೇ ಸಾಲಿನಿಂದ ಜಾರಿಗೆ ತರಲಾಗಿದೆ. 2014-15 ರಿಂದ 2016-17 ನೇ ಸಾಲಿನವರೆಗೆ ಈ ಯೋಜನೆಯನ್ನು ವಾರ್ಷಿಕ ಸರಾಸರಿ ಮಳೆ ಪ್ರಮಾಣ 850 ಮಿ.ಮೀ ಗಿಂತ ಕಡಿಮೆ ಮಳೆ ಬೀಳುವ 25 ಜಿಲ್ಲೆಗಳ, 132 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. 2017-18 ನೇ ಸಾಲಿನಿಂದ ಯೋಜನೆಯನ್ನು ಅಚ್ಚು ಕಟ್ಟು ಪ್ರದೇಶವನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಲ್ಲಿ ವಿಸ್ತರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ಉದ್ದೇಶಗಳು**

ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಬಿದ್ದ ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ ಸಂದಿಗ್ದ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು.

**ಯೋಜನೆಯಡಿ ಒದಗಿಸಲಾಗಿರುವ ಸೌಲಭ್ಯಗಳ/ ಘಟಕಗಳ ವಿವರಗಳು:**

1. ನೀರು ಸಂಗ್ರಹಣಾ ರಚನೆ ( ಕೃಷಿ ಹೊಂಡ )
2. ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ ಪರ್ಯಾಯ ಮಾದರಿಗಳು
3. ಹೊಂಡದಿಂದ ನೀರು ಎತ್ತಲು ಡಿಸೇಲ್ ಪಂಪ್ಸೆಟ್
4. ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ (ಹನಿ/ತುಂತುರು)
5. ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (Shadenet)

**ಅನುಷ್ಠಾನ ಮಾರ್ಗಸೂಚಿಗಳು:**

2020-2021 ನೇ ಸಾಲಿಗೆ ಕೃಷಿ ಭಾಗ್ಯ ಯೋಜನೆಯಡಿ ಹೊಸದಾಗಿ ಯಾವುದೇ ಘಟಕಗಳನ್ನು ಅನುಷ್ಠಾನ ಮಾಡಲು ಅವಕಾಶವಿರುವುದಿಲ್ಲ. ಕಳೆದ ಸಾಲಿನಲ್ಲಿ ಯೋಜನೆಯ ಮಾರ್ಗಸೂಚಿಯನ್ವಯ ಈಗಾಗಲೇ ಅನುಷ್ಠಾನ ಮಾಡಿರುವ ಘಟಕಗಳಿಗೆ ಮಾತ್ರ ಬಾಕಿ ಸಹಾಯಧನ ಪಾವತಿಸಲು, ಪ್ರಸಕ್ತ ಸಾಲಿನಲ್ಲಿಅನುದಾನ ನಿಗದಿಪಡಿಸಲಾಗಿರುತ್ತದೆ.

## V. ಇತರೆ ಕೃಷಿ ಯೋಜನೆಗಳು ಲೆಕ್ಕ ಶೀರ್ಷಿಕೆ 2401–00–102–0–28

1. **ರೈತರ ಆತ್ಮಹತ್ಯೆ, (ಉ.ಶೀ 100): 2020-21ನೇ ಸಾಲಿಗೆ ರೈತರ ಆತ್ಮಹತ್ಯೆ, ಆಕಸ್ಮಿಕ ಮರಣ ಹಾಗೂ ಬಣವೆ ನಷ್ಟ ಕಾರ್ಯಕ್ರಮವನ್ನು ಕಂದಾಯ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ**

2. **ಆಕಸ್ಮಿಕ ಮರಣ ಹಾಗೂ ಬಣವೆ ನಷ್ಟ :2020-21ನೇ ಸಾಲಿಗೆ ರೈತರ ಆತ್ಮಹತ್ಯೆ, ಆಕಸ್ಮಿಕ ಮರಣ ಹಾಗೂ ಬಣವೆ ನಷ್ಟ ಕಾರ್ಯಕ್ರಮವನ್ನು ಕಂದಾಯ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ**

3. **ಬೆಳೆ ಸಾಲಕ್ಕೆ ಸಹಾಯಧನ ಲೆಕ್ಕ ಶೀರ್ಷಿಕೆ: 2401-00-102-028) ಉಪ ಶೀ: (059)**

ಈ ಯೋಜನೆಯು 2009-10ನೇ ಸಾಲಿನಿಂದ ಚಾಲ್ತಿಯಲ್ಲಿದೆ. ವಾಣಿಜ್ಯ ಬ್ಯಾಂಕುಗಳು ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿ ಅಲ್ಪಾವಧಿ ಸಾಲ ಪಡೆದ ರೈತರಿಗೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ (Sಐಃಅ) ಮೂಲಕ ಸಾಲದ ಮೊತ್ತ ರೂ.50,000/- ಮಿತಿಯೊಳಗಿನ ಬೆಳೆ ಸಾಲ/ಅಲ್ಪಾವದಿ ಕೃಷಿ ಸಾಲವನ್ನು ಬ್ಯಾಂಕ್ ನಿಗಧಿಪಡಿಸಿದ ಅವಧಿಯೊಳಗೆ ಪಾವತಿಸಿದ ರೈತರಿಗೆ ಶೇ.1 ರ ಬಡ್ಡಿ ರಿಯಾಯಿತಿ ನೀಡಲಾಗುವುದು. ಸರ್ಕಾರದ ಆದೇಶ ಸಂಖ್ಯೆ: ಎಜಿಡಿ/76/ಎಎಸ್‌ಸಿ/2012, ದಿನಾಂಕ: 16.08.2012 ರ ಅನ್ವಯ 2012-13ನೇ ಸಾಲಿನಿಂದ ಶೇ.1 ರ ಬಡ್ಡಿ ರಿಯಾಯಿತಿ ಮಿತಿಯನ್ನು ರೂ. 50,000/- ದಿಂದ ರೂ.1,00,000/- ದ ವರೆಗೆ ಹೆಚ್ಚಿಸಲಾಗಿದೆ ಮತ್ತು ಬೆಳ ಸಾಲದ ಮೊತ್ತವನ್ನೂ ಸಹ ರೂ.50000/- ದಿಂದ ರೂ.100000/- ದ ವರೆರಗೆ ಹೆಚ್ಚಿಸಲಾಗಿದೆ. ಎಸ್‌ಎಲ್‌ಬಿಸಿ ಸಂಸ್ಥೆಯು ಸಲ್ಲಿಸಿದ ಅನುದಾನದ ಬಿಲ್ಲುಗಳನ್ನು ಕೃಷಿ ನಿರ್ದೇಶಕರು ಮೇಲುಸಹಿ ಮಾಡಿ, ಖಜಾನೆಯಿಂದ ನಗದೀಕರಿಸಿ, ಬಡ್ಡಿ ರಿಯಾಯಿತಿ ನೀಡಲು ಎಸ್‌ಎಲ್‌ಬಿಸಿ ಸಂಸ್ಥೆಗೆ ಪಾವತಿಸಲಾಗುತ್ತದೆ.

ಸದರಿ ಕಾರ್ಯಕ್ರಮಕ್ಕಾಗಿ 2020-21 ನೇ ಸಾಲಿಗೆ ರೂ.628.00 ಲಕ್ಷ ಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗುವುದು.

# ಕರ್ನಾಟಕ ರಾಜ್ಯ ರೈತರ ಸಲಹಾ ಸಮಿತಿ

2018-19ನೇ ಸಾಲಿನ ಜುಲೈ ಆಯವ್ಯಯದ ಭಾಷಣದ ಕಂಡಿಕೆ 16ರಲ್ಲಿ ಹಿಂದಿನ ಸರ್ಕಾರಗಳು ರೈತರ ಬದುಕನ್ನು ಹಸನು ಮಾಡುವ ಉದ್ದೇಶದಿಂದ ಅನೇಕ ಪ್ರಯತ್ನಗಳನ್ನು ಮಾಡಿವೆ. ಇದನ್ನು ಸರ್ಕಾರವು ಮತ್ತಷ್ಟು ಚುರುಕುಗೊಳಿಸಿ ರೈತನ ಬಾಳಿನಲ್ಲಿ ಆರ್ಥಿಕ ಚೈತನ್ಯದ ಚಿಲುಮೆ ಚಿಮ್ಮಿಸಲು ಸರ್ವ ಪ್ರಯತ್ನಗಳನ್ನು ಮಾಡುವ ನಿಟ್ಟಿನಲ್ಲಿ ಸರ್ಕಾರವು ಕೃಷಿ ವಲಯದ ಚಟುವಟಿಕೆಗಳಲ್ಲಿ ರೈತರ ಸಹಭಾಗಿತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಉದ್ದೇಶಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು "ಕರ್ನಾಟಕ ರಾಜ್ಯ ರೈತರ ಸಲಹಾ ಸಮಿತಿ" ಯನ್ನು ರಚಿಸಲಾಗಿರುತ್ತದೆ. ರಾಜ್ಯದ ಪ್ರತಿ ಜಿಲ್ಲೆಯಿಂದ ಇಬ್ಬರು ಪ್ರಗತಿಪರ ರೈತರನ್ನು ಒಳಗೊಂಡಿರುವ ಈ ಸಲಹಾ ಸಮಿತಿಯ ಜೊತೆ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಪ್ರತಿ 2 ತಿಂಗಳಿಗೊಮ್ಮೆ ಚರ್ಚೆ ನಡೆಸಿ ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲು ಉದ್ದೇಶಿಸಿದ್ದು ಇದನ್ನು 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ "ಕರ್ನಾಟಕ ರಾಜ್ಯ ರೈತರ ಸಲಹಾ ಸಮಿತಿ" ಹೊಸ ಕಾರ್ಯಕ್ರಮದ ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆ: ಕೃಇ 110 ಕೃಯೋಕಾ 2018, ಬೆಂಗಳೂರು, ದಿನಾಂಕ:14-09-2018 ಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿಯ ಸದಸ್ಯರು ಈ ಕೆಳಗಿನಂತೆ ಇರುತ್ತಾರೆ.

| ಕ್ರ.ಸಂ. | ಪದನಾಮ | ವಿವರ |
|---|---|---|
| 1 | ಮಾನ್ಯ ಮುಖ್ಯಮಂತ್ರಿಗಳು | ಅಧ್ಯಕ್ಷರು |
| 2 | ಮಾನ್ಯ ಕೃಷಿ ಸಚಿವರು | ಸದಸ್ಯರು |
| 3 | ಮಾನ್ಯ ತೋಟಗಾರಿಕೆ ಸಚಿವರು | ಸದಸ್ಯರು |
| 4 | ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು | ಸದಸ್ಯರು |
| 5 | ಮಾನ್ಯ ಕೃಷಿ ಮಾರುಕಟ್ಟೆ ಸಚಿವರು | ಸದಸ್ಯರು |
| 6 | ಮಾನ್ಯ ರೇಷ್ಮೆ ಸಚಿವರು | ಸದಸ್ಯರು |
| 7 | ಮಾನ್ಯ ಸಹಕಾರ ಸಚಿವರು | ಸದಸ್ಯರು |
| 8 | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 9 | ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | ಸದಸ್ಯರು |
| 10 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು | ಸದಸ್ಯರು |
| 11 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ | ಸದಸ್ಯರು |
| 12 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| 13 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ | ಸದಸ್ಯರು |

| ಕ್ರ.ಸಂ. | ಪದನಾಮ | ವಿವರ |
|---|---|---|
| | ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | |
| 14 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ | ಸದಸ್ಯರು |
| 15 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | ಸದಸ್ಯರು |
| 16 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | ಸದಸ್ಯರು |
| 17 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ | ಸದಸ್ಯರು |
| 18 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | ಸದಸ್ಯರು |
| 19 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 20 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 21 | ಆಯುಕ್ತರು, ಕೃಷಿ ಇಲಾಖೆ | ಸದಸ್ಯರು |
| 22 | ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 23 | ಆಯುಕ್ತರು, ತೋಟಗಾರಿಕೆ ಇಲಾಖೆ | ಸದಸ್ಯರು |
| 24 | ಪ್ರತಿ ಜಿಲ್ಲೆಯಿಂದ ಇಬ್ಬರು ಪ್ರಗತಿಪರ ರೈತರು | ಸದಸ್ಯರು |
| 25 | ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

| | ವಿಶೇಷ ಆಹ್ವಾನಿತರು | |
|---|---|---|
| 1 | ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು | |
| 2 | ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ | |
| 3 | ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು | |
| 4 | ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ | |
| 5 | ಕುಲಪತಿಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಬಾಗಲಕೋಟೆ | |
| 6 | ಕುಲಪತಿಗಳು, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ, ಬೀದರ್ | |

**ಸಮಿತಿಯ ಕಾರ್ಯ ನಿರ್ವಹಣೆ/ಕರ್ತವ್ಯಗಳು:**

1) ಪ್ರತಿ 2 ತಿಂಗಳಿಗೊಮ್ಮೆ ರೈತರ ಸಲಹಾ ಸಮಿತಿಯನ್ನು ಏರ್ಪಡಿಸಿ, ಕೃಷಿ ವಲಯದ ಚಟುವಟಿಕೆಗಳಲ್ಲಿ ರೈತರ ಸಹಭಾಗಿತ್ವವನ್ನು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಸೂಕ್ತ ಯೋಜನೆಗಳನ್ನು ಕೈಗೊಂಡು ರೈತರನ್ನು ಪ್ರೇರೆಪಿಸಿ, ತಾಂತ್ರಿಕತೆಯನ್ನು ಅಳವಡಿಸಿ ಹೆಚ್ಚಿನ ಲಾಭವನ್ನು ದೊರಕಿಸಿ ಕೊಡುವುದು.
2) ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸುವುದು: ಕೃಷಿ ವಲಯದ ಚಟುವಟಿಕೆಗಳಲ್ಲಿ ರೈತರು ಅನುಭವಿಸುತ್ತಿರುವ ಕುಂದುಕೊರತೆಗಳನ್ನು ಚರ್ಚಿಸಿ ಪರಿಹಾರವನ್ನು ರೂಪಿಸುವುದು.
3) ರೈತರಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ, ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಸಬಲೀಕರಣಗೊಳ್ಳಲು ಉತ್ತೇಜಿಸುವುದು.
4) ಒಂದೇ ವೇದಿಕೆ ಮೇಲೆ ಕೃಷಿ ಮತ್ತು ಇತರೆ ಇಲಾಖೆಗಳು ಹಾಗೂ ರೈತರನ್ನು ಒಂದುಗೂಡಿಸಿ ವಿಚಾರ ವಿನಿಮಯ/ಪರಿಹಾರ ಕಂಡುಕೊಳ್ಳುವ ಕುರಿತು ಕಾರ್ಯೋನ್ಮುಖವಾಗುವುದು.

**2019-20ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ನೆಡೆಸಿರುವುದಿಲ್ಲ.**

**ಹಿಂದಿನ** ಸರ್ಕಾರದ**ಲ್ಲಿ ಇರುವಾಗ 1 ಸಭೆಯನ್ನು ಮಾತ್ರ vಏಪರ್ಪ ರಡಿಸಲಾಗಿತ್ತು.**

## 4. ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪಶಸ್ತಿ ಲೆಕ್ಕ ಶೀರ್ಷಿಕೆ:

## (2401-00-102-0-28 ಉಪ ಶೀರ್ಷಿಕೆ: 059 )

**ವಿಶೇಷ ಸೂಚನ: ಈ ಯೋಜನೆಗೆ ಸಂಬಂಧಿಸಿದಂತೆ, ಹಾಲಿ ಮಾರ್ಗಸೂಚಿಗಳಲ್ಲಿನ ಕೆಲವೊಂದು ಅಂಶಗಳನ್ನು ಮಾರ್ಪಾಡು ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪರಿಷ್ಕೃತ ಮಾರ್ಗಾಸೂಚಿಗಳನ್ನೊಳಗಂಡ ಸರ್ಕಾರಿ ಆದೇಶ ಬಂದ ನಂತರ ಪ್ರತ್ಯೇಕವಾಗಿ ಸದರಿ ಯೋಜನೇಯ 2020-21ನೇ ಸಾಲಿಗೆ ಅನ್ವಯಿಸುವಂತೆ ಮಾರ್ಗಸೂಚಿಗಳನ್ನು ಕಳುಹಿಸಿಕೊಡಲಾಗುವುದು.**

# 3. ಕರ್ನಾಟಕ ಕೃಷಿ ಬೆಲೆ ಆಯೋಗ (ಲೆಕ್ಕ ಶೀರ್ಷಿಕೆ 2401-00-102-0-28 )

ಸಂಖ್ಯೆ: ಕೃಇ:12:ಕೃಉಇ:2014, ಬೆಂಗಳೂರು, ದಿನಾಂಕ 25-06-2014 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಕೃಇ 57 ಕೃಯೋಕ 2017 ಬೆಂಗಳೂರು ದಿನಾಂಕ 14-07-2017 ರ ಅನ್ವಯ ಕೃಷಿ ಬೆಲೆ ಆಯೋಗವು ದಿನಾಂಕ: 27-06-2014 ರಿಂದ ಕಾರ್ಯನಿರ್ವಹಿಸುತ್ತಿದೆ. ಡಾ|| ಟಿ.ಎನ್. ಪ್ರಕಾಶ್‌ಕಮ್ಮರಡಿ ಇವರು ದಿನಾಂಕ 27-06-2014 ರಿಂದ ದಿನಾಂಕ 04-09-2019 ರವರೆಗೆ ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಪ್ರಸ್ತುತ ಶ್ರೀ ಹನುಮನಗೌಡ ಬೆಳಗುರ್ಕಿ ಇವರು ಆಯೋಗದ ಅಧ್ಯಕ್ಷರಾಗಿರುತ್ತಾರೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ಆಯೋಗದ ಸದಸ್ಯರಾಗಿರುತ್ತಾರೆ. ಕೃಷಿ ನಿರ್ದೇಶಕರು ಈ ಆಯೋಗದ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಆಯೋಗವು ಇಬ್ಬರು ರೈತ ಪ್ರತಿನಿಧಿ ಸದಸ್ಯರನ್ನು ಒಳಗೊಂಡಿರುತ್ತದೆ. ಈ ಹಿಂದೆ ಶ್ರೀ ಹನುಮನಗೌಡ ಬೆಳಗುರ್ಕಿ ಮತ್ತು ಶ್ರೀ ಸಂಪತ್ ಸಾಮ್ರಾಜ್ಯ ಇವರು ಅಯೋಗದಲ್ಲಿ ರೈತ ಪ್ರತಿನಿಧಿ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಪ್ರಸ್ತುತ ಆಯೋಗದಲ್ಲಿ ರೈತ ಪ್ರತಿನಿಧಿ ಸದಸ್ಯರು ಯಾರೂ ಇರುವುದಿಲ್ಲ.

ಕೃಷಿ ಬೆಲೆ ಆಯೋಗವು ತನಗೆ ವಹಿಸಿರುವ ಷರತ್ತು ಮತ್ತು ನಿಬಂಧನೆಗಳು ಹಾಗೂ ಧ್ಯೇಯೋದ್ದೇಶಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಕೃಷಿ ಮಾರುಕಟ್ಟೆಯ ಮೂಲಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಅಧಿಕ ಉತ್ಪಾದನೆ ಸಮಯದಲ್ಲಿ ಮಾರುಕಟ್ಟೆ ಮಧ್ಯಪ್ರವೇಶ, ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಚೌಕಾಸಿ ಸಾಮರ್ಥ್ಯ ಹೆಚ್ಚಿಸುವುದು, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರಗಳ ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ ಮತ್ತು ಪ್ರದೇಶಗಳ ರೈತರ ಹಿತ ಕಾಪಾಡುವುದು ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಅಲ್ಲದೇ ರೈತರ ಹಿತದೃಷ್ಟಿಯಿಂದ ರಾಜ್ಯ ಸರ್ಕಾರ ಆಗಿಂದಾಗ್ಗೆ ಸೂಚಿಸುವ ವಿಷಯಗಳ ಮೇಲೆ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ, ಶಿಫಾರಸ್ಸುಗಳನ್ನು ನೀಡುತ್ತದೆ.

ಕೃಷಿ ಬೆಲೆ ಆಯೋಗಕ್ಕೆ ವಹಿಸಿರುವ ಕತವ್ಯಗಳು:

1. ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಕಂಡುಹಿಡಿಯುವುದು.
2. ನಿಯತಕಾಲಿಕವಾಗಿ ಸರ್ಕಾರದ ಮಾರುಕಟ್ಟೆ ಮಧ್ಯಪ್ರವೇಶ ವಹಿಸಬೇಕಾದ ಬೆಳೆಗಳನ್ನು ಗುರುತಿಸಿ, ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.
3. ಬೆಳೆಗಳ ಉತ್ಪಾದಕತೆ, ಉತ್ಪಾದನೆ, ಸರಬರಾಜು ಮತ್ತು ಬೇಡಿಕೆ, ಮುಂಗಡ ಬೆಲೆ ಬಗ್ಗೆ ವಿಶ್ಲೇಷಣೆ ಮಾಡುವುದು.

4. ಪ್ರಮುಖ ಕೃಷಿ ಉತ್ಪನ್ನಗಳ ಲಾಭದಾಯಕ ಬೆಲೆಗಳನ್ನು ಬಿತ್ತನೆಗೆ ಮುಂಚೆ ಶಿಫಾರಸ್ಸು ಮಾಡುವುದು.

5. ಕೃಷಿ ಮತ್ತು ತೋಟಗಾರಿಕೆ ಪದಾರ್ಥಗಳ ವೆಚ್ಚಗಳು, ಬೆಲೆ ಮಾರುಕಟ್ಟೆ, ವ್ಯಾಪಾರ ಇತ್ಯಾದಿ ಅಂಶಗಳ ಗುಣಮಟ್ಟ ಮತ್ತು ವಿಶ್ವಾಸಾರ್ಹವಾದ ಸಂಶೋಧನೆ ಬಗ್ಗೆ ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಮಾಡುವುದು.

6. ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಮಾರುಕಟ್ಟೆ, ಬೆಲೆ ಹಾಗು ವ್ಯಾಪಾರದ ಬಗ್ಗೆ ಅಧ್ಯಯನ, ವರದಿಗಳನ್ನು ಪ್ರಕಟಿಸುವುದು ಮತ್ತು ಇತರೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಸಂಶೋಧಕರು, ತಜ್ಞರು, ಮಾರುಕಟ್ಟೆ ವೃತ್ತಿಪರರು ಮತ್ತು ಸಲಹೆಗಾರರನ್ನು ತೊಡಗಿಸಿಕೊಂಡು ಕಾರ್ಯಾಗಾರ/ ವಿಚಾರ ಸಂಕೀರ್ಣ, ಸಮಾಲೋಚನೆಗಳನ್ನು ಏರ್ಪಡಿಸುವುದು.

7. ಸಾಮೂಹಿಕ ಮತ್ತು ಗುಂಪು ಮಾರಾಟಗಾರಿಕೆ ಉಪಕ್ರಮಗಳ ಬಗ್ಗೆ ಪ್ರಾಯೋಗಿಕ ಯೋಜನೆಯ ಆಧಾರದ ಮೇಲೆ ಕ್ರಮಕೈಗೊಳ್ಳುವ ಬಗ್ಗೆ.

8. ಆಧುನಿಕ ಮಾರುಕಟ್ಟೆ, ವಿದ್ಯುನ್ಮಾನ ವ್ಯಾಪಾರ, ಬವಿಷ್ಯದ ಮಾರುಕಟ್ಟೆ, ವಾಣಿಜ್ಯ ಬೆಳೆಗಳ ಆಧುನಿಕ ವ್ಯಾಪಾರೋದ್ಯಮದ ಪ್ರಯೋಜನಗಳನ್ನು ಪಡೆಯಲು ವಿಶೇಷ ಸರಕು ಮಾರುಕಟ್ಟೆಗಳ ಬಗ್ಗೆ ಸಲಹೆ ನೀಡುವುದು.

9. ರೈತರಿಗೆ ಬೆಳೆ ಉತ್ಪಾದನೆ, ಮಾರುಕಟ್ಟೆ ಮತ್ತು ಸ್ಥಳೀಯ ಕಾಲೋಚಿತ ಮಾಹಿತಿ ಆಧರಿಸಿ ಮಾರುಟ್ಟೆ ಬೆಲೆಗಳ ಬಗ್ಗೆ ರೈತರಿಗೆ ಮಾಹಿತಿ ನೀಡುವುದು.

10. ಮಾರುಕಟ್ಟೆಯಲ್ಲಿ ಬೆಲೆಯನ್ನು ಅಧ್ಯಯನ ಮಾಡಿ ಮಾರುಕಟ್ಟೆ ಬೆಲೆ ಏರುಪೇರಾದಾಗ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಸಲಹೆ ನೀಡುವುದು.

ಕೃಷಿ ಬೆಲೆ ಆಯೋಗವು ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ಯೋಗ್ಯ ಬೆಲೆಗಳನ್ನು ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಕಾರ್ಯನೀತಿ ರಚನೆಗಾಗಿ ಸಲಹೆಗಳ ರೂಪದಲ್ಲಿ ವರದಿಗಳನ್ನು ಸಲ್ಲಿಸುತ್ತಿದೆ.

ಕೃಷಿ ಬೆಲೆ ಆಯೋಗವು ರಾಜ್ಯದ ಪ್ರಮುಖ 27 ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನಾ ವೆಚ್ಚವನ್ನು ಕೃಷಿ ವಿಶ್ವ ವಿದ್ಯಾನಿಲಯಗಳ ಸಹಯೋಗದೊಂದಿಗೆ ರೈತರ ಸಹಭಾಗಿತ್ವದಲ್ಲಿ ವೈಜ್ಞಾನಿಕವಾಗಿ ಕಂಡು ಹಿಡಿದು ವರದಿಯನ್ನು ಸಿದ್ಧಪಡಿಸುತ್ತದೆ. ಸದರಿ ಮಾಹಿತಿಯು ಕೇಂದ್ರದ ಬೆಂಬಲ ಬೆಲೆಯು ಸಮರ್ಪಕವಾಗಿದೆಯೇ / ಇಲ್ಲವೇ, ಇಲ್ಲದಿದ್ದಲ್ಲಿ ಪ್ರೋತ್ಸಾಹ ಬೆಲೆ ನೀಡಲು ಸಹಕಾರಿಯಾಗುತ್ತದೆ. ಬೆಂಬಲ ಬೆಲೆ ಇಲ್ಲದ ತೋಟಗಾರಿಕೆ ಬೆಳೆಗಳಾದ ಈರುಳ್ಳಿ, ಅಡಕೆ, ಟೊಮೆಟೋ, ತಾಳೆ ಮುಂತಾದ ಬೆಳೆಗಳಿಗೆ ಬೆಲೆ ನಿಗದಿಪಡಿಸಲು ಬೆಲೆ ಆಯೋಗದ ಉತ್ಪಾದನಾ ವೆಚ್ಚವನ್ನು ಬಳಸಿಕೊಳ್ಳಲಾಗುತ್ತಿದೆ. ಆಯೋಗದ ವರದಿಯಲ್ಲಿ ಬೆಲೆ ಮುನ್ಸೂಚನೆ ನೀಡಲಾಗಿದ್ದು, ಬೆಲೆಗಳ ಮಾಹಿತಿಯು ರೈತರಿಗೆ ಮುಂಬರುವ ದಿನಗಳಲ್ಲಿ ಬೆಳೆ ಯೋಜನೆ ಮಾಡಲು ಅನುಕೂಲವಾಗುತ್ತದೆ. ವರದಿಯಲ್ಲಿ ವಿವಿಧ ಬೆಳೆಗಳಲ್ಲಿ ಯಂತ್ರಗಳ ಬಳಕೆಯಿಂದ ಉತ್ಪಾದನಾ ವೆಚ್ಚದಲ್ಲಿ ಆಗುವ ಉಳಿತಾಯ ವಿವರಗಳು ಲಭ್ಯವಿದ್ದು, ರೈತರಿಗೆ ಜಾಗೃತಿ ಮೂಡಿಸಲು ಅನುಕೂಲವಾಗುತ್ತದೆ.

ಕರ್ನಾಟಕ ಕೃಷಿ ಬೆಲೆ ಆಯೋಗವು ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿಸುವ ನಿಟ್ಟಿನಲ್ಲಿ ಪ್ರಾಯೋಗಿಕ ಯೋಜನೆಯನ್ನು ರಾಜ್ಯದ ವಿವಿಧ ಹವಾಮಾನ ವಲಯಗಳಲ್ಲಿ 8 ಗ್ರಾಮಗಳನ್ನು ಆಯ್ಕೆ ಮಾಡಿ ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ. ಹಳ್ಳಿಗಳಲ್ಲಿ ಕಾರ್ಯಕ್ರಮ ಅನುಷ್ಠಾನದ ನಂತರ ರೈತರ ಆರ್ಥಿಕ ಪರಿಸ್ಥಿತಿ ಅವಲೋಕಿಸಲು ಸಮೀಕ್ಷೆ ಕೈಗೊಳ್ಳಲಾಗಿದ್ದು, ಅಂತಿಮ ವರದಿ ತಯಾರಿಸಲಾಗುತ್ತಿದೆ.

ಹಾಗೆಯೇ ರಾಷ್ಟ್ರ ಮಟ್ಟದ ಪ್ರತಿಷ್ಠಿತ ಸಂಸ್ಥೆಗಳಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ (ISEC), ಭಾರತೀಯತೋಟಗಾರಿಕೆ ಸಂಶೋಧನಾ ಸಂಸ್ಥೆ(IIHR), ಭಾರತೀಯ ತೋಟಗಾರಿಕೆ ಬೆಳೆಗಳ ನಿರ್ವಹಣಾ ಸಂಸ್ಥೆ (IIPM), ಭಾರತೀಯ ಕಾನೂನು ಮಹಾವಿದ್ಯಾಲಯ ಮುಂತಾದವುಗಳೊಡನೆ ಒಡಂಬಡಿಕೆ ಮಾಡಿಕೊಂಡು, ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ನೀತಿ ನಿಯಮಗಳ ಮೇಲಿನ 19 ಸಂಶೋಧನೆಗಳನ್ನು ಕೈಗೊಂಡು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ.

ರೈತರಿಗೆ ಲಾಭದಾಯಕ ಬೆಲೆಗಳನ್ನು ಒದಗಿಸುವ ನಿಟ್ಟಿನಲ್ಲಿ, ರೈತ ಉತ್ಪಾದಕ ಸಂಘಗಳ ಮೂಲಕ ಸಾಮೂಹಿಕ ಮಾರಾಟದಿಂದ ಅವರುಗಳ ಚೌಕಾಸಿ ಸಾಮರ್ಥ್ಯವನ್ನು ಹೆಚ್ಚಿಸಬಹುದಾಗಿದ್ದು, ಆ ಮೂಲಕ ಅವರುಗಳ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಕೃಷಿ ಬೆಲೆ ಆಯೋಗವು 2018-19 ಸಾಲಿನಲ್ಲಿ ಬೆಂಗಳೂರಿನ ಭಾರತೀಯ ಪ್ಲಾಂಟೇಷನ್ ನಿರ್ವಹಣಾ ಸಂಸ್ಥೆಯ ಸಹಭಾಗಿತ್ವದಲ್ಲಿ ರೈತ ಉತ್ಪಾದಕ ಸಂಘಗಳ ಸದಸ್ಯರಿಗೆ ತರಬೇತಿಗಳನ್ನು ಏರ್ಪಡಿಸಲಾಗಿರುತ್ತದೆ ಹಾಗು 2019-20ನೇ ಸಾಲಿನಲ್ಲಿ ಸತತ ಅಧ್ಯಯನಗಳನ್ನು ಕೈಗೊಂಡು, "ಕೃಷಿ ಉತ್ಪನ್ನಗಳ ಮಾರಾಟವನ್ನು ಗುಂಪು ವಿಧಾನದ ಮೂಲಕ ಮಾಡುವಿಕೆ–ಕರ್ನಾಟಕ ಸರ್ಕಾರಕ್ಕಾಗಿಒಂದು ಪಥನಕ್ಷೆ"ಎಂಬ ಅನ್ವೇಷಣಾ ಗ್ರಂಥವನ್ನು ಹೊರತರಲಾಗಿದೆ. ಇದರಲ್ಲಿ ಮಾರುಕಟ್ಟೆಗೆ ಸಂಬಂಧಿಸಿದಂತೆ 11 ವಿವಿಧ ಕಾರ್ಯನಿರತ ಸಂಶೋಧನಾ ಲೇಖನಗಳನ್ನು ಪ್ರಕಟಿಸಲಾಗಿದೆ. ಜೊತೆಗೆ ಸೂಕ್ತವಾದ ಕಾರ್ಯನೀತಿ ಶಿಫಾರಸ್ಸುಗಳನ್ನೂ ಸಹ ಮಾಡಲಾಗಿದೆ. ಇದನ್ನು ರೈತ ಸಮುದಾಯವು ಅದರಲ್ಲೂ ವಿಶೇಷವಾಗಿ ರೈತ ಉತ್ಪಾದಕರ ಸಂಘಟನೆಗಳು ಹಾಗೂ ಸರ್ಕಾರದ ಕಾರ್ಯನೀತಿ ರೂಪಿಸುವವರು ಬಳಸಿಕೊಳ್ಳಬಹುದಾಗಿದೆ.

ಕೃಷಿ ಬೆಲೆ ಆಯೋಗದಲ್ಲಿ ಮಾರುಕಟ್ಟೆ ಆಧಾರಿತ Decision Support System (DSS) ಮೂಲಕ ಮಾರುಕಟ್ಟೆ ಬೆಲೆ ವಿಶ್ಲೇಷಣೆ ಹಾಗೂ ಬೆಲೆ ಮುನ್ಸೂಚನೆ ಮಾಹಿತಿಯನ್ನು ನೀಡಿ ಸಂಬಂಧಪಟ್ಟ ಇಲಾಖೆಗಳು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ ಅನುಷ್ಠಾನಕ್ಕೆ ಪೂರ್ವಭಾವಿ ಸಿದ್ದತೆ ಮಾಡಿಕೊಳ್ಳಲು ಸಹಕಾರಿಯಾಗಲಿದೆ. ಈ ದಿಶೆಯಲ್ಲಿ ಬೆಲೆ ಆಯೋಗವು ಡ್ಯಾಷ್‌ಬೋರ್ಡ್ (ಕೃಷಿ ಧಾರಣೆ ವಿಶ್ಲೇಷಣೆ ಫಲಕ-ಕೃಪ)ವನ್ನು ಬಿಡುಗಡೆ ಮಾಡಿರುತ್ತದೆ. ಕೃಷಿ ಬೆಲೆ ಆಯೋಗವು ಪ್ರತಿಷ್ಠಿತ IBM india Ltd. ಸಂಸ್ಥೆಯ ಸಹಕಾರದೊಂದಿಗೆ AI & ML (Artificial Intelligence and Machine Learning) ತಂತ್ರಾಂಶಗಳನ್ನು ಅಳವಡಿಸಿಕೊಂಡು ಬೆಳೆಗಳ ಉತ್ಪನ್ನಗಳ ಹಾಗೂ ಬೆಲೆಗಳ ಮುನ್ನಂದಾಜು ಮಾಡಲು ಪ್ರಾಯೋಗಿಕವಾಗಿ ಟೊಮೆಟೋ ಬೆಳೆಗೆ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹಾಗು ಮೆಕ್ಕೆಜೋಳಕ್ಕೆ ಸಂಬಂಧಪಟ್ಟಂತೆ ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯಕೈಗೊಂಡು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಫಲಿತಾಂಶಗಳನ್ನು

ಅಂತಿಮಗೊಳಿಸಲಾಗುತ್ತಿದೆ. ಈ ಜಾಲತಾಣವನ್ನುkapc.mypluemix.net ಮೂಲಕ ಸಂಪರ್ಕಿಸಬಹುದಾಗಿದೆ.

ಪಡಿತರ ಪದ್ಧತಿಗಾಗಿ ಉತ್ತಮ ಧಾನ್ಯಗಳನ್ನು ಉತ್ಪಾದಿಸುವ ಸಲುವಾಗಿ ಹಾಗೂ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಭನೆಯನ್ನು ಗಳಿಸುವ ನಿಟ್ಟಿನಲ್ಲಿ, ಪಡಿತರ ವ್ಯವಸ್ಥೆಗೆ ಸಂಗ್ರಹಿಸುವ ರಾಗಿ, ಜೋಳ, ಮಳೆಯಾಶ್ರಿತ ಭತ್ತ ಇತ್ಯಾದಿಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನೀಡಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು, ವಿವರವಾದ ಪಥನಕ್ಷೆಯನ್ನು ಒಳಗೊಂಡಂತಹ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದು ರೈತರಿಗೆ ಒಂದು ರೀತಿಯ ಉತ್ತೇಜನಕಾರಿಯಾಗಿ ಹೆಚ್ಚು ಹೆಚ್ಚಾಗಿ ಈ ಬೆಳೆಗಳನ್ನು ಉತ್ಪಾದಿಸಲು ಸಹಾಯಕವಾಗುತ್ತದೆ.

ಕೃಷಿ ಬೆಲೆ ಆಯೋಗವು ಕಾಲಕಾಲಕ್ಕೆ ರೈತರು, ರೈತ ಮುಖಂಡರು, ತಜ್ಞರು, ಸ್ವಯಂಸೇವಾ ಸಂಸ್ಥೆಗಳು, ವಿವಿಧ ಇಲಾಖೆಗಳ ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳೊಡನೆ ಕೃಷಿ ಉತ್ಪಾದನೆ, ಪೂರೈಕೆ, ಮಾರುಕಟ್ಟೆ, ಬೆಲೆ, ಬೆಳೆ ವಿಮೆ, ಕೃಷಿ ಸಾಲ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಸತತ ಸಂವಾದ, ವಿಚಾರ ವಿನಿಮಯ ಇತ್ಯಾದಿಗಳನ್ನು ಗೋಷ್ಠಿಗಳ ಮೂಲಕ ಮಾಡಿ ರೈತ ಸಮುದಾಯ ಹಾಗೂ ಸರ್ಕಾರದ ನಡುವೆ ಉತ್ತಮ ಸಾಮರಸ್ಯ ಮೂಡಿಸಲು ನೆರವಾಗುತ್ತಿದೆ.

2020-21ನೇ ಸಾಲಿನಲ್ಲಿ ಕೃಷಿ ಬೆಲೆ ಆಯೋಗಕ್ಕೆರೂ.150.00 ಲಕ್ಷ ಅನುದಾನ ಒದಗಿಸಲಾಗಿದೆ. ಕೃಷಿ ಬೆಲೆ ಆಯೋಗದ ಅಧ್ಯಕ್ಷರು ಮತ್ತು ತಾಂತ್ರಿಕ/ತಾಂತ್ರಿಕೇತರ ಸಿಬ್ಬಂದಿ ವೇತನ ಹಾಗು ಭತ್ಯೆಗಳನ್ನು ಭರಿಸಲು ಹಾಗು ಕೃಷಿ ವಿಶ್ವ ವಿದ್ಯಾನಿಲಯಗಳ ಸಹಯೋಗದೊಂದಿಗೆ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಉತ್ಪಾದನಾ ವೆಚ್ಚ ಕಂಡುಹಿಡಿಯಲು, ಹಾಗು ರಾಜ್ಯ/ ಕೇಂದ್ರ ಸರ್ಕಾರದ ಇತರೆ ಪ್ರತಿಷ್ಠಿತ ಸಂಸ್ಥೆಗಳ ಮೂಲಕ ಸಂಶೋಧನಾ ಅಧ್ಯಯನ ಕೈಗೊಳ್ಳಲು ಸದರಿ ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

# VI ಬೀಜೋತ್ಪಾದನಾ ಕೇಂದ್ರಗಳು

## ಲೆಕ್ಕ ಶೀರ್ಷಿಕೆ: 2401–00–103–0–01

### 2020-21 ನೇ ಸಾಲಿನ ಬೀಜೋತ್ಪಾದನಾ ಕಾರ್ಯಕ್ರಮಗಳ ಮಾರ್ಗಸೂಚಿ

### 1. ಬೀಜೋತ್ಪಾದನಾ ಕಾರ್ಯಕ್ರಮ :

ಬೀಜೋತ್ಪಾದನಾ ಕೇಂದ್ರ/ಕೃಷಿ ಕ್ಷೇತ್ರಗಳಲ್ಲಿ ಮುಖ್ಯವಾಗಿ ಮೂಲ/ಪ್ರಮಾಣಿತ ಬೀಜೋತ್ಪಾದನೆಯನ್ನು ಕೈಗೊಳ್ಳಲಾಗುತ್ತಿದೆ. ಮೂಲ ಬೀಜೋತ್ಪಾದನೆಗೆ ಬೇಕಿರುವ ತಳಿವರ್ಧಕ ಬೀಜಗಳನ್ನು ಕೃಷಿ ವಿಶ್ವವಿದ್ಯಾಲಯಗಳಿಂದ ಮುಂಗಡ ಬೇಡಿಕೆ ಆಧಾರದ ಮೇರೆಗೆ ಪಡೆಯಲಾಗುವುದು. ಕೃಷಿ ವಿಶ್ವವಿದ್ಯಾಲಯಗಳಲ್ಲಿ ತಳಿವರ್ಧಕ ಬೀಜಗಳ ಲಭ್ಯತೆ ಆಧಾರದ ಮೇರೆಗೆ ಕೃಷಿ ಕ್ಷೇತ್ರಗಳಿಗೆ ತಳಿವರ್ಧಕ ಬೀಜಗಳನ್ನು ಹಂಚಿಕೆ ಮಾಡಿ ಕ್ಷೇತ್ರಗಳಲ್ಲಿನ ಹೆಚ್ಚುವರಿ ಪ್ರದೇಶಗಳಲ್ಲಿ ಪ್ರಮಾಣಿತ ಬೀಜೋತ್ಪಾದನೆಯನ್ನು ಕೈಗೊಳ್ಳಲಾಗುವುದು. ಕೃಷಿ ಕ್ಷೇತ್ರಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಇಲಾಖೆಯು ಬಹಳ ಬದಲಾವಣೆಯನ್ನು ತಂದಿದ್ದರೂ ಸಹ, ಕೃಷಿ ಕ್ಷೇತ್ರಗಳ ಕಾರ್ಯ ವೈಖರಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆಯಾಗಿರುವುದಿಲ್ಲ. ಕೃಷಿ ಕ್ಷೇತ್ರಗಳ ಖರ್ಚನ್ನು ಕಡಿಮೆ ಮಾಡಿ ಆದಾಯವನ್ನು ಹೆಚ್ಚಿಸಲು ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವ ವ್ಯವಸ್ಥಾಪಕರು ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳ ಪಾತ್ರವು ಬಹು ಮುಖ್ಯವಾಗಿರುವುದು. ಈ ಹಿನ್ನೆಲೆಯಲ್ಲಿ ವಿವಿಧ ಅಧಿಕಾರಿಗಳು ನಿರ್ವಹಿಸುವ ಕಾರ್ಯ ಸೂಚಿಯನ್ನು ಈ ಕೆಳಗೆ ನೀಡಲಾಗಿದೆ.

### 1. ಬೀಜೋತ್ಪಾದನಾ ಕೇಂದ್ರ/ ಕೃಷಿ ಕ್ಷೇತ್ರಗಳ ವ್ಯವಸ್ಥಾಪಕರುಗಳು ನಿರ್ವಹಿಸಬೇಕಾದ ಕಾರ್ಯಗಳು:

1. ಕೃಷಿ ಕ್ಷೇತ್ರಗಳಲ್ಲಿ ಲಭ್ಯವಿರುವ ಎಲ್ಲಾ ಸವಲತ್ತುಗಳನ್ನು ಅಂದರೆ ಭೂಮಿ, ನೀರು, ಕೃಷಿ ಉಪಕರಣ ಇತ್ಯಾದಿ ಸಮರ್ಪಕವಾಗಿ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸುವುದು.
2. ಪ್ರತಿ ವರ್ಷವೂ ತಾಕುಗಳಲ್ಲಿ ಹಂಗಾಮು ಪೂರ್ವಕವಾಗಿ ಮಣ್ಣು ಮಾದರಿಯನ್ನು ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಪರೀಕ್ಷಿಸಿ ಫಲಿತಾಂಶದ ಆಧಾರದ ಮೇರೆಗೆ ರಸಗೊಬ್ಬರಗಳ ಬಳಕೆ ಮತ್ತು ಭೂ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು. ಭೂ ಫಲವತ್ತತೆ ನಕ್ಷೆಯನ್ನು ಸಿದ್ಧಪಡಿಸಿ ಪ್ರದರ್ಶಿಸಬೇಕು.
3. ಭೂ ಫಲವತ್ತತೆ ಉತ್ತಮ ಪಡಿಸಲು ಕೃಷಿ ಕ್ಷೇತ್ರಗಳಲ್ಲಿ ಹಸಿರೆಲೆ ಗೊಬ್ಬರವನ್ನು ಬಳಸಬೇಕು ಹಾಗೂ ಹಸಿರೆಲೆ ಗೊಬ್ಬರ ಬೆಳೆಗಳ ಬೀಜೋತ್ಪಾದನೆ ಕೈಗೊಳ್ಳುವುದು.

4. ಕ್ಷೇತ್ರದಲ್ಲಿ ಕಡ್ಡಾಯವಾಗಿ ಸಾವಯವ ಗೊಬ್ಬರ ಮತ್ತು ಎರೆಹುಳು ಗೊಬ್ಬರ ಉತ್ಪಾದನೆ ಕೈಗೊಳ್ಳಬೇಕು.

5. ಕೃಷಿ ಕ್ಷೇತ್ರಗಳಲ್ಲಿ ಸಂರಕ್ಷಿತ ಹಾಗೂ ನಿಶ್ಚಿತ ಮಳೆ ಬರುವ ನೀರಾವರಿ ಪ್ರದೇಶಗಳಲ್ಲಿ ಮಾತ್ರ ಬೀಜೋತ್ಪಾದನಾ ಕಾರ್ಯವನ್ನು ಸೀಮಿತಗೊಳಿಸುವುದು.ಸಾಗುವಳಿಗೆ ಲಭ್ಯವಿಲ್ಲದೆ ಇರುವ ಪ್ರದೇಶಗಳಲ್ಲಿ ತೋಟಗಾರಿಕೆ/ ಅರಣ್ಯ/ ಜೈವಿಕ ಇಂಧನ ಮರಗಳನ್ನು ಬೆಳೆಸುವುದು.

6. ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಬರುವಂತೆ ಕಾರ್ಯಕ್ರಮವನ್ನು ರೂಪಿಸಿ ಕಾರ್ಯ ನಿರ್ವಹಿಸಿ ಕ್ಷೇತ್ರದ ದರ್ಜೆಯನ್ನು ಉತ್ತಮ ಪಡಿಸುವುದು.

7. ಬೀಜೋತ್ಪಾದನೆ ಕೈಗೊಳ್ಳುವಾಗ ಇತ್ತೀಚೆಗೆ ಬಿಡುಗಡೆಯಾಗಿರುವ ತಳಿಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು ಹಾಗೂ ಒಂದೇ ಬೆಳೆಯ ಎರಡಕ್ಕಿಂತ ಹೆಚ್ಚು ತಳಿಗಳನ್ನು ಅಳವಡಿಸಿಕೊಳ್ಳಬಾರದು.

8. ಕೃಷಿ ವಿಶ್ವವಿದ್ಯಾಲಯದಿಂದ ಹಂಚಿಕೆಯಾಗುವ ತಳಿವರ್ಧಕ ಬೀಜಗಳನ್ನು ನಿಗದಿತ ದಿನದೊಳಗೆ ತಪ್ಪದೇ ಎತ್ತುಗಡೆ ಮಾಡಿ, ನಿರ್ದೇಶನಾಲಯಕ್ಕೆ ನಿಗದಿತ ನಮೂನೆಯಲ್ಲಿ ವರದಿ ನೀಡುವುದು.

9. ಕೃಷಿ ಕ್ಷೇತ್ರಗಳಲ್ಲಿ ಮಾಗಿ ಉಳುಮೆ ಕೈಗೊಳ್ಳಬೇಕು ಮತ್ತು ಮಳೆಯಾಶ್ರಯದಲ್ಲಿ ಒಣಬೇಸಾಯ ತಂತ್ರಜ್ಞಾನವನ್ನು ತಪ್ಪದೇ ಅನುಸರಿಸಬೇಕು.

10. ಕೃಷಿ ಕಾರ್ಮಿಕರ ಬೇಡಿಕೆ ಮತ್ತು ಕೃಷಿ ಪರಿಕರ ಬೇಡಿಕೆಗಳನ್ನು ಹಿರಿಯ ಅಧಿಕಾರಿಗಳಿಂದ ಮುಂಚಿತವಾಗಿಯೇ ಅನುಮೋದನÉ ಪಡೆದು ಕಾರ್ಯ ನಿರ್ವಹಿಸಬೇಕು.

11. ಬೀಜೋತ್ಪಾದನೆಯಲ್ಲಿ ಆಧುನಿಕ ಬೇಸಾಯ ತಂತ್ರಜ್ಞಾನವನ್ನು ಅನುಸರಿಸುವುದು ಹಾಗೂ ಪ್ರಮಾಣೀಕರಣಕ್ಕೆ ನಮೂನೆ (1)ನ್ನು ಸಕಾಲಕ್ಕೆ ಬೀಜ ಪ್ರಮಾಣನ ಸಂಸ್ಥೆಗೆ ಸಲ್ಲಿಸುವುದು.

12. ಬೀಜೋತ್ಪಾದನಾ ತಾಕುಗಳಲ್ಲಿ ಮೊಳಕೆ ಪ್ರಮಾಣ ಅತೀ ಕಡಿಮೆ ಕಂಡು ಬಂದರೆ, ಮಿಶ್ರಗಳಿದ್ದರೆ ಅಥವಾ ಪ್ರಕೃತಿ ವಿಕೋಪದಿಂದ ಹಾನಿಗೊಳಗಾದರೆ , ಕೂಡಲೇ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಗೂ, ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಿಗೂ ಹಾಗೂ ನಿರ್ದೇಶನಾಲಯಕ್ಕೆ ತಿಳಿಸುವುದು.

13. ಸಸ್ಯ ಸಂರಕ್ಷಣಾ ಕಾರ್ಯಗಳಿಗೆ ಸಮಗ್ರ ಕೀಟ ನಿರ್ವಹಣಾ ಕ್ರಮಗಳನ್ನು ಅನುಸರಿಸಿ ಕೈಗೊಳ್ಳುವುದು.

14. ಎಲ್ಲಾ ಬೆಳೆಗಳಲ್ಲೂ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ನೇಮಿಸುವ ಅಧಿಕಾರಿಗಳಿಂದ ಪರೀಕ್ಷಾ ಕಟಾವು ನಡೆಸಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
15. ಬೆಳೆ ಕಟಾವು ಒಳಗೊಂಡಂತೆ, ಎಲ್ಲಾ ಕೃಷಿ ಕಾರ್ಯಗಳನ್ನು ಸಕಾಲಕ್ಕೆ ಕೈಗೊಳ್ಳುವುದು.
16. ಉತ್ಪಾದಿಸಿದ ಬೀಜಗಳನ್ನು ಸಂಸ್ಕರಣೆಗೆ ಕಳುಹಿಸುವ ಮೊದಲು ಸ್ಥಳೀಯವಾಗಿ, ಬೀಜ ಪರೀಕ್ಷೆ ಮಾಡುವುದು. ಬೆಳೆ ಕಟಾವಾದ ನಂತರ 10 ರಿಂದ 15 ದಿವಸಗಳೊಳಗೆ ಸಂಸ್ಕರಣೆಗೆ ಕರ್ನಾಟಕ ರಾಜ್ಯ ಬೀಜ ನಿಗಮ ಸಂಸ್ಥೆಗೆ ಕಳುಹಿಸುವುದು.
17. ಬೀಜಗಳ ಸಂಸ್ಕರಣೆ ಮತ್ತು ಮಾದರಿಯನ್ನು ಕ್ಷೇತ್ರಗಳ ಮುಖ್ಯಸ್ಥರ ಹಾಜರಿಯಲ್ಲಿ ನಿಗದಿಪಡಿಸಿದ ದಿನದಂದು ಕೈಗೊಳ್ಳಬೇಕು.
18. ಜರಡಿ ತಿರಸ್ಕೃತ ಬೀಜಗಳನ್ನು ಸಂಸ್ಕರಣೆಯ ದಿನದಂದೇ ಎತ್ತುಗಡೆ ಮಾಡಿ ಎ.ಪಿ.ಎಂ.ಸಿ./ ಆರ್.ಎಂ.ಸಿ.ಯಲ್ಲಿ ಕ್ರಮಬದ್ಧವಾಗಿ ವಿಲೇವಾರಿ ಮಾಡಬೇಕು.
19. ಪ್ರತಿ ಹಂಗಾಮಿನಲ್ಲೂ ಬೆಳೆ ತಳಿ ತಾಕುಗಳ ಸಾಗುವಳಿ ವೆಚ್ಚದ ಚೀಟಿಯನ್ನು ಬರೆಯಬೇಕು.
20. ಕೃಷಿ ಕ್ಷೇತ್ರಗಳಲ್ಲಿ ಅನುಪಯುಕ್ತ ವಸ್ತುಗಳನ್ನು ಆಗಿಂದಾಗ್ಗೆ, ಹರಾಜು ಹಾಕಿ ವಿಲೇವಾರಿ ಮಾಡಬೇಕು.
21. ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಮಾಸಿಕ ಪ್ರಗತಿ, ವೆಚ್ಚ ಮತ್ತು ಆದಾಯದ ವಿವರಗಳನ್ನು ನಿಗದಿತ ನಮೂನೆಯಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
22. ಕ್ಷೇತ್ರಗಳಲ್ಲಿ ಎಲ್ಲಾ ವಹಿಗಳನ್ನು ಕಾಲೋಚಿತಗೊಳಿಸಿ ಇಟ್ಟಿರಬೇಕು.
23. ಕ್ಷೇತ್ರಗಳಲ್ಲಿರುವ ಮರಗಳಿಗೆ ಸಂಖ್ಯೆಗಳನ್ನು ನೀಡಬೇಕು ಮತ್ತು ಅವುಗಳಿಂದ ಬರುವ ಇಳುವರಿಯ ವಿವರವನ್ನು ವಹಿಯಲ್ಲಿ ಬರೆದಿಡಬೇಕು.
24. ಕ್ಷೇತ್ರಗಳಲ್ಲಿ ಅಧಿಕಾರಿಗಳ ಭೇಟಿ ವಹಿಯನ್ನು ಇಡಬೇಕು ಹಾಗೂ ಹಿರಿಯ ಅಧಿಕಾರಿಗಳು ವಹಿಯಲ್ಲಿ ನೀಡಿದ ಸಲಹೆಯನ್ನು ವ್ಯವಸ್ಥಾಪಕರು ಕಡ್ಡಾಯವಾಗಿ ಪಾಲಿಸಬೇಕು.
25. ಕ್ಷೇತ್ರಗಳ ಜಮೀನಿನ ಪಹಣಿ ಪ್ರತಿಯನ್ನು ಪ್ರತಿ ವರ್ಷವೂ ಕಂದಾಯ ಇಲಾಖೆಯಿಂದ ಪಡೆಯಬೇಕು ಹಾಗೂ ಗಡಿಯನ್ನು ನಿಗದಿಪಡಿಸಿಕೊಳ್ಳಬೇಕು.
26. ಹಿಂದಿನ ವರ್ಷದ ಅನುಭವದ ಮೇಲೆ ಬೆಳೆ ಯೋಜನೆ ಕೈಗೊಳ್ಳುವಾಗ ಹೆಚ್ಚು ಕಳೆ ಬರುವ ಕಡೆಗಳಲ್ಲಿ ಕಳೆ ನಾಶಕವನ್ನು ಉಪಯೋಗಿಸಬೇಕು.

**2. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ನಿರ್ವಹಿಸಬೇಕಾದ ಕಾರ್ಯಗಳು:**

1. ಕೃಷಿ ಕ್ಷೇತ್ರಗಳಿಗೆ ವಾರಕ್ಕೊಮ್ಮೆ ಭೇಟಿ ನೀಡಿ ಬೀಜೋತ್ಪಾದನೆಯ ಬಗ್ಗೆ ಕ್ಷೇತ್ರದ ವ್ಯವಸ್ಥಾಪಕರಿಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ನೀಡುವುದು ಹಾಗೂ ಇದರ ನಿರ್ವಹಣೆಯನ್ನು ಪರೀಕ್ಷಿಸುವುದು.
2. ವ್ಯವಸ್ಥಾಪಕÀರು ಕಳುಹಿಸಿರುವ ಕೃಷಿ ಕಾರ್ಮಿಕರ ಹಾಗೂ ಪರಿಕರ ಬೇಡಿಕೆಯ ಅನುಮೋದನೆಯನ್ನು ಮುಂಚಿತವಾಗಿಯೇ ನೀಡುವುದು.
3. ಕೃಷಿ ಕ್ಷೇತ್ರಗಳಲ್ಲಿ ಬೀಜೋತ್ಪಾದನೆ ತಾಕುಗಳನ್ನು ಪ್ರಮಾಣೀಕರಣಕ್ಕೆ ಸಕಾಲದಲ್ಲಿ ಬೀಜ ಪ್ರಮಾಣೀಕರಣ ಸಂಸ್ಥೆಗೆ ಕಳುಹಿಸುವುದು.
4. ಕೃಷಿ ಕ್ಷೇತ್ರದಲ್ಲಿ ಉತ್ಪಾದಿಸಿದ ಬೀಜಗಳನ್ನು ಸ್ವಚ್ಚತೆ ಮಾಡಿ ಸಕಾಲದಲ್ಲಿ ಸಂಸ್ಕರಣೆಗೆ KSSC ಸಂಸ್ಥೆಗೆ ಕಳುಹಿಸಲು ಸೂಕ್ತ ವ್ಯವಸ್ಥೆ ಮಾಡುವುದು ಹಾಗೂ ಸಂಸ್ಥೆಯಿಂದ ಪಡೆದ ಹಣವನ್ನು ಸರ್ಕಾರಕ್ಕೆ ಜಮಾ ಮಾಡುವುದು.
5. ಕೃಷಿ ಕ್ಷೇತ್ರದ ಖರ್ಚನ್ನು ಕಡಿಮೆ ಮಾಡಿ ಆದಾಯವನ್ನು ಹೆಚ್ಚಿಸಲು ಕಾರ್ಯ ನಿರತರಾಗಬೇಕು.

**3. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ನಿರ್ವಹಿಸಬೇಕಾದ ಕಾರ್ಯಗಳು:**

1. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಕೃಷಿ ಕ್ಷೇತ್ರಗಳಿಗೆ ಪ್ರತಿ 15 ದಿವಸಕೊಮ್ಮೆ ಭೇಟಿ ನೀಡಿ ಕ್ಷೇತ್ರದ ವ್ಯವಸ್ಥಾಪಕರಿಗೆ ಸೂಕ್ತ ತಾಂತ್ರಿಕ ಸಲಹೆಯನ್ನು ನೀಡುವುದು ಹಾಗೂ ಕ್ಷೇತ್ರದ ನಿರ್ವಹಣೆಯನ್ನು ಪರೀಕ್ಷಿಸಬೇಕು.
2. ಇಲಾಖಾ ಕೃಷಿ ಕ್ಷೇತ್ರಗಳಲ್ಲಿ ಪ್ರಕೃತಿ ವಿಕೋಪ ಹೊರತು ಪಡಿಸಿ ಯಾವುದೇ ಕಾರಣಕ್ಕಾದರೂ ಅತೀ ಕಡಿಮೆ ಇಳುವರಿಯು ಬಂದರೆ ಅಂತಹ ಎಲ್ಲಾ ಪ್ರಕರಣಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಿ, ಕ್ಷೇತ್ರಕ್ಕಾಗಿರುವ ನಷ್ಟವನ್ನು ಸಂಬಂಧಪಟ್ಟವರಿಂದ ತುಂಬಿಸುವುದು.
3. ಕೃಷಿ ವಿಶ್ವವಿದ್ಯಾಲಯದಿಂದ ಹಂಚಿಕೆಯಾಗುವ ತಳಿವರ್ಧಕ ಬೀಜಗಳನ್ನು ನಿಗದಿತ ದಿನದೊಳಗೆ ತಪ್ಪದೇ ಎತ್ತುಗಡೆ ಮಾಡಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
4. ಕೃಷಿ ಕಾರ್ಯವು ಕಾಲ ನಿಗದಿತ ಕಾರ್ಯಕ್ರಮವಾಗಿರುವುದರಿಂದ ಅನುದಾನವನ್ನು ಸಕಾಲದಲ್ಲಿ ಬಿಡುಗಡೆ ಮಾಡಲು ಸೂಕ್ತ ವ್ಯವಸ್ಥೆ ಮಾಡುವುದು.

**ಬೀಜ ಕ್ಷೇತ್ರಗಳ ಲೆಕ್ಕಶೀರ್ಷಿಕೆ 2401-00-103-0-01 ರಡಿ ಸದರಿ ಬೀಜೋತ್ಪಾದನಾ ಕೇಂದ್ರ/ಕೃಷಿ ಕ್ಷೇತ್ರಗಳು ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ.**

## ಅನುಬಂಧ-1

## 2020-21ನೇ ಸಾಲಿನಲ್ಲಿ ಇಲಾಖಾ ಕೃಷಿ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾದ ತಳಿವರ್ಧಕ/ಮೂಲ/ಪ್ರಮಾಣಿತ ಬೀಜೋತ್ಪಾದನಾಕಾರ್ಯಕ್ರಮ

| ಕ್ರ. ಸಂ. | ಕ್ಷೇತ್ರದ ಹೆಸರು | ಹಂಗಾಮು | ಬೆಳೆ | ತಳಿ | ಬೀಜ ಉತ್ಪಾದನೆ ವರ್ಗ | ವಿಸ್ತೀರ್ಣ (ಹೆ. ಗಳಲ್ಲಿ) | ಬೀಜಗಳ ಬೇಡಿಕೆ (ಕೆ.ಜಿ. ಗಳಲ್ಲಿ) |
|---|---|---|---|---|---|---|---|
| 1 | ಬೀ.ಕೇಂ.ಬಾಲ್ಕಿ | ಮುಂಗಾರು | ಸೋಯಾ ಅವರೆ | JS 335 | ತಳಿವರ್ಧಕ | 2.00 | 150 |
| | | ಮುಂಗಾರು | ತೊಗರಿ | BSMR-736 | ತಳಿವರ್ಧಕ | 1.83 | 25 |
| | | ಹಿಂಗಾರು | ಗೋಧಿ | DWR162 | ತಳಿವರ್ಧಕ | 2.00 | 150 |
| | | **ಒಟ್ಟು** | | | | **5.83** | |
| 2 | ಬೀ.ಕೇಂ. ಸವದತ್ತಿ | ಮುಂಗಾರು | ಹೆಸರು | BGS-9 | ತಳಿವರ್ಧಕ | 4.80 | 60 |
| | | ಮುಂಗಾರು | ಉದ್ದು | DU-1 | ತಳಿವರ್ಧಕ | 1.20 | 15 |
| | | ಮುಂಗಾರು | ಸಿರಿ ಧಾನ್ಯಗಳು | - | ಮೂಲ | 1.60 | 8 |
| | | **ಒಟ್ಟು** | | | | **7.60** | |
| 3 | ಕೆ.ಚಂದರಗಿ | ಮುಂಗಾರು | ಹೆಸರು | BGS-9 | ಮೂಲ | 2.80 | 35 |
| | | ಮುಂಗಾರು | ಉದ್ದು | DU-1 | ಮೂಲ | 0.80 | 10 |
| | | ಮುಂಗಾರು | ತೊಗರಿ | TS-3R | ಪ್ರಮಾಣಿತ | 0.80 | 10 |
| | | ಮುಂಗಾರು | ನವಣೆ | Local | ಪ್ರಮಾಣಿತ | 1.60 | 8 |
| | | ಹಿಂಗಾರು | ಹಿಂ.ಜೋಳ | M-35-1 | ಮೂಲ | 1.60 | 12 |
| | | ಹಿಂಗಾರು | ಗೋಧಿ | DWR-162 | ಮೂಲ | 0.80 | 60 |
| | | ಹಿಂಗಾರು | ಕಡಲೆ | JAKI - | ಮೂಲ | 1.20 | 60 |

| ಕ್ರ. ಸಂ. | ಕ್ಷೇತ್ರದ ಹೆಸರು | ಹಂಗಾಮು | ಬೆಳೆ | ತಳಿ | ಬೀಜ ಉತ್ಪಾದನೆ ವರ್ಗ | ವಿಸ್ತೀರ್ಣ (ಹೆ. ಗಳಲ್ಲಿ) | ಬೀಜಗಳ ಬೇಡಿಕೆ (ಕೆ.ಜಿ. ಗಳಲ್ಲಿ) |
|---|---|---|---|---|---|---|---|
| | | | | 11 | | | |
| | | **ಒಟ್ಟು** | | | | **9.60** | |
| 4 | ಬೀ.ಕೇಂ. ಕಿತ್ತಗಾನಹಳ್ಳಿ | **ಯಾವುದೇ ಬೆಳೆ ಕಾರ್ಯಕ್ರಮ ಇರುವುದಿಲ್ಲ** | | | | | |
| 5 | ಬೀ.ಕೇಂ.ಬುರುಡಗುಂಟೆ | ಮುಂಗಾರು | ತೊಗರಿ | BRG-5 | ಮೂಲ | 1.00 | 300 |
| | | ಮುಂಗಾರು | ರಾಗಿ | MR-6 | ಮೂಲ | 4.00 | 15 |
| | | ಮುಂಗಾರು | ಸೆಣಬು/ ಹಸಿರೆಲೆ ಗೊಬ್ಬರ | | | 3.00 | 75 |
| | | **ಒಟ್ಟು** | | | | **8.00** | |
| 6 | ಬೀ.ಕೇಂ. ಲಿಂಗದಹಳ್ಳಿ | ಮುಂಗಾರು | ತೊಗರಿ | BRG2 | ಮೂಲ | 20..00 | 300 |
| | | ಮುಂಗಾರು | ರಾಗಿ | MR-6 | ಮೂಲ | 12.00 | 120 |
| | | **ಒಟ್ಟು** | | | | **32.00** | |
| 7 | ಬೀ.ಕೇಂ. ಗುಂಡೇರಿ | ಮುಂಗಾರು | ರಾಗಿ | GPU28 | ಮೂಲ | 5.00 | 100 |
| | | ಮುಂಗಾರು | ರಾಗಿ | KMR-4 | ಮೂಲ | 4.00 | 80 |
| | | ಮುಂಗಾರು | ತೊಗರಿ | TS-3R | ಮೂಲ | 2.00 | 25 |
| | | ಮುಂಗಾರು | ತೊಗರಿ | BRG-5 | ಮೂಲ | 3.00 | 45 |
| | | ಮುಂಗಾರು | ಮುಸುಕಿನ ಜೋಳ | Nitya-3 | ಮೂಲ | 2.00 | 50 |
| | | ಮುಂಗಾರು | ಹರಳು | DCH-32 | ಮೂಲ | 2.00 | 20 |
| | | **ಒಟ್ಟು** | | | | **18.00** | |
| 8 | ಬೀ.ಕೇಂ. ಹೊಸಳ್ಳಿ | ಮುಂಗಾರು | ಭತ್ತ | IR64 | ಮೂಲ | 12..00 | 750 |
| | | ಬೇಸಿಗೆ | ಭತ್ತ | IR64 | ಮೂಲ | 12.00 | 750 |

| ಕ್ರ. ಸಂ. | ಕ್ಷೇತ್ರದ ಹೆಸರು | ಹಂಗಾಮು | ಬೆಳೆ | ತಳಿ | ಬೀಜ ಉತ್ಪಾದನೆ ವರ್ಗ | ವಿಸ್ತೀರ್ಣ (ಹೆ. ಗಳಲ್ಲಿ) | ಬೀಜಗಳ ಬೇಡಿಕೆ (ಕೆ.ಜಿ. ಗಳಲ್ಲಿ) |
|---|---|---|---|---|---|---|---|
| | | **ಒಟ್ಟು** | | | | **24.00** | |
| 9 | ಭೈರಾಪುರ | ಮುಂಗಾರು | ಸಜ್ಜೆ | ICTP 8203 | ಮೂಲ | 1.60 | 12 |
| | | ಮುಂಗಾರು | ತೊಗರಿ | TS-3R | ಮೂಲ | 3.60 | 50 |
| | | ಮುಂಗಾರು | ರಾಗಿ | ML-365/ GPU-28 | ಮೂಲ | 8.40 | 150 |
| | | ಮುಂಗಾರು | ನವಣೆ | HMT-100-1 | ಪ್ರಮಾಣಿತ | 0.80 | 6 |
| | | **ಒಟ್ಟು** | | | | **14.40** | |
| 10 | ಬೀ.ಕೇಂ. ಬೆಳ್ತಂಗಡಿ | ಮುಂಗಾರು | ಭತ್ತ | MO4 | ಮೂಲ | **2.30** | 150 |
| | | **ಒಟ್ಟು** | | | | **2..30** | |
| 11 | ಬೀ.ಕೇಂ.ಆಳಂದ | ಮುಂಗಾರು | ತೊಗರಿ | TS-3R | ಮೂಲ | 4.00 | 50 |
| | | **ಒಟ್ಟು** | | | | **8.00** | |
| 12 | ಬೀ.ಕೇ. ಕೊಟ್ನೂರು | ಮುಂಗಾರು | ತೊಗರಿ | GRG-811 | ಮೂಲ | 6.00 | 45 |
| | | ಮುಂಗಾರು | ಉದ್ದು | TAU-1 | ಮೂಲ | 1.20 | 15 |
| | | ಮುಂಗಾರು | ಹೆಸರು | BGS-9 | ಮೂಲ | 1.20 | 15 |
| | | ಹಿಂಗಾರು | ಹಿಂ.ಜೋಳ | Phule Vasudha | ಮೂಲ | 1.20 | 10 |
| | | ಹಿಂಗಾರು | ಕಡಲೆ | A-1 | ಮೂಲ | 1.20 | 60 |
| | | **ಒಟ್ಟು** | | | | **10.80** | |
| 13 | ಬೀ.ಕೇ. ಚಂದಾಪುರ | ಮುಂಗಾರು | ತೊಗರಿ | TS-3R | ತಳಿವರ್ಧಕ | 8.00 | 50 |
| | | **ಒಟ್ಟು** | | | | **8.00** | |
| 14 | ಬೀ.ಕೇಂ. ರಟ್ಟೆಹಳ್ಳಿ | **ಜಟ್ರೋಫ & ಹೊಂಗೆಮರ ಬೆಳೆಯಲಾಗಿದೆ** | | | | | |
| 15 | ಬೀ.ಕೇಂ | **ಜೈವಿಕ ಇಂಧನ ಬೆಳೆಗಳಿರುತ್ತವೆ** | | | | | |

| ಕ್ರ. ಸಂ. | ಕ್ಷೇತ್ರದ ಹೆಸರು | ಹಂಗಾಮು | ಬೆಳೆ | ತಳಿ | ಬೀಜ ಉತ್ಪಾದನೆ ವರ್ಗ | ವಿಸ್ತೀರ್ಣ (ಹೆ. ಗಳಲ್ಲಿ) | ಬೀಜಗಳ ಬೇಡಿಕೆ (ಕೆ.ಜಿ. ಗಳಲ್ಲಿ) |
|---|---|---|---|---|---|---|---|
| | ನುಗು | | | | | | |
| 16 | ಬೀ.ಕೇಂ.ಹಳ್ಳಿಕೆರೆ | ಮುಂಗಾರು | ಭತ್ತ | Jyothi | ಮೂಲ | **6.40** | **250** |
| | | ಬೇಸಿಗೆ | ಭತ್ತ | Jyothi | ಪ್ರಮಾಣಿತ | **4.00** | **200** |
| | | ಬೇಸಿಗೆ | ಅಲಸಂದೆ | C-152 | ಪ್ರಮಾಣಿತ | **2.00** | **40** |
| | | **ಒಟ್ಟು** | | | | **12.40** | |
| 17 | ಬೀ.ಕೇಂ. ಕುಟ್ರಹಳ್ಳಿ | **ಯಾವುದೇ ಬೆಳೆ ಕಾರ್ಯಕ್ರಮ ಇರುವುದಿಲ್ಲ** | | | | | |
| 18 | ಬೀ.ಕೇಂ. ಚಿಕ್ಕನಹಳ್ಳಿ | ಮುಂಗಾರು | ರಾಗಿ | ML365 | ತಳಿವರ್ಧಕ | 2.00 | 20 |
| | | ಮುಂಗಾರು | ತೊಗರಿ | BRG2 | ತಳಿವರ್ಧಕ | 4.00 | 60 |
| | | **ಒಟ್ಟು** | | | | **6.00** | |
| 19 | ಬೀ.ಕೇಂ. ಕೋಟೇಶ್ವರ | ಮುಂಗಾರು | ಭತ್ತ | Bhadra MO4 | ಮೂಲ | 4.40 | 275 |
| | | **ಒಟ್ಟು** | | | | **4.40** | |
| 20 | ಬೀ.ಕೇಂ. ಹಳಿಯಾಳ | **ಯಾವುದೇ ಬೆಳೆ ಕಾರ್ಯಕ್ರಮ ಇರುವುದಿಲ್ಲ** | | | | | |
| 21 | ಬೀ.ಕೇಂ. ಹತ್ತಿಗೂಡೂರು | ಮುಂಗಾರು | ತೊಗರಿ | TS3R | ತಳಿವರ್ಧಕ | 4.00 | 50 |
| | | ಮುಂಗಾರು | ಹೆಸರು | BGS 9 | ಮೂಲ | 2.00 | 25 |
| | | ಹಿಂಗಾರು | ಹಿಂ.ಜೋಳ | M 35-1 | ತಳಿವರ್ಧಕ | 4.00 | 30 |
| | | ಹಿಂಗಾರು | ಕಡಲೆ | JAKI-9218 | ತಳಿವರ್ಧಕ | 2.00 | 100 |
| | | **ಒಟ್ಟು** | | | | **12.00** | |

## 2020-21ನೇ ಸಾಲಿನ ಬೀಜ ಅಧಿನಿಯಮ ಜಾರಿ ಬಗ್ಗೆ ಮಾರ್ಗಸೂಚಿ

ರಾಜ್ಯದ ರೈತರಿಗೆ ಉತ್ತಮ ಬಿತ್ತನೆ ಬೀಜಗಳನ್ನು ವಿತರಿಸುವ ಮುಖ್ಯ ಉದ್ದೇಶಕ್ಕಾಗಿ ಬೀಜ ಅಧಿನಿಯಮ 1966, ಬೀಜ ನಿಯಮಾವಳಿಗಳು 1968 ಮತ್ತು ಬೀಜ(ನಿಯಂತ್ರಣ) ಆದೇಶ 1983 ಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಸೇವಾ ಹಾಗೂ ಬೀಜ ಅಧಿನಿಯಮ ಅಡಿಯಲ್ಲಿ ಬೀಜ ಮಾದರಿಗಳನ್ನು ತೆಗೆಯಲು ಜಿಲ್ಲಾವಾರು ಕಾರ್ಯಕ್ರಮವನ್ನು 2020-21ನೇ ಸಾಲಿಗೆ ನಿಗದಿಗೊಳಿಸಲಾಗಿದೆ (ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ).

## ಗುರಿಯನ್ನು ನಿಗದಿಪಡಿಸುವ ಬಗ್ಗೆ:

ಈ ಗುರಿಯನ್ನು ನಿಗದಿಪಡಿಸುವಾಗ ಬೀಜ ಪರಿವೀಕ್ಷಕರ ಸಂಖ್ಯೆ, ಬೀಜ ವಿತರಣಾ ಸಂಸ್ಥೆಗಳ ಮತ್ತು ಒಟ್ಟು ವಾರ್ಷಿಕ ಬೀಜ ವಹಿವಾಟನ್ನು ಪರಿಗಣಿಸಲಾಗಿದೆ.

ಅ) ಜಿಲ್ಲೆಯಲ್ಲಿ ಬರುವ ಅಧಿಕೃತ ಬೀಜ ಮಾರಾಟ ಪರವಾನಗಿ ಪಡೆದಿರುವ ಎಲ್ಲಾ ಕೇಂದ್ರಗಳನ್ನು ಗಮನದಲ್ಲಿ ಇರಿಸಿಕೊಂಡು ಪ್ರತಿ ಕೇಂದ್ರದಲ್ಲಿ ಕನಿಷ್ಟ 2 ಮಾದರಿಗಳನ್ನು ಕಡ್ಡಾಯವಾಗಿ ತೆಗೆಯುವಂತೆ ಸೂಚಿಸುವುದು.

ಆ) ಸಕಾಲದಲ್ಲಿ ಬೀಜ ವಿಶ್ಲೇಷಣೆಯನ್ನು ಮಾಡಿ ಗುಣಮಟ್ಟವನ್ನು ಗಮನಿಸಲು ಅನುಕೂಲವಾಗುವಂತೆ ಹಂಗಾಮು ಪ್ರಾರಂಭದಲ್ಲಿ ಗರಿಷ್ಠ ಸಂಖ್ಯೆಯ ಗುರಿ ನಿಗದಿಪಡಿಸಲು ಕ್ರಮ ಕೈಗೊಳ್ಳುವುದು.

ಜಿಲ್ಲೆಗಳಿಗೆ ನೀಡಿದ ಒಟ್ಟು ಗುರಿಯ ಪೈಕಿ ಶೇಕಡಾ 70ರಷ್ಟು ನಿಜಚೀಟಿ ಮತ್ತು ಶೇಕಡಾ 30ರಷ್ಟು ಪ್ರಮಾಣಿತ ಬೀಜ ಮಾದರಿಗಳನ್ನು ತೆಗೆಯಲು ಜಿಲ್ಲೆಯ ಎಲ್ಲಾ ಬೀಜ ಪರಿ,ವೀಕ್ಷಕರುಗಳಿಗೆ ತಿಳಿಸುವುದು.

**ಜಿಲ್ಲೆಗಳಿಗೆ ನೀಡಿರುವ ಒಟ್ಟು ಗುರಿಯನ್ನು ಅವರುಗಳ ವ್ಯಾಪ್ತಿಯಲ್ಲಿನ ಪ್ರಕಟಿತ ಜಿಲ್ಲಾ ಪರಿವೀಕ್ಷಕರುಗಳಿಗೆ ಕೆಳಕಂಡಂತೆ ಗುರಿಯನ್ನು ಮರು ಹಂಚಿಕೆ ಮಾಡುವುದು ಮತ್ತು ವಿವರವನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.**

| | | |
|---|---|---|
| 1 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು | ಶೇ.01 |
| 2 | ಉಪ ಕೃಷಿ ನಿರ್ದೇಶಕರು I & II | ಶೇ.05 |
| 3 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು) | ಶೇ.10 |
| 4 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು (ವಿಚಕ್ಷಣ ದಳ) | ಶೇ.10 |
| 5 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ | ಶೇ.05 |

| | | |
|---|---|---|
| | ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು (ಮೌಲ್ಯ ಮಾಪನ) | |
| 6 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರ) | ಶೇ.04 |
| 7 | ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ | |
| 8 | ಕೃಷಿ ಅಧಿಕಾರಿಗಳು | ಶೇ.05 |
| 9 | ಉಪ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ | |
| 10 | ಕೃಷಿ ಅಧಿಕಾರಿಗಳು | ಶೇ.05 |
| 11 | ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು | ಶೇ.10 |
| 12 | ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಅಧಿಕಾರಿಗಳು | ಶೇ.05 |

ಜಂಟಿ ಕೃಷಿ ನಿರ್ದೇಶಕರುಗಳನ್ನೊಳಗೊಂಡಂತೆ ಎಲ್ಲಾ ಪ್ರಕಟಿತ ಜಿಲ್ಲಾ ಪರಿವೀಕ್ಷಕರುಗಳಿಗೆ ನಿಗದಿಪಡಿಸಿದ ಗುರಿಯಂತೆ ಬೀಜ ಮಾದರಿಯನ್ನು ತೆಗೆಯುವುದು.

ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ಬೀಜ ಮಾದರಿಗಳನ್ನು ಕಳುಹಿಸುವಾಗ ನಿಯಮಾನುಸಾರ ಮತ್ತು ನಿಗದಿತ ಪ್ರಮಾಣದಲ್ಲಿ ಕಳುಹಿಸಬೇಕು. ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು. ಅಂತಹ ಸಂದರ್ಭದಲ್ಲಿ ಬೀಜದ ಬೆಲೆ, ಅಂಚೆ ಮತ್ತು ಇತರೆ ಖರ್ಚುಗಳನ್ನು ಸಂಬಂಧಪಟ್ಟ ಬೀಜ ಪರಿವೀಕ್ಷಕರಿಂದ ವಸೂಲಿ ಮಾಡಬೇಕು. (ಅನುಬಂಧ 2 ರಿಂದ 8).

**ಜಂಟಿ ಕೃಷಿ ನಿರ್ದೇಶಕರು ಕೇಂದ್ರ ಕಛೇರಿಗೆ ಕಳುಹಿಸಬೇಕಾದ ವರದಿಗಳು:**

**ಅ. ಜಂಟಿ ಕೃಷಿ ನಿರ್ದೇಶಕರು ಕೇಂದ್ರ ಕಛೇರಿಗೆ ಪ್ರತಿ ಮಾಹೆಯ 10ರೊಳಗಾಗಿ ಪೂರ್ಣ ಕಾಲಂಗಳನ್ನು ಭರ್ತಿ ಮಾಡಿ ಕಳುಹಿಸಬೇಕಾದ ವರದಿಗಳು:**

| | | |
|---|---|---|
| 1 | ಬೀಜ ಅಧಿನಿಯಮ ಮಾದರಿ ಸಂಗ್ರಹಣೆ | ನಮೂನೆ-1 |
| 2 | ಕಡಿಮೆ ಗುಣಮಟ್ಟದ ಮಾದರಿಗಳು ಮತ್ತು ಕ್ರಮ ಕೈಗೊಂಡಿರುವುದು | ನಮೂನೆ-2 |
| 3 | ರೈತರಿಂದ, ಪತ್ರಿಕೆ ಪ್ರಕಟಣೆಯಿಂದ, ಇತರೆ ಮೂಲಗಳಿಂದ ಕಡಿಮೆ ಗುಣಮಟ್ಟದ ಬೀಜಗಳಿಂದ ಬೆಳೆ ಹಾನಿ ಬಗ್ಗೆ ಮತ್ತು ಬಂದ ದೂರುಗಳ ವಿವರಗಳು | ನಮೂನೆ-3 |

**ಆ. ಬೀಜ (ನಿಯಂತ್ರಣ) ಆದೇಶ 1983ರ ಅನ್ವಯ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾದ ವರದಿಗಳು:**

ಅ. ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗಿನ ಪ್ರಗತಿಯನ್ನು - ಅಕ್ಟೋಬರ್ 10 ರೊಳಗೆ

ಆ. ಏಪ್ರಿಲ್‌ನಿಂದ ನಿಂದ ಮಾರ್ಚ್ ವರೆಗಿನ ಪ್ರಗತಿಯನ್ನು - ಏಪ್ರಿಲ್ 10 ರೊಳಗೆ

(ವರದಿಯನ್ನು ಕೇಂದ್ರ ಸರ್ಕಾರದ ನಿಗಧಿತ ನಮೂನೆಯಲ್ಲಿ ಕಳುಹಿಸುವುದು)

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಪರವಾನಗಿ ಪಡೆದ ಬೀಜ ವಿತರಕರು ಮಾತ್ರ ಬೀಜ ಮಾರಾಟ ಮಾಡುವಂತೆ ನೋಡಿಕೊಳ್ಳುವುದು ಮತ್ತು ಚಾಲ್ತಿಯಲ್ಲಿ (Valid) ಇರುವ ಬೀಜ ಪರವಾನಗಿ ಪಡೆದ ಮಾರಾಟಗಾರರ ಮಾಹಿತಿಯನ್ನು ಕೇಂದ್ರ ಸರ್ಕಾರದ Website ನಲ್ಲಿ ಕಾಲಕಾಲಕ್ಕೆ Update ಮಾಡುವುದು.

ಜಿಲ್ಲೆಗಳಲ್ಲಿ ಜಂಟಿ ಕೃಷಿ ನಿರ್ದೇಶಕರುಗಳ ಮಟ್ಟದಲ್ಲಿ ನಡೆಯುವ ಮಾಸಿಕ / ದ್ವೈಮಾಸಿಕ ಪರಿಶೀಲನಾ ಸಭೆಗಳಿಗೆ, ಸಂಬಂಧಿಸಿದ ಸಹಾಯಕ ಕೃಷಿ ನಿರ್ದೇಶಕರುಗಳು ಬೀಜ ಪರೀಕ್ಷಾ ಪ್ರಯೋಗಾಲಯ ಇವರುಗಳನ್ನು ಆಹ್ವಾನಿಸಿ, ಅವರಿಂದ ಜಿಲ್ಲೆಗಳು ಸಾಧಿಸಿದ ಪ್ರಗತಿ, ಕಡಿಮೆ ಗುಣಮಟ್ಟದ ಮತ್ತು ತಿರಸ್ಕರಿಸಲಾದ ಮಾದರಿಗಳ ವಿವರಗಳನ್ನು ಪಡೆದು ಪರಿಶೀಲನೆ ಮಾಡುವುದು ಹಾಗೂ ಪ್ರಯೋಗಾಲಯದ ಮುಖ್ಯಸ್ಥರಿಂದ ಜಿಲ್ಲೆಯ ಬೀಜ ಪರಿವೀಕ್ಷಕರುಗಳಿಗೆ ತರಬೇತಿಯನ್ನು ಏರ್ಪಡಿಸುವುದು.

**ಬೀಜ ಅಧಿನಿಯಮದಡಿಯಲ್ಲಿ ಕಡಿಮೆ ಗುಣಮಟ್ಟ ಮಾದರಿಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮ:-**

ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರುಗಳು ಕಡಿಮೆ ಗುಣಮಟ್ಟದ ಬೀಜದ ವಿವರಗಳನ್ನು ಸಂಬಂಧಿಸಿದ ಬೀಜ ಪರೀಕ್ಷಾ ಪ್ರಯೋಗಾಲಯಗಳಿಂದಲೇ ಪ್ರತಿ ಮಾಹೆ ಪಡೆದು, ಬೀಜ ಪರಿವೀಕ್ಷಕವಾರು ತೆಗೆದುಕೊಂಡ ಕಾನೂನಿನ ಕ್ರಮದ ವರದಿಯನ್ನು ಸಲ್ಲಿಸುವುದು.

ಪ್ರಮಾಣೀಕರಿಸಿದ ಬೀಜ ಮಾದರಿಗಳು ಸಹ ವಿಶ್ಲೇಷಣೆಯಲ್ಲಿ ಕಡಿಮೆ ಗುಣಮಟ್ಟ ಎಂದು ವರದಿಯಾಗಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸುವುದು.

ಬೀಜ ಮಾದರಿ ತೆಗೆದು ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸಿ, ವಿಶ್ಲೇಷಣಾ ವರದಿ, ಪರಿವೀಕ್ಷಕರ ಕಛೇರಿಗೆ ತಲುಪುವ ಮುನ್ನ ಮಾದರಿ ತೆಗೆದ ಅಧಿಕಾರಿ ವರ್ಗಾವಣೆ ಅಥವಾ ಬಡ್ತಿ ಹೊಂದಿದಲ್ಲಿ ಸದರಿ ಅಧಿಕಾರಿಯ ಸ್ಥಾನದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿ ಮುಂದಿನ ಕ್ರಮ ಜರುಗಿಸಬೇಕಾಗಿರುತ್ತದೆ. ಹಾಗೂ ಮೊದಲನೇ ಅಧಿಕಾರಿ ಮಾದರಿ ತೆಗೆದ ಬಗ್ಗೆ ಅವರನ್ನು ಸಾಕ್ಷಿ ಎಂದು ಸಾಕ್ಷಿದಾರರ ಪರಾದಲ್ಲಿ ನಮೂದಿಸಬೇಕು. ಆದರೆ, ಮೊದಲಿದ್ದ ಅಧಿಕಾರಿಗೆ ಷೋಕಾಸ್ ನೋಟಿಸ್, ಮಾರಾಟ ತಡೆಯಾಜ್ಞೆ ಅಥವಾ ಇನ್ನಾವುದೇ ಕ್ರಮ ಜರುಗಿಸುವ ಅವಕಾಶವಿದ್ದಾಗ್ಯೂ ಅದಕ್ಕೆ ಗಮನಹರಿಸದೆ ಬಡ್ತಿ ಬರುವವರೆಗೆ ಅಥವಾ ವರ್ಗಾವಣೆಯಾಗುವವರೆಗೆ ವಿಳಂಬ ಮಾಡಿ ಬೇರೆಯವರಿಗೆ ಕಾರ್ಯಭಾರ ವಹಿಸಿದ ಪ್ರಸಂಗಗಳಲ್ಲಿ "ಕ್ಯಾಲೆಂಡರ್

ಆಫ್ ಇವೆಂಟ್" (Calendar of Events) ಪರಿಶೀಲಿಸಿ ಅವರಿಗೆ ಕಾರಣ ಕೇಳಿ ವಿಳಂಬಕ್ಕೆ ನೋಟಿಸ್ ನೀಡಬಹುದಾಗಿದೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ಮಾರಾಟಕ್ಕಿಟ್ಟ ಬೀಜ ದಾಸ್ತಾನಿನಿಂದ ಬೀಜ ಸಂಗ್ರಹಿಸಿ, ವಿಶ್ಲೇಷಣೆಗೊಳಪಡಿಸಿದಾಗ ಕಡಮೆ ಗುಣಮಟ್ಟ ಎಂದು ವರದಿಯಾದಲ್ಲಿ, ಸಂಬಂಧಿಸಿದ ಸರಬರಾಜುದಾರರ ವಿರುದ್ದ ಕಾನೂನು ಕ್ರಮ ಕೈಗೊಳ್ಳುವುದು.

**ಅ) ಕಡಿಮೆ ಗುಣಮಟ್ಟದ ಬೀಜಗಳಿಂದ ಬೆಳೆ ಹಾನಿಯಾದ ಬಗ್ಗೆ ದೂರುಗಳು ಬಂದಾಗ ಬೀಜ ಪರಿವೀಕ್ಷಕರು ಕೈಗೊಳ್ಳಬೇಕಾದ ಕ್ರಮ:-**

1. ರೈತರಿಂದ, ಪತ್ರಿಕಾ ಪ್ರಕಟಣೆಯಿಂದ, ಇತರೆ ಮೂಲಗಳಿಂದ ಕಡಿಮೆ ಗುಣಮಟ್ಟದ ಬೀಜಗಳಿಂದ ಬೆಳೆ

   ಹಾನಿಯ ಬಗ್ಗೆ ವರದಿ ಅಥವಾ ದೂರುಗಳು ಬಂದಾಗ ಬೀಜ ಪರಿವೀಕ್ಷಕರು ತಕ್ಷಣವೇ ಸ್ಪಂದಿಸಿ ಕೂಡಲೇ ಬೀಜದ ನಗದು ರಸೀದಿ ಪ್ಯಾಕೇಟ್, ಮಾರ್ಕ್ ಅಥವಾ ಲೇಬಲ್, ಉಳಿದ ಬೀಜ ಇವುಗಳನ್ನು ರೈತರಿಂದ ಪಡೆಯುವುದು.
2. ರೈತರಿಂದ ಉಳಿದ ಬೀಜಗಳನ್ನು ಪಡೆÀದು ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸುವುದು ಮತ್ತು ವಿಶ್ಲೇಷಣೆಯಲ್ಲಿ ಕಡಿಮೆ ಗುಣಮಟ್ಟವೆಂದುÀ ವರದಿಯಾದಲ್ಲಿ ಕಾನೂನಿನ ಕ್ರಮ ಕೈಗೊಳ್ಳವುದು
3. ಬೀಜ ಪೂರೈಕೆದಾರರು ಹಾಗೂ ಉತ್ಪಾದಕರ ವಿಳಾಸ ಖಚಿತಪಡಿಸಿಕೊಳ್ಳಬೇಕು.
4. ಆ ಲಾಟಿಗೆ ಸಂಬಂಧಿಸಿದ ಬೀಜ ಮಾದರಿ ಸಂಗ್ರಹಿಸಿ ಬೀಜ ವಿಶ್ಲೇಷಣೆಗೆ ಕಳುಹಿಸುವುದು.
5. ಸದರಿ ತಾಕನ್ನು ಕೃಷಿ ವಿಜ್ಞಾನಿಗಳು, ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಿಸಿದ ಸಂಸ್ಥೆಯ ಪ್ರತಿನಿಧಿಯೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡುವುದು.
6. ಬೆಳೆ ವಿಫಲತೆಗೆ ಕಾರಣ ತಿಳಿದ ನಂತರ ಈ ಬಗ್ಗೆ ರೈತರಿಗೆ ವಾಸ್ತವಾಂಶವನ್ನು ಮನವರಿಕೆ ಮಾಡಿಕೊಡುವುದು.
7. ಬೆಳೆ ವಿಫಲತೆಗೆ ಪರಿಹಾರ ಪಡೆಯಲು ರೈತರು ಇಚ್ಚಿಸಿದಲ್ಲಿ ಗ್ರಾಹಕರ ವೇದಿಕೆಯನ್ನು ಸಂಪರ್ಕಿಸಲು ತಿಳಿಸುವುದು.
8. ಜಂಟಿ ಪರಿಶೀಲನಾ ತಂಡದ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.
9. ಈ ಬಗ್ಗೆ ಸಂಬಂಧಪಟ್ಟ ಬೀಜ ಪರಿವೀಕ್ಷಕರಿಂದ ಕೈಗೊಂಡ ಕ್ರಮದ ವರದಿಯನ್ನು ಪಡೆದು ಸಂಬಂಧಪಟ್ಟವರಿಗೆ ಮತ್ತು ಕೇಂದ್ರ ಕಛೇರಿಗೆ ತಿಳಿಸುವುದು.
10. ಕಳಪೆ ಬಿತ್ತನೆ ಬೀಜದಿಂದಾಗಿ ಬೆಳೆ ಹಾನಿಯಾಗಿದ್ದಲ್ಲಿ, ಸಂಬಂಧಪಟ್ಟವರ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸಿ ಕೇಂದ್ರ ಕಛೇರಿಗೆ ವರದಿ ಮಾಡುವುದು.

11. ರೈತರು ಖರೀದಿಸಿದ ಕಳಪೆ ಬಿತ್ತನೆ ಬೀಜದಿಂದಾಗಿ ಬೆಳೆ ಹಾನಿಗೆ ಪರಿಹಾರಕ್ಕಾಗಿ ಗ್ರಾಹಕರ ವೇದಿಕೆಯಲ್ಲಿ ಸರಬರಾಜುದಾರರು / ಉತ್ಪಾದಕರÀ ವಿರುದ್ಧ ದೂರು ದಾಖಲಿಸಲು ತಿಳುವಳಿಕೆ ನೀಡುವುದು ಮತ್ತು ಇಲಾಖೆಯ ಅಧಿಕಾರಿಗಳ ವಿರುದ್ಧ ದೂರುಗಳು ದಾಖಲಿಸದಂತೆ ನಿಗಾ ವಹಿಸುವುದು (ಇಲಾಖೆಯ ಅಧಿಕಾರಿಗಳು ಬೀಜದ ಗುಣನಿಯಂತ್ರಣ ಅಧಿಕಾರಿ ಆಗಿರುವುದರಿಂದ).

ರಿಯಾಯಿತಿ ಯೋಜನೆಯಡಿಯಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ, ರೈತರು ಖರೀದಿಸಿದ ಬೀಜದ ಗುಣಮಟ್ಟದ ಬಗ್ಗೆ ದೂರುಗಳು ಬಂದಲ್ಲಿ, ಮೇಲೆ ತಿಳಿಸಿರುವಂತೆ ಕ್ರಮ ಕೈಗೊಂಡು, ರೈತರು ಪರಿಹಾರಕ್ಕಾಗಿ ಗ್ರಾಹಕರ ವೇದಿಕೆಯಲ್ಲಿ ಸರಬರಾಜುದಾರರ ವಿರುದ್ಧ ದೂರು ದಾಖಲಿಸಲು ತಿಳುವಳಿಕೆ ನೀಡುವುದು (ಟೆಂಡರ್ ಕರಾರಿನಂತೆ ಬೀಜದ ಗುಣಮಟ್ಟಕ್ಕೆ ಸಂಬಂಧಿಸಿದಂತೆ, ಸರಬರಾಜುದಾರರೇ ಹೊಣೆಗಾರರು ಆಗಿರುತ್ತಾರೆ ಇಲಾಖೆಯ ಅಧಿಕಾರಿಗಳಲ್ಲ). ಮಾರಾಟಕ್ಕಿಟ್ಟ ಬೀಜ ದಾಸ್ತಾನಿನಿಂದ ಬೀಜ ಸಂಗ್ರಹಿಸಿ, ವಿಶ್ಲೇಷಣೆಗೊಳಪಡಿಸಿದಾಗ ಕಡಿಮೆ ಗುಣಮಟ್ಟ ಎಂದು ವರದಿಯಾದಲ್ಲಿ, ಸಂಬಂಧಿಸಿದ ಸರಬರಾಜುದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು.

## ಅನುಬಂಧ-1

## 2020-21ನೇ ಸಾಲಿನಲ್ಲಿ ಬೀಜ ಅಧಿನಿಯಮ ಜಾರಿಗೊಳಿಸುವ ಸಲುವಾಗಿ ಜಿಲ್ಲಾವಾರು, ಹಂಗಾಮುವಾರು ಬೀಜ ಅಧಿನಿಯಮ ಮತ್ತು ಸೇವಾ ಮಾದರಿಗಳನ್ನು ತೆಗೆಯುವ ವಾರ್ಷಿಕ ಗುರಿ

| ಕ್ರ. ಸಂ | ಜಿಲ್ಲೆಗಳ ಹೆಸರು | ಮುಂಗಾರು | | | ಹಿಂಗಾರು/ಬೇಸಿಗೆ | | | ಒಟ್ಟು | | | ಬೀ.ಪ. ಪ್ರಯೋಗಾಲಯ |
|---|---|---|---|---|---|---|---|---|---|---|---|
| | | ಸೇವಾ | ಬೀಜ ಅ | ಒಟ್ಟು | ಸೇವಾ | ಬೀಜ ಅ | ಒಟ್ಟು | ಸೇವಾ | ಬೀಜ ಅ | ಒಟ್ಟು | |
| 1 | ಬೆಂಗಳೂರು | 680 | 455 | 1135 | 350 | 175 | 525 | 1030 | 630 | 1660 | ಹೆಬ್ಬಾಳ |
| 2 | ರಾಮನಗರ | 270 | 100 | 370 | 150 | 50 | 200 | 420 | 150 | 570 | ಹೆಬ್ಬಾಳ |
| 3 | ಮೈಸೂರು | 625 | 275 | 900 | 200 | 130 | 330 | 825 | 405 | 1230 | ಹೆಬ್ಬಾಳ |
| 4 | ಚಾಮರಾಜನಗರ | 250 | 140 | 390 | 125 | 100 | 225 | 375 | 240 | 615 | ಹೆಬ್ಬಾಳ |
| 5 | ಕೊಡಗು | 400 | 40 | 440 | 150 | 20 | 170 | 550 | 60 | 610 | ಹೆಬ್ಬಾಳ |
| 6 | ದಕ್ಷಿಣ ಕನ್ನಡ | 595 | 15 | 610 | 185 | 10 | 195 | 780 | 25 | 805 | ಹೆಬ್ಬಾಳ |
| 7 | ಉಡುಪಿ | 380 | 15 | 395 | 190 | 10 | 200 | 570 | 25 | 595 | ಹೆಬ್ಬಾಳ |
| 8 | ಹಾಸನ | 960 | 400 | 1360 | 440 | 190 | 630 | 1400 | 590 | 1990 | ಹೆಬ್ಬಾಳ |
| 9 | ಕೋಲಾರ | 445 | 175 | 620 | 290 | 100 | 390 | 735 | 275 | 1010 | ಹೆಬ್ಬಾಳ |
| 10 | ಚಿಕ್ಕಬಳ್ಳಾಪುರ | 550 | 230 | 780 | 250 | 125 | 375 | 800 | 355 | 1155 | ಹೆಬ್ಬಾಳ |
| 11 | ಮಂಡ್ಯ | 1095 | 330 | 1425 | 435 | 160 | 595 | 1530 | 490 | 2020 | ಹೆಬ್ಬಾಳ |
| 12 | ಧಾರವಾಡ | 575 | 275 | 850 | 400 | 130 | 530 | 975 | 405 | 1380 | ಧಾರವಾಡ |
| 13 | ಹಾವೇರಿ | 675 | 365 | 1040 | 350 | 180 | 530 | 1025 | 545 | 1570 | ಧಾರವಾಡ |
| 14 | ಗದಗ | 600 | 265 | 865 | 400 | 130 | 530 | 1000 | 395 | 1395 | ಧಾರವಾಡ |
| 15 | ಉತ್ತರ ಕನ್ನಡ | 615 | 65 | 680 | 215 | 35 | 250 | 830 | 100 | 930 | ಧಾರವಾಡ |
| 16 | ಬೆಳಗಾವಿ | 1020 | 490 | 1510 | 460 | 130 | 590 | 1480 | 620 | 2100 | ಧಾರವಾಡ |
| 17 | ಬಿಜಾಪುರ | 475 | 300 | 775 | 235 | 110 | 345 | 710 | 410 | 1120 | ಧಾರವಾಡ |
| 18 | ಬಾಗಲಕೋಟೆ | 500 | 310 | 810 | 200 | 150 | 350 | 700 | 460 | 1160 | ಧಾರವಾಡ |
| 19 | ದಾವಣಗೆರೆ | 734 | 682 | 1416 | 310 | 286 | 596 | 1044 | 968 | 2012 | ದಾವಣಗೆರೆ |
| 20 | ಚಿತ್ರದುರ್ಗ | 450 | 220 | 670 | 250 | 110 | 360 | 700 | 330 | 1030 | ದಾವಣಗೆರೆ |

| ಕ್ರ. ಸಂ | ಜಿಲ್ಲೆಗಳ ಹೆಸರು | ಮುಂಗಾರು | | | ಹಿಂಗಾರು/ಬೇಸಿಗೆ | | | ಒಟ್ಟು | | | ಬೀ.ಪ. ಪ್ರಯೋಗಾಲಯ |
|---|---|---|---|---|---|---|---|---|---|---|---|
| | | ಸೇವಾ | ಬೀಜ ಅ | ಒಟ್ಟು | ಸೇವಾ | ಬೀಜ ಅ | ಒಟ್ಟು | ಸೇವಾ | ಬೀಜ ಅ | ಒಟ್ಟು | |
| 21 | ತುಮಕೂರು | 1030 | 350 | 1380 | 410 | 130 | 540 | 1440 | 480 | 1920 | ದಾವಣಗೆರೆ |
| 22 | ಚಿಕ್ಕಮಗಳೂರು | 975 | 150 | 1125 | 375 | 70 | 445 | 1350 | 220 | 1570 | ದಾವಣಗೆರೆ |
| 23 | ಶಿವಮೊಗ್ಗ | 945 | 400 | 1345 | 425 | 180 | 605 | 1370 | 580 | 1950 | ದಾವಣಗೆರೆ |
| 24 | ಕೊಪ್ಪಳ | 750 | 230 | 980 | 300 | 120 | 420 | 1050 | 350 | 1400 | ಗಂಗಾವತಿ |
| 25 | ರಾಯಚೂರು | 440 | 155 | 595 | 255 | 130 | 385 | 695 | 285 | 980 | ಗಂಗಾವತಿ |
| 26 | ಗುಲ್ಬರ್ಗಾ | 450 | 190 | 640 | 220 | 90 | 310 | 670 | 280 | 950 | ಗಂಗಾವತಿ |
| 27 | ಯಾದಗಿರಿ | 525 | 120 | 645 | 225 | 55 | 280 | 750 | 175 | 925 | ಗಂಗಾವತಿ |
| 28 | ಬಳ್ಳಾರಿ | 1091 | 548 | 1639 | 505 | 294 | 799 | 1596 | 842 | 2438 | ಗಂಗಾವತಿ |
| 29 | ಬೀದರ್ | 400 | 210 | 610 | 200 | 100 | 300 | 600 | 310 | 910 | ಗಂಗಾವತಿ |
| | ಒಟ್ಟು | 18500 | 7500 | 26000 | 8500 | 3500 | 12000 | 27000 | 11000 | 38000 | |

ಬೀಜ ಅ= ಬೀಜ ಅಧಿನಿಯಮ

## ಅನುಬಂಧ - 2

## ಬೀಜ ಪರಿವೀಕ್ಷಕರು ಗಮನಿಸಬೇಕಾದ ಅಂಶಗಳು

### ಬೀಜ ಪರಿವೀಕ್ಷಕರ ಪ್ರಮುಖ ಅಧಿಕಾರಗಳು / ಕರ್ತವ್ಯಗಳು (ಬೀಜ ಕಾಯ್ದೆಯ ಸೆಕ್ಷನ್-14ರ ಪ್ರಕಾರ)

1. ಬೀಜ ಕಾಯ್ದೆಗಳನ್ವಯ ಬೀಜ ಪರಿವೀಕ್ಷಕರು ಬೀಜಗಳನ್ನು ದಾಸ್ತಾನು ಮಾಡಿರುವ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಿರುವ ಯಾವುದೇ ಆವರಣನ್ನು ಪ್ರವೇಶಿಸಿ ಶೋಧಿಸಬಹುದು.
2. ಮಾರಾಟಕ್ಕಾಗಿ ರಫ್ತು ಅಥವಾ ಆಮದಿಗಾಗಿ ಇಡಲಾಗಿರುವ ಬೀಜಗಳಿಂದ ವಿಶ್ಲೇಷಣೆಗಾಗಿ ಮಾದರಿಯನ್ನು ತೆಗೆದುಕೊಳ್ಳುವುದು.
3. ಈ ಆಜ್ಞೆಯ ಯಾವುದೇ ಪ್ರಕರಣಗಳನ್ನು ಅಥವಾ ಉಲ್ಲಂಘಿಸಲಾಗುತ್ತದೆ ಎಂದು ನಂಬಲು ಅವನಿಗೆ ಕಾರಣವಿರುವಾಗ ಯಾವುದೇ ಬೀಜಗಳ ವಿತರಣೆಯನ್ನು ತಡೆಹಿಡಿಯಬಹುದು.
4. ಈ ಆಜ್ಞೆಯ ಯಾವುದೇ ಪ್ರಕರಣಗಳನ್ನು ಅಥವಾ ಉಲ್ಲಂಘಿಸಲಾಗುತ್ತದೆ ಎಂದು ನಂಬಲು ಅವನಿಗೆ ಕಾರಣವಿರುವಾಗ ಯಾವುದೇ ಬೀಜಗಳಿಗೆ ಸಂಬಂಧಿಸಿದ ಲೆಕ್ಕದ ಪುಸ್ತಕಗಳು/ದಾಖಲೆಗಳನ್ನು ಪರಿಶೀಲಿಸಿ ವಶಪಡಿಸಿಕೊಂಡು ಲೈಸನ್ಸ್ ರದ್ದು/ಅಮಾನತ್ತುಪಡಿಸಲು ಶಿಫಾರಸ್ಸು ಮಾಡಬಹುದು.
5. ಬೀಜ ಮಾದರಿಗಳನ್ನು ಪರೀಕ್ಷೆಗೊಳಪಡಿಸಲು ಸಂಗ್ರಹಿಸಿದ ಮಾದರಿಗಳ ಬೆಲೆಯನ್ನು ಮಾರಾಟಗಾರರಿಗೆ ನೀಡುವುದು.
6. ಬೀಜ ಮಾರಾಟ ಮಳಿಗೆಗಳಿಂದ ಬೀಜ ಮಾದರಿಗಳನ್ನು ಸಂಗ್ರಹಿಸಿ ಇಲಾಖೆಯ ಬೀಜ ಪರೀಕ್ಷಾ ಪ್ರಯೋಗಾಲಯಗಳಲ್ಲಿ ವಿಶ್ಲೇಷರಂಣೆಗೊಳಪಡಿಸುವುದು.
7. ಬೀಜ ಪರೀಕ್ಷೆಯಿಂದ ಬಿತ್ತನೆ ಬಿಜವು ಕಡಿಮೆ ಗುಣಮಟ್ಟದ್ದೆಂದು ವರದಿಯಾದಲ್ಲಿ, ಅಂತಹ ಬೀಜ ಮಾರಾಟಗಾರರು ಮತ್ತು ಬೀಜೋತ್ಪಾದಕರ ಮೇಲೆ ಬೀಜ ಕಾಯ್ದೆಯಗಳಡಿಯಲ್ಲಿ ಕ್ರಮ ಜರುಗಿಸುವುದು.
8. ಯಾವುದೇ ಅಧಿಸೂಚಿತ ವಿಧದ ಇಲ್ಲವೇ ಜಾತಿಯ ಬೀಜ ಇರಬಹುದಾದ ಯಾವುದೇ ಕೋಶವನ್ನು ಒಡೆದು ನೋಡುವ ಅಧಿಕಾರವು ಸೇರಿದೆ. ಪರಂತು ಆ ನಿವೇಶನದ ಮಾಲಿಕ ಅದರ ಬಾಗಿಲನ್ನು ತೆರೆಯಲು ನಿರಾಕರಿಸಿದ ಪಕ್ಷದಲ್ಲಿ ಮಾತ್ರ ಬಾಗಿಲನ್ನು ಒಡೆಯುವ ಅಧಿಕಾರವನ್ನು ಉಪಯೋಗಿಸತಕ್ಕದ್ದು.
9. ಬೀಜಗಳ ಮಾದರಿ ತೆಗೆದುಕೊಳ್ಳುವಾಗ ಇಬ್ಬರನ್ನು ಹಾಜರುಪಡಿಸಿಕೊಂಡು ಅವರ ಸಮಕ್ಷಮ ತೆಗೆದುಕೊಳ್ಳಬೇಕು ಹಾಗೂ ಆ ಕಾಲಕ್ಕೆ ಮಾಡಿದ ಪಂಚನಾಮೆಗೆ ಅವರಿಬ್ಬರ ಸಹಿ ತೆಗೆದುಕೊಳ್ಳಬೇಕು.

**ಬೀಜ ಮಾದರಿಗಳನ್ನು ತೆಗೆಯುವಾಗ ಪಾಲಿಸಬೇಕಾದ ಕ್ರಮಗಳು (ಸೆಕ್ಷನ್-15ರ ಪ್ರಕಾರ):**

1. ಬೀಜಗಳ ಮಾದರಿ ತೆಗೆದುಕೊಳ್ಳುವ ಬಗ್ಗೆ ಬೀಜ ಮಾರಾಟಗಾರರಿಗೆ ಫಾರಂ-6ರಲ್ಲಿ (ಅನುಬಂಧ-6) ನೋಟೀಸ್ ನೀಡಬೇಕು ಮತ್ತು ಫಾರಂ-8ರಲ್ಲಿ ಬೀಜ ಮಾದರಿ ತೆಗೆದು ಅದರ ಬೆಲೆಯನ್ನು ಪಾವತಿಸಿದ ಬಗ್ಗೆ (ಅನುಬಂಧ-8).
2. ಮೂರು ಮಾದರಿಗಳನ್ನು ತೆಗೆದುಕೊಳ್ಳಬೇಕು ಹಾಗೂ ಅವುಗಳ ಮೇಲೆ ಗುರುತಿನ ನಿಶಾನೆ ಅಥವಾ ಸೀಲ್ ಹಾಕಿ ಸರಿಯಾಗಿ ಪ್ಯಾಕ್ ಮಾಡಬೇಕು. ಒಂದು ಪೊಟ್ಟಣವನ್ನು ಬೀಜ ಮಾರಾಟಗಾರನಿಗೆ ಕೊಡಬೇಕು.
3. ಇನ್ನೊಂದು ಪೊಟ್ಟಣವನ್ನು ಅವಶ್ಯವಿದ್ದಲ್ಲಿ ನ್ಯಾಯಾಲಯದಲ್ಲಿ ಹಾಜರುಪಡಿಸುವ ಸಲುವಾಗಿ ಅಥವಾ ಕೇಂದ್ರ ಬೀಜ ವಿಶ್ಲೇಷಣಾಲಯಕ್ಕೆ ಪರೀಕ್ಷೆಗೆ ಕಳುಹಿಸುವ ಕುರಿತು ಬೀಜ ಪರಿವೀಕ್ಷಕನು ತನ್ನ ವಶದಲ್ಲಿಟ್ಟುಕೊಳ್ಳಬೇಕು.
4. ಇನ್ನೊಂದು ಪೊಟ್ಟಣವನ್ನು ಬೀಜ ವಿಶ್ಲೇಷಕರಿಗೆ ಪರೀಕ್ಷೆಗೆ ಕಳುಹಿಸಿಕೊಡಬೇಕು.
5. ಬೀಜದ ಗುಣಮಟ್ಟದ ಬಗ್ಗೆ ಸಂಶಯವಿದ್ದಲ್ಲಿ, ಬೀಜ ಮಾರಾಟಗಾರರಿಗೆ ಮಾರಾಟ ತಡೆಯಾಜ್ಞೆ ನೀಡಿ/ದಾಸ್ತಾನು ವಶಪಡಿಸಿಕೊಂಡು ಸಂಗ್ರಹಿಸುವ ಬೀಜ ಮಾದರಿಗಳನ್ನು ಅತ್ಯಂತ ಶೀಘ್ರವಾಗಿ ಮುದ್ದಾಂ ಪ್ರಯೋಗಾಲಯಕ್ಕೆ ತಲುಪಿಸುವುದು. ಇಂತಹ ಮಾದರಿಗಳನ್ನು ಆಧ್ಯತೆ ಮೇರೆಗೆ ಶೀಘ್ರವಾಗಿ ವಿಶ್ಲೇಷಣೆ ಮಾಡಿ ವರದಿ ನೀಡಲು ಪ್ರಯೋಗಾಲಯಗಳಿಗೆ ಸೂಚಿಸಲಾಗಿದೆ. ಇಂತಹ ಮಾದರಿಗಳನ್ನು ಕೆಂಪು ಶಾಹಿಯಲ್ಲಿ ಶೀಘ್ರ ಎಂದು ನಮೂದಿಸಿ ಕಳುಹಿಸುವುದು.
6. ಬೀಜ ಪರಿವೀಕ್ಷಕರು ಯಾವುದೇ ಮಾರಾಟಗಾರರ ಬೀಜವನ್ನು ಜಪ್ತಿ ಮಾಡಿದಲ್ಲಿ, ಜಪ್ತಿ ಮಾಡಿದ ಬೀಜವು ಪ್ರಕರಣ-7ರ ಅಂಶಗಳಿಗೆ ವಿರುದ್ಧವಾಗಿರುವುದಿಲ್ಲವೆಂದು ಕಂಡು ಬಂದಲ್ಲಿ, ಅಂತಹ ಬೀಜ ಮಾರಾಟಕ್ಕೆ ತಡೆಯಾಜ್ಞೆ ನೀಡಿದಲ್ಲಿ, ಕೂಡಲೇ ಆ ತಡೆಯಾಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಹಾಗೂ ಜಪ್ತಿ ಮಾಡಿದ ಬೀಜವನ್ನು ಕೂಡಲೇ ಬೀಜ ಮಾರಾಟಗಾರರಿಗೆ ಹಿಂತಿರುಗಿಸಬೇಕು.
7. ಬೀಜ ಜಪ್ತಿ ಮಾಡಿದ ವಿಷಯವನ್ನು ಅಧಿಕಾರ ಹೊಂದಿದ ನ್ಯಾಯ ದಂಡನಾಧಿಕಾರಿಗಳಿಗೆ ತಿಳಿಸಿ,

   ಅವುಗಳನ್ನು ವಶದಲ್ಲಿಟ್ಟುಕೊಳ್ಳುವ ಬಗ್ಗೆ ಅವರ ಆದೇಶನ್ನು ಪಡೆಯತಕ್ಕದ್ದು.
8. ಬೀಜದಲ್ಲಿಯ ದೋಷವನ್ನು ಬೀಜ ಮಾರಾಟಗಾರನು ಸರಿಪಡಿಸಬಹುದಾಗಿದ್ದರೆ, ಅಂತಹ ದೋಷವನ್ನು ಸರಿಪಡಿಸಿದ ಕೂಡಲೇ ಬೀಜ ಮಾರಾಟ ನಿಲುಗಡೆ ಆದೇಶವನ್ನು ಹಿಂದಕ್ಕೆ ಪಡೆಯಬೇಕು.

9. ಬೀಜ ಮಾರಾಟಗಾರನಿಂದ ಬೀಜದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು, ರಿಜಿಸ್ಟರುಗಳನ್ನು ಜಪ್ತಿ ಮಾಡಿದರೆ, ಆ ಸಂಗತಿಯನ್ನು ಅಧಿಕಾರ ಹೊಂದಿದ ನ್ಯಾಯ ದಂಡನಾಧಿಕಾರಿಗಳಿಗೆ ತಿಳಿಸಿ, ಅವುಗಳನ್ನು ವಶದಲ್ಲಿಟ್ಟುಕೊಳ್ಳುವ ಬಗ್ಗೆ ಅವರ ಆದೇಶವನ್ನು ಪಡೆಯತಕ್ಕದ್ದು.

## ಅನುಬಂಧ - 3

1. ಬೀಜ ಅಧಿನಿಯದ ಮಾದರಿಗಳನ್ನು ಸಂಗ್ರಹಿಸುವಾಗ ಬೀಜ ಪರೀಕ್ಷಾ ಪ್ರಯೋಗಾಲಯಗಳಿಗೆ ಕಳುಹಿಸಿಕೊಡುವಾಗ ಗಮನಿಸಬೇಕಾದ ಮುಖ್ಯ ಅಂಶಗಳು.
2. ಮಾದರಿಯನ್ನು ಸ್ವಚ್ಛವಾದ ಒಣಗಿದ ಬಟ್ಟೆಯ ಚೀಲ ಅಥವಾ ಪ್ಲಾಸ್ಟಿಕ್ ಚೀಲದಲ್ಲಿ ಸಂಗ್ರಹಿಸಬೇಕು.
3. ಮೊಳಕೆ ಹಾಗೂ ಶುದ್ಧತೆ ಪರೀಕ್ಷೆಗೆ ಬಟ್ಟೆ ಚೀಲದಲ್ಲಿ ಮತ್ತು ತೇವಾಂಶದ ಪರೀಕ್ಷೆಗೆ 700ಗೇಜ್ ಪ್ಲಾಸ್ಟಿಕ್ ಚೀಲದಲ್ಲಿ ಮಾದರಿಯನ್ನು ಸಂಗ್ರಹಿಸಬೇಕು.
4. ಪ್ರತಿ ಬೆಳೆಗೆ ನಿಗದಿಪಡಿಸಿರುವ ಪ್ರಮಾಣದ ಮಾದರಿಯನ್ನು ವಿಶ್ಲೇಷಣೆಗೆ ಕಳುಹಿಸಿಕೊಡಬೇಕು (ತೇವಾಂಶದ ಪರೀಕ್ಷೆಗೆ ದಪ್ಪ ಬೀಜಗಳಾದರೆ 100ಗ್ರಾಂ ಮತ್ತು ಸಣ್ಣ ಬೀಜಗಳಾದರೆ 50ಗ್ರಾಂ).
5. ಮಾದರಿಯ ಬಗ್ಗೆ ಮಾಹಿತಿಯನ್ನು (ಅನುಬಂಧ-5) ಭರ್ತಿ ಮಾಡಿ, ಮಾದರಿಯನ್ನು ಪೊಟ್ಟಣದಲ್ಲಿಟ್ಟು ಕಳುಹಿಸಿಕೊಡಬೇಕು.
6. ಮಾದರಿಯನ್ನು ಬಟ್ಟೆಯ ಚೀಲದಲ್ಲಿ ಸಂಗ್ರಹಿಸಿ, ಅದರೊಂದಿಗೆ ತೇವಾಂಶ ಪರೀಕ್ಷೆಯ ಮಾದರಿ ಮತ್ತು ಮಾದರಿ ಬಗ್ಗೆ ಮಾಹಿತಿಯ ಚೀಟಿಯನ್ನಿಟ್ಟು ದಾರದಿಂದ ಕಟ್ಟಿರಬೇಕು.
7. ಈ ಬಟ್ಟೆಯ ಚೀಲವನ್ನು ಕಾಗದದ ಚೀಲದಲ್ಲಿಟ್ಟು ಹೊಲೆದು ನಂತರ ದಾರದಿಂದ ಕಟ್ಟಬೇಕು. ಕಾಗದದ ಎರಡು ಕಡೆ ದಾರದ ಗಂಟಿನ ಮೇಲೆ ಹಾಗೂ ದಾರದ ಇನ್ನೊಂದು ಕಡೆ ಅರಗಿನಿಂದ ಸೀಲ್ ಮಾಡಿ ಲೋಹದ ಮೊಹರನ್ನು ಹಾಕಬೇಕು.
8. ಪ್ರತಿ ಮಾದರಿಯೊಂದಿಗೆ ಪ್ರಪತ್ರ-5ನ್ನು (ಅನುಬಂಧ-7) ಪ್ರತ್ಯೇಕವಾಗಿ ಮತ್ತು ಮೊಹರಿನ ಮುದ್ರೆಯ ಮಾದರಿಯನ್ನು ದೃಢೀಕರಿಸಿರುವ ಪತ್ರವನ್ನು ಬೀಜ ಪರೀಕ್ಷಾ ಪ್ರಯೋಗಾಲಯಗಳಿಗೆ ಕಳುಹಿಸಿಕೊಡಬೇಕು.
9. ಬೀಜ ಮಾದರಿಯನ್ನು ಸಂಗ್ರಹಿಸಿದ ನಂತರ ಜರೂರಾಗಿ ನಿಗದಿಪಡಿಸಿರುವ ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸಿಕೊಡಬೇಕು.
10. ಬೀಜ ಮಾದರಿಯನ್ನು ರವಾನೆ ಸಮಯದಲ್ಲಿ ಹಾನಿಯಾಗದಂತೆ ಅಥವಾ ತಡವಾಗಿ ತಲುಪದಂತೆ ವ್ಯವಸ್ಥಿತ ರೀತಿಯಲ್ಲಿ ಮಾದರಿಗಳನ್ನು ಕಳುಹಿಸಿಕೊಡಬೇಕು.

## ಅನುಬಂಧ - 4

## ಬೀಜ ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಒಪ್ಪಿಸಬೇಕಾದ ಬೀಜ ಮಾದರಿಯ ಪ್ರಮಾಣ

**(ಗ್ರಾಂಗಳಲ್ಲಿ)**

| | |
|---|---|
| ಬಾರ್ಲಿ, ಗೋಧಿ, ಮುಸುಕಿನ ಜೋಳ, ಕಡಲೆ, ಅಲಸಂದೆ, ಬೀನ್ಸ್, ಹೆಸರು, ಬಟಾಣಿ, ತೊಗರಿ, ಹರಳು, ನೆಲಗಡಲೆ, ಕುಸುಬೆ, ಸೂರ್ಯಕಾಂತಿ (ತಳಿಗಳು), ಹತ್ತಿ (ಲಿಂಟೆಡ್ ತಳಿ), ಗೋರಿಕಾಯಿ, ಓಟ್ಸ್, ಹಾಗಲ, ಪಡುವಲ, ತುಪ್ಪಹೀರೆ, ಕಲ್ಲಂಗಡಿ, ದಯಾಂಚ. | 1000 |
| ಜೋಳ. ದಯಾಂಚ. | 900 |
| ಪುಂಡಿ, ಸನ್‌ಹೆಂಪ್, ಬೂದುಗುಂಬಳ, ಸೋರೆಕಾಯಿ. | 700 |
| ಲಿಂಟಲ್, ಹೆಂಪ್, | 600 |
| ಹುರುಳಿ, ವೆಲ್ ವೆಟ್, ಬೀನ್, ಬೀಟ್‌ರೂಟ್, ಪಾಲಕ. | 500 |
| ಭತ್ತ, ಧನಿಯ | 400 |
| ಹತ್ತಿ (ಡಿಲಿಂಟೆಡ್ ತಳಿ, ಲಿಂಟೆಡ್ ಹೈಬ್ರೀಡ್) ಕುಂಬಳಕಾಯಿ. | 500 |
| ಮೂಲಂಗಿ | 400 |
| ಸೂರ್ಯಕಾಂತಿ (ಹೈಬ್ರೀಡ್), ಹತ್ತಿ (ಹೈಬ್ರೀಡ್ ಲಿಂಟೆಡ್) | 350 |
| ಸೂಡಾನ್ ಹುಲ್ಲು, ಸೀಮೆಬದನೆ, ತೊಂಡೆ. | 300 |
| ಸಾಸಿವೆ. | 250 |
| ಬಾಜ್ರ, ನೇಪಿಯರ್ ಹುಲ್ಲು, ಸೌತೆ, ಕರಬೂಜ, ಬದನೆ, ಮೆಣಸಿನಕಾಯಿ, ದಪ್ಪ ಮೆಣಸಿನಕಾಯಿ. | 160 |
| ಸೆಣಬು, ಹೂಕೋಸು, ಎಲೆಕೋಸು, ಗೆಡ್ಡೆಕೋಸು. | 150 |
| ನವಣೆ | 180 |
| ಗಂಡು ಭತ್ತ, ಈರುಳ್ಳಿ, | 90 |
| ಟೊಮ್ಯಾಟೋ (ತಳಿ), ದಂಟು. | 80 |
| ರಾಗಿ. | 70 |
| ಕುದುರೆ ಮಸಾಲೆ. | 60 |
| ಮಾರ್ವೆಲ್ ಹುಲ್ಲು, ಪ್ಯಾರಾ ಹುಲ್ಲು, ಗಜ್ಜರಿ. | 50 |
| ಬಫೆಲ್ ಹುಲ್ಲು, ಜಿನಿವಾ ಹುಲ್ಲು, ಸಿಬೇರಿ ಹುಲ್ಲು. | 30 |
| ಗಸಗಸೆ, ತಂಬಾಕು. | 25 |
| ಟೊಮ್ಯಾಟೋ ಹೈಬ್ರೀಡ್. | 7 |

## ಅನುಬಂಧ - 5 ಬೀಜ ಮಾದರಿಯೊಂದಿಗೆ ಕಳುಹಿಸಬೇಕಿರುವ ಮಾಹಿತಿ

| | | |
|---|---|---|
| 1 | ಕ್ರಮ ಸಂಖ್ಯೆ: | |
| 2 | ಮಾದರಿ ತೆಗೆದವರ ಹೆಸರು ಮತ್ತು ವಿಳಾಸ: | |
| 3 | ಮಾದರಿ ತೆಗೆದ ದಿನಾಂಕ: | |
| 4 | ಬೀಜ ಮಾರಾಟಗಾರರ ವಿಳಾಸ: | |
| 5 | ಬೀಜೋತ್ಪಾದಕರ ವಿಳಾಸ: | |
| 6 | ಬೆಳೆ ಮತ್ತು ತಳಿ | |
| 7 | ಬೀಜದ ವರ್ಗ: | ಮೂಲ/ಪ್ರಮಾಣಿತ/ನಿಜಚೀಟಿ |
| 8 | ಲಾಟ್ ಸಂಖ್ಯೆ: | |
| 9 | ಲಾಟಿನಲ್ಲಿರುವ ದಾಸ್ತಾನು ಪ್ರಮಾಣ: | |
| 10 | ಪರೀಕ್ಷಿಸಬೇಕಾದ ವಿವರ: | ಅ) ಮೊಳಕೆ ಪ್ರಮಾಣ |
| | | ಆ) ಶುದ್ಧತೆ |
| | | ಇ) ತೇವಾಂಶ |
| 11 | ಮಾದರಿಗೆ ಬೆರಸಿರುವ ರಕ್ಷಿತ ರಾಸಾಯನಿಕ ಮತ್ತು ಪ್ರಮಾಣ: | |

ಬೀಜ ಪರಿವೀಕ್ಷಕರ ಸಹಿ

ಬೀಜ ಮಾದರಿಯನ್ನು ನನ್ನ ಸಮಕ್ಷಮದಲ್ಲಿ ತೆಗೆದಿದೆ ಮತ್ತು ಮೊಹರು ಮಾಡಿದೆ. ಮಾದರಿಯ ಒಂದು ಭಾಗವನ್ನು ನನ್ನ ವಶಕ್ಕೆ ಪಡೆದಿರುತ್ತೇನೆ.

## ಅನುಬಂಧ – 6

ಪ್ರಪತ್ರ - 6

................................

.................................

ನಾನು ಬೀಜ ವಿಶ್ಲೇಷಣೆಗಾಗಿ ನಿಮ್ಮ ದಾಸ್ತಾನಿಂದ ಬೀಜ ಮಾದರಿಯನ್ನು --------- ನೋಟೀಸನ್ನು ನೀಡುತ್ತಿದ್ದೇನೆ.

ದಿನಾಂಕ ಬೀಜ ಪರಿವೀಕ್ಷಕರು

## ಅನುಬಂಧ – 7

ಪ್ರಪತ್ರ - 5

ಬೀಜ ವಿಶ್ಲೇಷಕರಿಗೆ ಜ್ಞಾಪನಾ ಪತ್ರ

ಜ್ಞಾಪನಾ ಪತ್ರದ ಸಂಖ್ಯೆ:

.............................................

.............................................

..............................................

ಬೀಜ ವಿಶ್ಲೇಷಕರು

...........................................

.........................................  ಇವರಿಗೆ:

ಈ ಮುಂದೆ ವಿವರಿಸಿದ ಮಾದರಿಯನ್ನು 1966ನೇ ಇಸವಿಯ ಬೀಜಗಳ ಅಧಿನಿಯಮದ 14ನೇ ಪ್ರಕರಣದ (1) ನೇ ಉಪ ಪ್ರಕರಣದ (ಬಿ) ಖಂಡದ ಮತ್ತು / ಅಥವಾ 15ನೇ ಪ್ರಕರಣದ 2ನೇ ಉಪ ಪ್ರಕರಣದ (ಬಿ) ಮತ್ತು (ಸಿ) ಖಂಡಗಳ ಮೇರೆಗೆ ಮತ್ತು ವಿಶ್ಲೇಷಣೆಗಾಗಿ ಇದರೊಡನೆ ಕಳುಹಿಸಲಾಗಿದೆ.

1. ಮಾದರಿಯ ಕ್ರಮ ಸಂಖ್ಯೆ:

2. ಮಾದರಿಯನ್ನು ಪಡೆದುಕೊಂಡ ದಿನಾಂಕ ಮತ್ತು ಸ್ಥಳ:

ಈ ಜ್ಞಾಪನಾ ಪತ್ರದ ಒಂದು ಪ್ರತಿಯನ್ನು ಮತ್ತು ಮಾದರಿಗಳ ಪ್ಯಾಕೆಟ್ಟಿಗೆ ಮೊಹರು ಹಾಕಲು ಬಳಸಿದ ಮೊಹರಿನ ಮುದ್ರೆಯ ಮಾದರಿಯನ್ನು ಪ್ರತ್ಯೇಕವಾಗಿ ಅಂಚೆಯ ಮೂಲಕ / ಖುದ್ದಾಗಿ ಕಳುಹಿಸಲಾಗಿದೆ.

ಬೀಜ ಪರಿವೀಕ್ಷಕರು

## ಅನುಬಂಧ- 8

ಪ್ರಪತ್ರ - 8

ಇವರಿಗೆ:

................................

..................................

ನಾನು ಈ ದಿನ ------ ರಲ್ಲಿರುವ ---------- ಆವರಣದಿಂದ ವಿಶ್ಲೇಷಕರಿಂದ ವಿಶ್ಲೇಷಣೆಗಾಗಿ ಕೆಳಗೆ ತಿಳಿಸಿರುವ ಬೀಜ ಮಾದರಿಗಳನ್ನು ತೆಗೆದಿರುತ್ತೇನೆ.

ತೆಗೆದ ಮಾದರಿಗಳ ವಿವರ

................................

..................................

..................................

...................................

ಮಾದರಿಯ ಬೆಲೆಯನ್ನು ಕೇಳಲಾಗಿದೆಯೇ

ಮಾದರಿಯ ಬೆಲೆ ರೂ. ------- ಗಳನ್ನು ಪಾವತಿಸಿದೆ.

ದಿನಾಂಕ : ಬೀಜ ಪರಿವೀಕ್ಷಕರು

ವ್ಯಾಪ್ತಿ

ಯಾರ ಆವರಣದಿಂದ ಮಾದರಿಯನ್ನು ತೆಗೆಯಲಾಗಿದೆ ಹಾಗೂ ಯಾರಿಗೆ ಹಣವನ್ನು ಪಾವತಿಸಿದೆ ಅವರ ಸಹಿ.

## ನಮೂನೆ-1

## 2020-21ನೇ ಸಾಲಿನ ಬೀಜ ಅಧಿನಿಯಮ ಜಾರಿಯ ಮಾಸಿಕ ಪ್ರಗತಿ - ಮಾದರಿ ತೆಗೆದ ಬಗ್ಗೆ ಸಾಧನೆ

**ತಿಂಗಳು :** **ಜಿಲ್ಲೆ:**

| ಕ್ರ. ಸಂ. | ಜಿಲ್ಲೆಯ ಒಟ್ಟು ಬೀಜ ಪರಿವೀಕ್ಷಕರ ವಿವರ (ಪದನಾಮ) | ವಾರ್ಷಿಕ ಗುರಿ | | ಸೇವಾ ಮಾದರಿಗಳು | | | ಬೀಜ ಅಧಿನಿಯಮ | | | ಬೀಜ ನಿಯಂತ್ರಣ ಆದೇಶ | | | ಒಟ್ಟು ಗುಣಮಟ್ಟವಿಲ್ಲದ ಮಾದರಿಗಳ ಸಂಖ್ಯೆ | | |
|---|---|---|---|---|---|---|---|---|---|---|---|---|---|---|---|
| | | ಸೇವಾ ಮಾದರಿಗಳು | ಬೀಜ ಅಧಿನಿಯಮ | ಕಳೆದ ತಿಂಗಳು | ಪ್ರಸಕ್ತ ತಿಂಗಳು | ಒಟ್ಟು | ಕಳೆದ ತಿಂಗಳು | ಪ್ರಸಕ್ತ ತಿಂಗಳು | ಒಟ್ಟು | ಕಳೆದ ತಿಂಗಳು | ಪ್ರಸಕ್ತ ತಿಂಗಳು | ಒಟ್ಟು | ಕಳೆದ ತಿಂಗಳು | ಪ್ರಸಕ್ತ ತಿಂಗಳು | ಒಟ್ಟು |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |

## ನಮೂನೆ-2

**2020-21ನೇ ಸಾಲಿನ _________ ಜಿಲ್ಲೆಯ ಕಡಿಮೆ ಗುಣಮಟ್ಟ ಹೊಂದಿರುವ ಮಾದರಿಗಳು ಮತ್ತು ಕೈಗೊಂಡಿರುವ ಕ್ರಮಗಳ ವಿವರ ದಿನಾಂಕ: 01-04-2020 ರಿಂದ _________ರ ಅಂತ್ಯದವರೆಗೆ (ಒಟ್ಟು ಮಾದರಿಗಳು)**

| ಕ್ರ. ಸಂ | ಪರಿವೀಕ್ಷಕರ ಹೆಸರು ಮತ್ತು ಪದನಾಮ | ಬೆಳೆ / ತಳಿಯ ಹೆಸರು | ಲಾಟ್ ನಂ. | ಬೀಜೋತ್ಪಾದಕರ ಹೆಸರು ಮತ್ತು ವಿಳಾಸ | ಬೀಜ ವಿತರಕರ ಹೆಸರು ಮತ್ತು ಪದನಾಮ | ಮಾದರಿ ತೆಗೆದ ದಿನಾಂಕ | ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿದ ದಿನಾಂಕ | ಪರೀಕ್ಷಾ ಕೇಂದ್ರದ ವರದಿ ದಿನಾಂಕ | ಕಡಿಮೆ ಗುಣಮಟ್ಟಕ್ಕೆ ಕಾರಣಗಳು |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |

| ಆಡಳಿತಾತ್ಮಕ ಕ್ರಮ | | | | | ಕಾನೂನು ಕ್ರಮ | | | | | ಷರಾ |
|---|---|---|---|---|---|---|---|---|---|---|
| ಮಾರಾಟ ತಡೆ ಆಜ್ಞೆ | ಬೀಜ ಮುಟ್ಟುಗೋಲು | ಇತರೆ ಕ್ರಮಗಳು | ಬೀಜ ವಿತರಕರ ಪರವಾನಗಿ | | ಯಾವ ಕಾಯಿದೆ ನಿಯಮಾವಳಿ ಪ್ರಕಾರ ಮೊಕದ್ದಮೆ ಹೂಡಲಾಗಿದೆ | ಮೊಕದ್ದಮೆ ಸಂಖ್ಯೆ ಮತ್ತು ದಿನಾಂಕ | ಯಾರ ವಿರುದ್ಧ ಮೊಕದ್ದಮೆ ಹೂಡಲಾಗಿದೆ | ಮೊಕದ್ದಮೆ ಇತ್ಯರ್ಥವಾದ ದಿನಾಂಕ ಮತ್ತು ತೀರ್ಮಾನ ವಿವರ (ಇತ್ಯರ್ಥವಾಗದಿದ್ದಲ್ಲಿ) | ಇತ್ಯರ್ಥವಾಗದಿದ್ದಲ್ಲಿ ವಿಚಾರಣೆಯ ಮುಂದಿನ ದಿನಾಂಕ | |
| | | | ಅಮಾನತ್ತು | ರದ್ದು | | | | | | |
| 11 | 12 | 13 | 14 | 15 | 16 | 17 | 18 | 19 | 20 | 21 |

**ನಮೂನೆ-3 ಕಳಪೆ ಬೀಜದಿಂದಾಗಿ ಬೆಳೆಗಳಲ್ಲಿ ಆಗಿರುವ ಹಾನಿ ಮತ್ತು ನಷ್ಟದ ಬಗ್ಗೆ ಜಿಲ್ಲೆ :**

**ಮಾಹೆ:**

| ಯಾರಿಂದ ದೂರು | ತಾಲ್ಲೂಕು | ಬೆಳೆ | ಬಿತ್ತಿದ ಕ್ಷೇತ್ರ | ಕಳಪೆ ಬೀಜದಿಂದಾಗಿ ಆದ | | ಬಂದ ದೂರುಗಳ ಸಂಖ್ಯೆ | ತೆಗೆದುಕೊಂಡ ಕ್ರಮ | ಸ್ಥಳ ಸಮೀಕ್ಷೆ ನಡೆಸಿದ ಸಮಿತಿ / ಅಧಿಕಾರಿ ವಿವರ | ಹಾನಿಗೊಳಗಾದ ರೈತರಿಗೆ ನೀಡಿದ ಉತ್ತರ /ಸಮಜಾಯಿಸಿ | ಗ್ರಾಹಕರ ವೇದಿಕೆಗೆ ಹೋಗಿದ್ದರೆ ವಿವರ | ಕಳಪೆ ಬೀಜ ವಿತರಕರ / ಉತ್ಪಾದಕರ ಮೇಲೆ ತೆಗೆದುಕೊಂಡ ಕಾನೂನು ಕ್ರಮ/ ಆಡಳಿತಾತ್ಮಕ ಕ್ರಮ |
|---|---|---|---|---|---|---|---|---|---|---|---|
| | | | | ಹಾನಿ ಹೆ.ಗಳಲ್ಲಿ | ನಷ್ಟದ ಪ್ರಮಾಣ | | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |
| | | | | | | | | | | | |
| | | | | | | | | | | | |